₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 12.09.2024 ಸಂಪುಟ: 09 ಸಂಚಿಕೆ: 262 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ



ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ

ಭಾರತ ಸೆಮಿಫೈನಲ್‌ಗೆ

ಬೀಜಿಂಗ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾರತ ತಂಡವು ಮಲೇಷ್ಯಾ ವಿರುದ್ಧ 8-1 ಗೋಲುಗಳ ಅಂತರದಿಂದ ಜಯಗಳಿಸಿತು. ಈ ಗೆಲುವಿನ ಮೂಲಕ 9 ಅಂಕ ಗಳಿಸಿದ ಭಾರತ ಸೆಮಿಫೈನಲ್ ಪ್ರವೇಶಿಸಿದೆ.

ಸಮಾಚಾರ ಸಣ್ಣದಲ್ಲ

ಕನ್ನಡ ಮಾತಾಡಿದ್ದಕ್ಕೆ ಕಾರ್ಮಿಕನ ಮೇಲೆ ಹಲ್ಲೆ

ಆನೇಕಲ್: ಕನ್ನಡ ಮಾತನಾಡಿದ್ದಕ್ಕೆ ಕಾರ್ಮಿಕನ ಮೇಲೆ ಉತ್ತರ ಪ್ರದೇಶ ಮೂಲದ ಮೂವರಿಂದ ಮಾರಣಾಂತಿಕ ಹಲ್ಲೆ ನಡೆದ ಘಟನೆ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಪಟ್ಟಣದಲ್ಲಿ ನಡೆದಿದೆ.

ಹಲ್ಲೆ ಮಾಡಿದ ಯುಪಿ ಮೂಲದ ಮೂವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಆನೇಕಲ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ. ಹಿಂದಿ ಮಾತನಾಡು ಎಂದು ಕಾರ್ಮಿಕ ಶಿವಲಿಂಗ ಮೇಲೆ ಮಾರಣಾಂತಿ ಕವಾಗಿ ಹಲ್ಲೆ ಮಾಡಲಾಗಿದೆ. ಹಲ್ಲೆಗೊಳಗಾದ ಕಾರ್ಮಿಕ ಶಿವಲಿಂಗ ಕೃಷ್ಣಮೂರ್ತಿ ಕಾರ್ಖಾನೆಯಲ್ಲಿ ಮಗ್ಗದ ಕೆಲಸ ಮಾಡುತ್ತಿದ್ದ. ಈ ಕಾರ್ಖಾನೆಯಲ್ಲೇ ಉತ್ತರ ಪ್ರದೇಶದ ಮೂವರು ಕೆಲಸ ಮಾಡುತ್ತಿದ್ದರು. ನಮ್ಮ ಜತೆ ಹಿಂದಿಯಲ್ಲಿ ಮಾತಾಡು, ಕನ್ನಡದಲ್ಲಿ ಮಾತನಾಡಬೇಡ ಎಂದು ಶಿವಲಿಂಗ ಜತೆ ಕಿರಿಕ್ ಮಾಡಿ ಹಲ್ಲೆ ಮಾಡಿದ್ದಾರೆ. ಕಬ್ಬಿಣದ ರಾಡ್, ಮಗ್ಗದ ವಸ್ತುಗ ಳಿಂದ ಶಿವಲಿಂಗನ ಮೇಲೆ ಹಲ್ಲೆ ಮಾಡಲಾಗಿದ್ದು, ತಲೆ, ಕಿವಿ ಭಾಗಕ್ಕೆ ಗಾಯಗಳಾಗಿವೆ. ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದು, ಬಳಿಕ ಹೆಚ್ಚುವರಿ ಚಿಕಿತ್ಸೆಗಾಗಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ.

ಟಿಪ್ಪರ್ ಹರಿದು ಸವಾರ ಸಾವು

ಬೆಂಗಳೂರು: ಟಿಪ್ಪರ್ ಲಾರಿ ಹರಿದು ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ಬೆಂಗಳೂರಿನ ನೆಲಮಂಗಲ ತಾಲೂಕಿನ ಬಿಲ್ಲಿನಕೋಟೆಯ ಬಳಿ ನಡೆದಿದೆ. ಟಿಪ್ಪರ್ ಲಾರಿ ಮತ್ತು ಬೈಕ್ ಡಿಕ್ಕಿ ಹೊಡೆದಿದೆ. ಬೈಕ್ ಸವಾರನ ಮೇಲೆ ಟಿಪ್ಪರ್ ಲಾರಿ ಹರಿದು ಬೈಕ್ ಸವಾರ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾನೆ. ಮೃತ ಬೈಕ್ ಚಾಲಕನ ಗುರುತು ಪತ್ತೆಯಾಗಿಲ್ಲ. ನೆಲಮಂಗಲ ಮೂಲಕ ತುಮಕೂರು ಕಡೆ ಸಾಗುವ ರಸ್ತೆಯಲ್ಲಿ ಈ ಅವಘಡ ಸಂಭವಿಸಿದೆ. ಟಿಪ್ಪರ್ ಲಾರಿ ಚಾಲಕನ ಅತಿವೇಗ ಅಪಘಾತಕ್ಕೆ ಕಾರಣವಾಗಿದ್ದು, ಲಾರಿ ಬಿಟ್ಟು ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಸ್ಥಳಕ್ಕೆ ನೆಲಮಂಗಲ ಸಂಚಾರಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಚಾಲಕನ ಬಂಧನ

ಬೆಂಗಳೂರು: ರಾತ್ರಿ ವೇಳೆ ಮಲಗಿದ್ದ ವ್ಯಕ್ತಿಯನ್ನು ಗಮನಿಸದೆ, ಆತನ ಮೇಲೆ ಬಸ್ ಹತ್ತಿಸಿ ಸಾವಿಗೆ ಕಾರಣನಾಗಿದ್ದ ಚಾಲಕನನ್ನು ನಗರದ ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ. ವಿವೇಕ್ ಬಂಧಿತ ಚಾಲಕ. ಶ್ರೀನಿವಾಸಯ್ಯ ಮೃತ ವ್ಯಕ್ತಿ. ಮಳವಳ್ಳಿ ಮೂಲದ ವಿವೇಕ್ ದೊಡ್ಡಬಳ್ಳಾಪುರದಲ್ಲಿ

ರುವ ಶ್ರೀ ಟ್ರಾವೆಲ್ಸ್ ಕಂಪನಿಯ ಬಸ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಕಂಪನಿ ಉದ್ಯೋಗಿಗಳನ್ನು ಡ್ರಾಪ್ ಅಂಡ್ ಪಿಕಪ್ ಮಾಡುತ್ತಿದ್ದ. ಇದೇ ತಿಂಗಳು 5ರ ರಾತ್ರಿ ಕಾಮಾಕ್ಷಿಪಾಳ್ಯ ಬಸ್ ನಿಲ್ದಾಣ ಬಳಿ ಬಸ್ ನಿಲ್ಲಿಸಿದ್ದ. ಅದೇ ಬಸ್‌ನಲ್ಲಿ ರಾತ್ರಿ ಮಲಗಿದ್ದ. ಮಾರನೇ ದಿನ ಮುಂಜಾನೆ 6 ಗಂಟೆ ಸುಮಾರಿಗೆ ಎದ್ದು, ನೇರವಾಗಿ ಬಸ್ ಚಾಲನೆ ಮಾಡಿದ್ದ. ನಿಲ್ಲಿಸಿದ್ದ ಬಸ್ ಪಕ್ಕದಲ್ಲಿ ಮಲಗಿದ್ದ ಶ್ರೀನಿವಾಸಯ್ಯ ನಿದ್ರೆ ಮಂಪರಿ ನಲ್ಲಿ ಚಕ್ರದ ಕೆಳಗೆ ಹೊರಳಾಡಿದ್ದನ್ನು ಗಮನಿಸದೆ, ವಿವೇಕ್ ಬಸ್ ಚಲಾಯಿಸಿದ ಪರಿಣಾಮ ತಲೆ ಮೇಲೆ ಚಕ್ರ ಹರಿದು ಶ್ರೀನಿವಾಸಯ್ಯ ಸಾವನ್ನಪ್ಪಿದ್ದರು. ಅಪಘಾತವೆಸಗಿ ರುವ ಬಗ್ಗೆ ಚಾಲಕನ ಗಮನಕ್ಕೆ ಬಂದಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇತಿಹಾಸದಲ್ಲಿ ಮೊದಲ ಬಾರಿಗೆ ಕೇಂದ್ರದ ಜಿಎಸ್‌ಟಿ ಅಧಿಕಾರಿಗಳ ಸೆರೆ | ಉದ್ಯಮಿಯೊಬ್ಬರ ಪ್ರಕರಣ ಮುಚ್ಚಿಹಾಕಲು 1.5 ಕೋಟಿ ಲಂಚ ಪಡೆದಿದ್ದ ಅಧಿಕಾರಿಗಳು

ಜಿಎಸ್‌ಟಿ ಅಧಿಕಾರಿಗಳನ್ನೇ ಬಂಧಿಸಿದ ಸಿಸಿಬಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉದ್ಯಮಿಯೊಬ್ಬರ ವಿರುದ್ಧ ಕೇಳಿಬಂದಿದ್ದ ಜಿಎಸ್‌ಟಿ ಅಕ್ರಮ ಪ್ರಕರಣವನ್ನು ಮುಚ್ಚಿಹಾಕಲು 1.5 ಕೋಟಿ ಲಂಚ ಪಡೆದು ಪರಾರಿಯಾಗಿದ್ದ ಜಿಎಸ್‌ಟಿ ಇಲಾಖೆಯ ನಾಲ್ವರು ಅಧಿಕಾರಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜಿಎಸ್‌ಟಿ ಅಧಿಕಾರಿಗಳನ್ನು ರಾಜ್ಯ ಪೊಲೀಸರು ಬಂಧಿಸಿದ ಘಟನೆ ನಡೆದಿದೆ.

ಅಧಿಕಾರದ ಪ್ರಭಾವ ಬಳಸಿ ಉದ್ಯಮಿಯೊಬ್ಬರ ಕಂಪನಿ ಮೇಲೆ ದಾಳಿ ನಡೆಸಿ ಹಲ್ಲೆ ಮಾಡಿ ಅಕ್ರಮವಾಗಿ 1.5 ಕೋಟಿ ರುಪಾಯಿ ಸುಲಿಗೆ ಮಾಡಿದ್ದ ಆರೋಪದಲ್ಲಿ ಒಬ್ಬ ಮಹಿಳೆ ಸೇರಿ ನಾಲ್ವರು ಜಿಎಸ್‌ಟಿ ಅಧಿಕಾರಿಗಳನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಜೀವನ್ ಭೀಮಾನಗರದ ಜಿ.ಎಂ. ಪಾಳ್ಯದಲ್ಲಿ ನೆಲೆಸಿರುವ ಉದ್ಯಮಿ ಕೇಶವ್ ತಕ್ ನೀಡಿದ ದೂರಿನ ಮೇರೆಗೆ ಬೆಂಗಳೂರು ಜಿಎಸ್‌ಟಿ ವಿಭಾಗದಲ್ಲಿ ಗುಪ್ತಚರ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಅಭಿಷೇಕ್, ಮನೋಜ್ , ನಾಗೇಶ್ ಬಾಬು ಹಾಗೂ ಸೋನಾಲಿ ಅವರನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ಪ್ರಕರಣವನ್ನು ಸಿಸಿಬಿಗೆ ಹಸ್ತಾಂತರಿಸಿದ್ದಾರೆ.

ದೂರು ನೀಡಿದ್ದ ಉದ್ಯಮಿ: ಬೆಂಗಳೂರಿನ ಉದ್ಯಮಿಯೊಬ್ಬನಿಗೆ ಜಿಎಸ್‌ಟಿ ಅಧಿಕಾರಿಗಳು 1.5

ಕೋಟಿ ಬೇಡಿಕೆ ಇಟ್ಟಿದ್ದರು. ಈ ಕುರಿತಂತೆ ಉದ್ಯಮಿ ಸ್ಥಳೀಯ ಬೈಯಪ್ಪನಹಳ್ಳಿ ಪೊಲೀಸರಿಗೆ ಆ.31ರಂದು ದೂರು ನೀಡಿದ್ದರು. ದೂರಿನಲ್ಲಿ ಪ್ರಮುಖವಾಗಿ ಜಿಎಸ್‌ಟಿ ಅಧಿಕಾರಿಗಳು, ತಾವು ಇ.ಡಿ. ಅಧಿಕಾರಿಗಳು ಎಂದು ಹೇಳಿಕೊಂಡು ಬೆದರಿಕೆ ಹಾಕಿದ್ದರು.

ತೆರಿಗೆ ವಂಚನೆ ಮಾಡಿದ್ದು, ಇ.ಡಿ. ದಾಳಿ ಮಾಡಬಾರದೆಂದರೆ 1.5 ಕೋಟಿ ರೂ. ಹಣ ನೀಡಬೇಕು ಎಂದು ಬೇಡಿಕೆ ಇಟ್ಟಿದ್ದರು. ಉದ್ಯಮಿ ಕೇಶವ್ ಹಣ ಕೊಡದಿದ್ದಾಗ ಆತನ ಕಚೇರಿಗೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ಮಾಡುವುದಾಗಿ ಉದ್ಯಮಿಯನ್ನು ಕೂಡಿ ಹಾಕಿದ್ದರು. ಕಂಪನಿಯನ್ನು ನಕಲಿಯಾಗಿ ನಡೆಸುತ್ತಿದ್ದೀರಿ. ಆದ್ದರಿಂದ ನಿಮ್ಮನ್ನು ಬಂಧಿಸುತ್ತೇವೆ ಎಂದು ಕಾರಿನಲ್ಲಿ ಕರೆದೊಯ್ದಿದ್ದರು. ನಂತರ, ಕಚೇರಿಯ ಒಳಗಿಟ್ಟುಕೊಂಡು ಒಂದೂವರೆ ಕೋಟಿ ರು. ನೀಡಿದರೆ ನಿನ್ನನ್ನು ಬಿಟ್ಟು ಕಳಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಕೇಶವ್ ಮನೆ ಮೇಲೆ ದಾಳಿ ನಡೆಸಿದ್ದ ಜಿಎಸ್‌ಟಿ ಅಧಿಕಾರಿಗಳು, ಅತಿಕ್ರಮ ಪ್ರವೇಶಮಾಡಿ ಮೊಬೈಲ್ ಫೋನ್ ಹಾಗೂ ಕೆಲವು ವಸ್ತುಗಳನ್ನ ತೆಗೆದುಕೊಂಡು ಹೋಗಿದ್ದರು. ನಂತರ ಕೇಶವ್, ಮುಕೇಶ್ ಜೈನ್, ಪವನ್ ತಕ್, ರಾಕೇಶ್ ಮಾಣಕ್ ಚಾಂದಿನಿ ಅವರನ್ನು ಬಲವಂತವಾಗಿ ಕರೆದೊಯ್ದಿದ್ದಾರೆ. ಬಲವಂತವಾಗಿ ಇಂದಿರಾನಗರಕ್ಕೆ ಕರೆದೊಯ್ದು ಫೋನ್ ಫ್ಲೈಟ್ ಮೋಡ್ ಹಾಕಿಸಿದ್ದ ಅಧಿಕಾರಿಗಳು. ನಂತರ ರೋಷನ್ ಜೈನ್ ಎಂಬಾತನಿಗೆ ಕರೆಮಾಡಿಸಿ 3 ಕೋಟಿ ಹಣ ತರಲು ಸೂಚನೆ. ವಾಟ್ಸ್‌ಆ್ಯಪ್ ಕರೆಮಾಡಿ ಹಣ ತರಲು ಸೂಚನೆ ನೀಡಿದ್ದರು.

ಯಾವ ಹುದ್ದೆಯ ಅಧಿಕಾರಿಗಳು ಬಂಧನ

- ಸೂಪರಿಂಟೆಂಡೆಂಟ್ ಆಫ್ ಸೆಂಟ್ರಲ್ ಟ್ಯಾಕ್ಸ್, ದಕ್ಷಿಣ ಆಯುಕ್ತಾಲಯ ಬೆಂಗಳೂರು.
- ಸೀನಿಯರ್ ಇಂಟಲಿಜೆನ್ಸ್ ಆಫೀಸರ್, ಜಿಎಸ್‌ಟಿ ಇಂಟಲಿಜೆನ್ಸ್ ಬೆಂಗಳೂರು.
- ಸೀನಿಯರ್ ಇಂಟಲಿಜೆನ್ಸ್ ಆಫೀಸರ್, ಜಿಎಸ್‌ಟಿ ಇಂಟಲಿಜೆನ್ಸ್ ಬೆಂಗಳೂರು.
- ಇಂಟಲಿಜೆನ್ಸ್ ಆಫೀಸರ್, ಜಿಎಸ್‌ಟಿ ಇಂಟಲಿಜೆನ್ಸ್ ಬೆಂಗಳೂರು.

ದೂರಿನಲ್ಲೇನಿದೆ?

ಜೀವನ್ ಭೀಮಾನಗರದಲ್ಲಿ ಮೆಕ್ರೊ ಸಲ್ಯೂಷನ್ ಪ್ರೈವೇಟ್ ಕಂಪನಿ ನಡೆಸುತ್ತಿದ್ದ ಕೇಶವ್ ತಕ್ ಮನೆಗೆ ಕಳೆದ ಆಗಸ್ಟ್ 31ರಂದು ಆರೋಪಿಗಳು ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಜಿಎಸ್‌ಟಿ ಅಧಿಕಾರಿಗಳು ಎಂದು ಪರಿಚಯಿಸಿಕೊಂಡು ಬಂದಿದ್ದಾರೆ. ಏಕಾಏಕಿ ಮೊಬೈಲ್ ಸೇರಿದಂತೆ ಇನ್ನಿತರ ವಸ್ತುಗಳನ್ನ ವಶಪಡಿಸಿಕೊಂಡು ಅಕ್ರಮವಾಗಿ ಕಂಪನಿ ನಡೆಸುತ್ತಿದ್ದೀರಾ ಎಂದು ಆರೋಪಿಸಿ ಕೇಶವ್ ಮನೆಯಲ್ಲಿದ್ದ ಪವನ್, ಮುಕೇಶ್, ರಾಕೇಶ್ ಅವರನ್ನು ಬಲವಂತವಾಗಿ ಎಳೆದುಕೊಂಡು ಎರಡು ಕಾರಿನಲ್ಲಿ ಕೂರಿಸಿದ್ದರು.
ಕಚೇರಿ ವಿಲಾಸಕ್ಕೆ ಕರೆತಂದು ಹಲ್ಲೆ ಮಾಡಿ ಪ್ರತ್ಯೇಕ ಕೊಠಡಿಯಲ್ಲಿ ಕೂಡಿಹಾಕಿದ್ದರು. ಹಿರಿಯ ಜಿಎಸ್‌ಟಿ ಅಧಿಕಾರಿ ಎಂದು ಪರಿಚಯಿಸಿಕೊಂಡ ಮನೋಜ್ ,ಇಂದಿರಾನಗರಕ್ಕೆ ಕೇಶವ್‌ನನ್ನು ಕರೆದೊಯ್ದಿದ್ದ. ಸ್ನೇಹಿತ ರೋಷನ್ ಜೈನ್‌ಗೆ ವಾಟ್ಸ್‌ಆ್ಯಪ್ ಕರೆ ಮಾಡಿಸಿ 3 ಕೋಟಿ ರುಪಾಯಿ ತರುವಂತೆ ಒತ್ತಾಯಿಸಿ ಹಲ್ಲೆ ಮಾಡಿದ್ದರು. ಸ್ನೇಹಿತನಿಗೆ 3 ಕೋಟಿ ಒಗ್ಗೂಡಿಸಲು ಸಾಧ್ಯವಾಗಿರಲಿಲ್ಲ. ಸೆ.1ರ ಮುಂಜಾನೆ 2.30ರ ವೇಳೆ ಹೇಗೋ 1.50 ಕೋಟಿ ರು.ಹಣ ಹೊಂದಿಸಿದ್ದ. ಆರೋಪಿತ ಅಧಿಕಾರಿಗಳು ಒಂದೂವರೆ ಕೋಟಿ ಹಣ ಪಡೆದು ಪರಾರಿಯಾಗಿದ್ದರು ಎಂದು ದೂರಿನಲ್ಲಿ ಉದ್ಯಮಿ ವಿವರಿಸಿದ್ದರು. 1.50 ಕೋಟಿ ರು. ವಸೂಲಿ ಬಗ್ಗೆ ನೈಜತೆ ಬಗ್ಗೆ ಅರಿಯಲು ಉದ್ಯಮಿ ಪರಿಶೀಲಿಸಿದಾಗ ಜಿಎಸ್‌ಟಿ ಅಧಿಕಾರಿಗಳೇ ಹಣ ಸುಲಿಗೆ ಮಾಡಿರುವುದು ತಿಳಿದುಬಂದಿದೆ. ಪ್ರಕರಣ ದಾಖಲಿಸಿ ಬಂಧಿಸಿದ್ದ ಬೈಯಪ್ಪನಹಳ್ಳಿ ಪೊಲೀಸರು ನಗರ ಪೊಲೀಸ್ ಆಯುಕ್ತರ ಆದೇಶ ಮೇರೆಗೆ ಪ್ರಕರಣವನ್ನು ಸಿಸಿಬಿಗೆ ಹಸ್ತಾಂತರಿಸಿರುವುದಾಗಿ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಆಗಸ್ಟ್ 31 ರಂದು ಬೇರೆ ಬೇರೆ ಕಡೆ ಕರೆದೊಯ್ದಿದ್ದ ಅಧಿಕಾರಿಗಳು, ನಂತರ ರೋಷನ್ ಎಂಬಾತನಿಗೆ ಕರೆಮಾಡಿ ಹಣ ತರಲು ಡಿಮಾಂಡ್ ಮಾಡಿದ್ದಾರೆ. ಈ ವೇಳೆ ನಾಲ್ವರ ಮೇಲೆ ಹಲ್ಲೆ ನಡೆಸಿದ್ದಾರೆ. ನಂತರ 1.5 ಕೋಟಿ ಹಣ ನೀಡಿದ್ದ ರೋಷನ್. ಮುಖೇಶ್ ಜೈನ್ ವಾಪಸ್ ಕಳುಹಿಸಿ ಹಣ ಸಂಗ್ರಹಿಸಿಕೊಂಡಿದ್ದಾರೆ. ನಾಲ್ವರಿಂದ ಸಹಿ ಪಡೆದು ಮಹಜರು ಕಾಪಿ ಬಿಟ್ಟುಹೋಗಿದ್ದ ಅಧಿಕಾರಿಗಳ ವಿರುದ್ಧ ಹಲ್ಲೆ, ಬೆದರಿಕೆ, ಹಣ ಪಡೆದ ಬಗ್ಗೆ ದೂರು ಬೈಯಪ್ಪನಹಳ್ಳಿ ಪೊಲೀಸ್ ಠಾಣೆಗೆ ದೂರು. ಪೊಲೀಸರ ತನಿಖೆ ವೇಳೆ ಮೇಲ್ನೋಟಕ್ಕೆ ಅನುಮೋದನೆ ಇಲ್ಲದೆ ದಾಳಿ ನಡೆದಿದ್ದು ಬೆಳಕಿಗೆ ಬಂದಿದೆ.

ಪುರುಷರ ವಿರುದ್ಧ ದೌರ್ಜನ್ಯ ಪ್ರಕರಣ; ಮಾಹಿತಿ ನೀಡಲು ಸೂಚನೆ

ಬೆಂಗಳೂರು: ಹಲವು ಪುರುಷರ ವಿರುದ್ಧ ಲೈಂಗಿಕ ಕಿರುಕುಳ ಮತ್ತು ದೌರ್ಜನ್ಯ ಆರೋಪದಲ್ಲಿ 9 ದೂರುಗಳನ್ನು ದಾಖಲಿಸಿರುವ ಮಹಿಳೆ ಕುರಿತಂತೆ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡುವಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು(ಡಿಜಿಪಿ) ಮತ್ತು ಪೊಲೀಸ್

ಅಪರಾಧ ಸುದ್ದಿಗಳು

ಮಹಾನಿರೀಕ್ಷಕರು (ಐಜಿಪಿ)ಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ದೂರುದಾರ ಮಹಿಳೆಯಿಂದ ನೊಂದ ಹತ್ತನೇ ಪತಿ ಹಾಸನ ಜಿಲ್ಲೆಯ ಸಕಲೇಶಪುರದ ಬಾಳಗದ್ದೆಯ ಪಿ.ಕೆ.ವಿವೇಕ ಮತ್ತವರ ಕುಟುಂಬದ ಸದಸ್ಯರ ವಿರುದ್ಧ ತನ್ನ ಪತ್ನಿ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿದೆ.

ಎಲ್ಲ ಠಾಣೆಗಳಿಗೆ ಮಾಹಿತಿ ನೀಡಿ: ಹಲವು ಪುರುಷರ ವಿರುದ್ಧ ಈಗಾಗಲೇ ಲೈಂಗಿಕ ದೌರ್ಜನ್ಯ, ಅತ್ಯಾಚಾರ, ಪಿತೂರಿ ಮತ್ತು ಐಪಿಸಿ ಸೆಕ್ಷನ್ 498ಎ(ಕೌಟುಂಬಿಕ ದೌರ್ಜನ್ಯಕ್ಕೆ ಶಿಕ್ಷೆ)ಅಡಿ 9 ಪ್ರಕರಣಗಳನ್ನು ದಾಖಲಿಸಿರುವ ಮಹಿಳೆ, ಮತ್ತೆ 11ನೇ ಕೇಸ್ ದಾಖಲಿಸುವುದನ್ನು ತಡೆಯಬೇಕಾದರೆ ಆಕೆಯ ಬಗ್ಗೆ ಎಲ್ಲ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಬೇಕು ಎಂದು ನ್ಯಾಯಪೀಠ ತಿಳಿಸಿದೆ. ಅರ್ಜಿದಾರರ ವಾದ ಆಲಿಸಿದ ಬಳಿಕ ನ್ಯಾಯಾಲಯ, ಪ್ರತಿವಾದಿ ಮಹಿಳೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಮ್ಮ ಅಹವಾಲು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಆದರೆ ಆಕೆ ಹಾಜರಾಗದ ಹಿನ್ನೆಲೆಯಲ್ಲಿ ನ್ಯಾಯಾಲಯ, ಅರ್ಜಿದಾರರ ವಿರುದ್ಧ ಕುಶಾಲನಗರ ಪೊಲೀಸ್ ಠಾಣೆಯಲ್ಲಿ 2022ರಲ್ಲಿ ದಾಖಲಿಸಿದ್ದ ಪ್ರಕರಣವನ್ನು ರದ್ದುಗೊಳಿಸಿದೆ.

ಪರಿಶೀಲಿಸಿ ಕ್ರಮ ಕೈಗೊಳ್ಳಿ: ಅಲ್ಲದೇ, ದೂರುದಾರ ಮಹಿಳೆಯ ವಿವರಗಳು ಈಗಾಗಲೇ ಹಲವು ಪೊಲೀಸ್ ಠಾಣೆಗಳಲ್ಲಿ ಲಭ್ಯವಿದೆ. ಹಾಗಾಗಿ ಆ ಮಹಿಳೆ ಮತ್ತೆ ಯಾವುದಾದರೂ ಪುರುಷರ ವಿರುದ್ಧ ಪ್ರಕರಣ ದಾಖಲಿಸಲು ಬಂದರೆ, ಅಂತಹ ಸಮಯದಲ್ಲಿ ಪೊಲೀಸರು ಸುಮ್ಮನೆ ಕೇಸು ದಾಖಲಿಸದೇ ಆಕೆಯ ದೂರಿನ ವಿಚಾರದ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ ನಂತರವೇ ಮುಂದಿನ ಕ್ರಮ ಜರುಗಿಸಬೇಕು ಎಂದು ಪೀಠ ಸೂಚಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಮೂರ್ತಿ ಡಿ.ನಾಯಕ್, ಮಹಿಳೆ ಈ ರೀತಿ ಅನಗತ್ಯ ಮತ್ತು ಕ್ಷುಲ್ಲಕ ದೂರುಗಳನ್ನು ನೀಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ ಎಂದು ಹಿಂದಿನ 9 ಕೇಸ್‌ಗಳ ವಿವರಗಳನ್ನು ಒದಗಿಸಿ ಅರ್ಜಿದಾರರ ವಿರುದ್ಧ ಪ್ರಕರಣ ರದ್ದುಗೊಳಿಸಬೇಕೆಂದು ಕೋರಿದರು.

ವ್ಯಕ್ತಿಗಳಿಗೆ ಕಿರುಕುಳ: ಹಲವು ಪುರುಷರು ಮತ್ತು ಅವರ ಕುಟುಂಬದವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ಮಹಿಳೆ ದಾಖಲಿಸಿದ್ದಾರೆ. ಆಕೆಯ ಉದ್ದೇಶ ಆ ವ್ಯಕ್ತಿಗಳಿಗೆ ಕಿರುಕುಳ ನೀಡುವುದು. ಆದರೆ, ಎಲ್ಲಾ ಪ್ರಕರಣಗಳಲ್ಲಿ ಆರೋಪಿಗಳು ಬಂಧನಕ್ಕೆ ಒಳಗಾಗಿ ನಂತರ ಜಾಮೀನಿನ ಮೇಲೆ ಹೊರಬಂದು ವಿಚಾರಣೆ ಎದುರಿಸಿ ಖುಲಾಸೆಯಾಗಿದ್ದಾರೆ ಎಂಬ ಅಂಶವನ್ನು ನ್ಯಾಯಾಲಯ ದಾಖಲಿಸಿದೆ.

ಆ ಮಹಿಳೆಯ ಬಲೆಗೆ 10ಕ್ಕೂ ಅಧಿಕ ಪುರುಷರು ಬಿದ್ದಿದ್ದಾರೆ. ಕೆಲವರ ಮದುವೆ ಆಗಿದೆ, ಕೆಲವರು ಮದುವೆ ಆಗಿಲ್ಲ, ಆದರೂ ಕೇಸು ಎದುರಿಸುವಂತಾಗಿದೆ. ಹನಿ ಟ್ರ್ಯಾಪ್ ಸ್ವಭಾವದ ಆಕೆ ಕಾರ್ಯವಿಧಾನ ಇದೇ ಆಗಿದೆ. ಪ್ರತಿ ಪ್ರಕರಣದಲ್ಲೂ ಆಕೆಯ ನಡೆ ನರಿಯಂತೆ ಸಂಶಯಾಸ್ಪದವಾಗಿದೆ. ಕಳೆದೊಂದು ದಶಕದಲ್ಲಿ ಹತ್ತು ಮಂದಿ ವಿರುದ್ಧ ಮದುವೆ ಮಾಡಿಕೊಂಡು ಮೋಸ, ಲೈಂಗಿಕ ದೌರ್ಜನ್ಯ ಹೀಗೆ ಹಲವು ಬಗೆಯ ದೂರುಗಳನ್ನು ದಾಖಲಿಸಿದ್ದಾರೆ. ಆ ದೂರುಗಳಲ್ಲಿ ಕಿಂಚಿತ್ತೂ ಸತ್ಯಾಂಶವಿಲ್ಲ, ಹಾಗಾಗಿ ಪೊಲೀಸರು ನಕಲಿ ಕೇಸುಗಳ ಬಗ್ಗೆ ತನಿಖೆ ನಡೆಸಬೇಕಾಗುತ್ತದೆ. ಇದರಿಂದ ಪೊಲೀಸರ ಹಾಗೂ ನ್ಯಾಯಾಲಯಗಳ ಅಮೂಲ್ಯ ಸಮಯವೂ ವ್ಯರ್ಥವಾಗುತ್ತಿದೆ ಎಂದು ಪೀಠ ತಿಳಿಸಿದೆ.

ಕಾರು ಅಪಘಾತ: ಪ್ರಾಣಾಪಾಯದಿಂದ ಕಿರಣ್ ಪಾರು

ಬೆಂಗಳೂರು: ನಟ ಕಿರಣ್ ರಾಜ್ ಓಡಿಸುತ್ತಿದ್ದ ಕಾರು ಅಪಘಾತವಾಗಿದ್ದು, ಕಿರಣ್‌ಗೆ ಗಂಭೀರ ಗಾಯವಾಗಿದೆ. ಪರಿಣಾಮ ಅವರನ್ನು ಕೆಂಗೇರಿ ಬಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಕಿರಣ್ ರಾಜ್ ಅಭಿನಯದ ರಾನಿ ಚಿತ್ರ ಇದೇ ಶುಕ್ರವಾರ ತೆರೆಗೆ ಬರುತ್ತಿದೆ. ಹಾಗಾಗಿ ಚಿತ್ರದ ಪ್ರಚಾರ ಕಾರ್ಯದಲ್ಲಿ ಭಾಗಿಯಾಗಿದ್ದ ಕಿರಣ್, ಅಲ್ಲಿಂದ ಸಿದ್ದೇಶ್ವರ ಆಶ್ರಮಕ್ಕೆ ತೆರಳುತ್ತಿದ್ದರು. ಈ ವೇಳೆ ಕೆಂಗೇರಿ ಬಳಿಯಲ್ಲಿ ಮುಂಗುಸಿ ಕಾರಿಗೆ ಅಡ್ಡಬಂದಿದ್ದು ಅದನ್ನು ತಪ್ಪಿಸಲು ಹೋಗಿ ರಸ್ತೆಯ ಡಿವೈಡರ್‌ಗೆ ಕಾರು ಡಿಕ್ಕಿಯಾಗಿದೆ. ಇದರಿಂದ ಕಿರಣ್ ಎದೆ ಭಾಗ, ಭುಜ ಹಾಗೂ ಕೈ ಭಾಗಕ್ಕೆ ಗಂಭೀರ ಗಾಯಗಳಾಗಿವೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಕಿರಣ್ ಅವರನ್ನು ಕೆಂಗೇರಿ ಬಳಿಯ ಖಾಸಗಿ ಆಸ್ಪತ್ರೆಗೆ

ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಸದ್ಯ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು ಚಿಕಿತ್ಸೆ ಮುಂದುವರಿಸಲಾಗಿದೆ.

ಕಿರಣ್ ಕಿರುತೆರೆಯಲ್ಲಿ ಪ್ರಸಾರವಾಗುತ್ತಿದ್ದ ಕನ್ನಡತಿ ಧಾರಾವಾಹಿಯಲ್ಲಿ ನಟಿಸಿ ಮನಗೆದ್ದಿದ್ದರು. ಬಳಿಕ ಬಡ್ಡೀಸ್ ಚಿತ್ರದಲ್ಲಿಯೂ ನಾಯಕನಾಗಿ ನಟಿಸಿದ್ದರು. ಗುರುತೇಜ್ ಶೆಟ್ಟಿ ನಿರ್ಮಾಣದ ರಾನಿ ಚಿತ್ರದಲ್ಲಿಯೂ ನಾಯಕನಾಗಿ ಅಭಿನಯಿಸಿದ್ದುಯ, ಚಿತ್ರ ಬಿಡುಗಡೆಯ ಹೊಸ್ತಿಲಲ್ಲಿ ಇರುವಾಗ ಅಪಘಾತ ಸಂಭವಿಸಿದೆ.

> ಯಾರೂ ಭಯಪಡುವ ಅಗತ್ಯವಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ವೈದ್ಯರು ಹಾಗೂ ಸಿಬ್ಬಂದಿ ನನ್ನ ಮೇಲೆ ನಿಗಾ ವಹಿಸಿ ಚಿಕಿತ್ಸೆ ನೀಡುತ್ತಿದ್ದಾರೆ. ನಿಮ್ಮೆಲ್ಲರ ಹಾರೈಕೆಯಿಂದ ನಾನು ಆದಷ್ಟು ಬೇಗ ಚೇತರಿಸಿಕೊಳ್ಳುತ್ತೇನೆ.
>
> -ಕಿರಣ್ ರಾಜ್ ನಟ

ಬೃಂದಾವನ ನಟ ವರುಣ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಖಾಸಗಿ ಫೋಟೋ ಹಾಗೂ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡುವುದಾಗಿ ಮಾಜಿ ಪ್ರೇಯಸಿಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪದ ಮೇಲೆ ಕನ್ನಡದ ಕಿರುತೆರೆ ನಟನ ವಿರುದ್ಧ ನಗರ ಪಶ್ಚಿಮ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಕಿರುತೆರೆ ನಟ ವರುಣ್ ಆರಾಧ್ಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಬೃಂದಾವನ ಧಾರಾವಾಹಿಯಲ್ಲಿ ವರುಣ್ ಆರಾಧ್ಯ ನಟಿಸಿದ್ದರು. ಮೂಲತಃ ಯೂಟ್ಯೂಬರ್ ಆಗಿದ್ದು, ರೀಲ್ಸ್ ವಿಡಿಯೊ ಮಾಡಿ ಜನಪ್ರಿಯರಾಗಿದ್ದರು. ಸಂತ್ರಸ್ತೆ, ಇನ್‌ಸ್ಟಾಗ್ರಾಮ್‌ನ ಜಾಹೀರಾತು ವಿಭಾಗದಲ್ಲಿ ಕೆಲಸ ಮಾಡುವಾಗ 2019ರಲ್ಲಿ ಆರೋಪಿಯ ಪರಿಚಯವಾಗಿ ಸ್ನೇಹಕ್ಕೆ ತಿರುಗಿತ್ತು. ಕ್ರಮೇಣ ತಿರುಗಿ ಪರಸ್ಪರ ಇಬ್ಬರು ಪ್ರೀತಿಸಿದ್ದರು. ನಾಲ್ಕು ವರ್ಷಗಳಿಂದ ಪ್ರೀತಿಸುತ್ತಿದ್ದ ಜೋಡಿ ಮಧ್ಯೆ ವಿರಸವಾಗಿ ಕೆಲ ತಿಂಗಳಿಂದ ದೂರವಾಗಿದ್ದಾರೆ. ಪ್ರೀತಿಯಲ್ಲಿದ್ದಾಗ ಖಾಸಗಿ ಫೋಟೋ ಹಾಗೂ ವಿಡಿಯೊ ಸೆರೆಹಿಡಿದು ಕೊಂಡಿರುವುದು ಗಮನಕ್ಕೆ ಬಂದಿತ್ತು ಎಂದು ಸಂತ್ರಸ್ತೆ ದೂರಿದ್ದಾರೆ.

ಮೊಬೈಲ್ ಪರಿಶೀಲಿಸಿದಾಗ ಬೇರೆ ಹುಡುಗಿಯ ಖಾಸಗಿ ಫೋಟೋವನ್ನೂ ಇಟ್ಟುಕೊಂಡಿರುವುದು ಗೊತ್ತಾಗಿದೆ. ಈ ಬಗ್ಗೆ ಪ್ರಶ್ನಿಸಿದಾಗ ಬೆದರಿಕೆ ಹಾಕಿದ್ದರು. ಈ ಬಗ್ಗೆ ಯಾರಿಗಾದರೂ ಹೇಳಿದರೆ ನಿನ್ನ ಖಾಸಗಿ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಸಿದ್ದರು ಎಂದು ಯುವತಿ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕೆಂಪೇಗೌಡ ಬಡಾವಣೆಯಲ್ಲಿ 216 ಬದಲಿ ನಿವೇಶನ ಹಂಚಿಕೆ | ಬಿಡಿಎಯಿಂದ ಶಾಶ್ವತ ಪರಿಹಾರ

ಅರ್ಕಾವತಿ ಬಡಾವಣೆಯ ಬದಲಿ ನಿವೇಶನಕ್ಕೆ ಚಾಲನೆ

ಬೆಂಗಳೂರು: ಕಳೆದ ಹಲವು ವರ್ಷಗಳಿಂದ ನಿವೇಶನಕ್ಕಾಗಿ ಅಲೆದಾಡುತ್ತಿದ್ದ ಅರ್ಕಾವತಿ ನಿವೇಶನದಾರರಿಗೆ ಬದಲಿಯಾಗಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಹಂಚಿಕೆಗೆ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಚಾಲನೆ ನೀಡಿದ್ದಾರೆ. ವಿವಿಧ ಅಳತೆಯ ಒಟ್ಟು 216 ನಿವೇಶನಗಳಿಗೆ ಗಣಕೀಕೃತ ಹಂಚಿಕೆಗೆ ಮಾಡಲು ಬಿಡಿಎ ಮುಂದಾಗಿದೆ.

ಈ ವೇಳೆ ಮಾತನಾಡಿದ ಹ್ಯಾರಿಸ್, ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಮಂಜೂರಾದವರು ದಶಕಗಳಿಂದ ಸಮಸ್ಯೆ ಎದುರಿಸುತ್ತಿರುವುದು ಗಮನಕ್ಕೆ ಬಂದಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಮಂಜೂರಾಗಿ ರೀಡೂ, ಡಿನೋಟಿಫೈ ಸೇರಿದಂತೆ ವಿವಿಧ ಕಾರಣಗಳಿಂದ ಸಾವಿರಾರು ಮಂದಿ ನಿವೇಶನ ವಂಚಿತರಾಗಿದ್ದರು. ಕಳೆದ ಹಲವು ವರ್ಷಗಳಿಂದ ಬಿಡಿಎಗೆ ಅಲೆಯುತ್ತಿದ್ದರೂ ಅವರು ಬದಲಿ ನಿವೇಶನವನ್ನು ಪಡೆದುಕೊಳ್ಳಲು ಸಾಧ್ಯವಾಗಿರಲಿಲ್ಲ ಎಂದರು.

ಜೇಷ್ಠತೆ ಆಧಾರದಲ್ಲಿ ಹಂಚಿಕೆ: ಸಾಮಾನ್ಯವಾಗಿ ನಿವೇಶನ ಹಂಚಿಕೆ ವೇಳೆ ದಲ್ಲಾಳಿಗಳು, ಮಧ್ಯವರ್ತಿಗಳ ಹಸ್ತಕ್ಷೇಪ ಇರುತ್ತದೆ ಎಂಬ ಆರೋಪಗಳು ಕೇಳಿ ಬರುತ್ತಿದ್ದವು. ಆದರೆ, ಬಿಡಿಎ ಅಧಿಕಾರಿಗಳು ಈ ಬಾರಿ ಸಂಪೂರ್ಣ ಕಂಪ್ಯೂಟರೀಕೃತ ಲಾಟರಿ ವ್ಯವಸ್ಥೆ ಜಾರಿಗೆ ತಂದಿದ್ದರು. ಈ ಮೂಲಕ ಮಧ್ಯವರ್ತಿಗಳು ಮತ್ತು ದಲ್ಲಾಳಿಗಳಿಗೆ ಈ ಪ್ರಕ್ರಿಯೆ ವೇಳೆ ಅವಕಾಶ ಇರಲಿಲ್ಲ. ಮೂರ್ನಾಲ್ಕು ವಿಸ್ತೀರ್ಣದ ನಿವೇಶನಗಳನ್ನು ಹಂಚಿಕೆದಾರರ ಜೇಷ್ಠತೆ ಆಧಾರದಲ್ಲಿ ಹಂಚಿಕೆ ನಡೆಸಲಾಗಿದೆ.

ಆಯುಕ್ತರು, ಅಧಿಕಾರಿಗಳಿಂದ ಸಹಕಾರ: ಆಯುಕ್ತ ಎನ್ .ಜಯರಾಮ್ ಮತ್ತು ಬಿಡಿಎ ಅಧಿಕಾರಿಗಳು, ಎಂಜಿನಿಯರ್‌ಗಳು ಸಹಕಾರ ನೀಡಿದ್ದರಿಂದ ಅರ್ಕಾವತಿ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಲು ಸಾಧ್ಯವಾಗಿದೆ.

ಅರ್ಕಾವತಿ ನಿವೇಶನದಾರರಿಗೆ ಬದಲಿಯಾಗಿ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಸಂಬಂಧ ಅಧಿಕಾರಿಗಳೊಂದಿಗೆ ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಸಭೆ ನಡೆಸಿದರು.

> ಬದಲಿ ನಿವೇಶನ ಹಂಚಿಕೆ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿದ್ದು, ಯಾವುದೇ ಮಾನವ ಹಸ್ತಕ್ಷೇಪವಿಲ್ಲದೇ ಸಂಪೂರ್ಣ ಗಣಕೀಕೃತ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ. ಸುಮಾರು 150 ಮಂದಿ ಹಂಚಿಕೆದಾರರ ಸಮ್ಮುಖದಲ್ಲಿ ನಿವೇಶನ ಪ್ರಕ್ರಿಯೆ ಮಾಡಲಾಯಿತು. ಇನ್ನು 700 ನಿವೇಶನದಾರರಿಗೆ ಹಂಚಿಕೆ ಬಾಕಿ ಉಳಿದಿದೆ.
>
> ಎನ್.ಜಯರಾಮ್ ಬಿಡಿಎ ಆಯುಕ್ತ

PUBLIC NOTICE

Public are informed that, my client Vidyarani V. & Dayananda D. are the absolute owner of Property bearing Site No. 40, in Sy. No. 17, measuring 0-12 Guntas, in A Block, situated at Shettyhalli, Yeshwanthapura Hobli, Bangalore, BBMP, T. Dasarahalli Zone, measuring East to West 40 feet, North to South 35+30/2 , 1300 Sq. feet and bounded on: **East by** : Road, **West by** : Site NO. 41, **North by** : Road, **South by** : Site No. 39. and informing general public that Vidyarani V. & Dayananda D. intent to mortgage the said property in favour of M/s PIRAMAL CAPITAL AND HOUSING FINANCE LIMITED and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

KSR Associates
ADVOCATES & LEGAL CONSULTANTS
OFFICE # 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003
Email: raviksadvocate@gmail.com
Mobile: 99450 00789



2021ನೇ ಸಾಲಿಗಾಗಿ ಸಹಾಯಕ ಪ್ರಾಧ್ಯಾಪಕರ ನೇಮಕ ವಿಷಯದಲ್ಲಿ ಎದುರಾಗಿದ್ದ ಸಮಸ್ಯೆ ನಿವಾರಣೆ ನಿಟ್ಟಿನಲ್ಲಿ ಹಾಗೂ ಸರಕಾರ ಗೆಜೆಟ್ ಪ್ರಕಟಣೆ ಹೊರಡಿಸಲು ನೆರವು ನೀಡಿದ ಉನ್ನತ ಶಿಕ್ಷಣ ಸಚಿವರ ಸಲಹೆಗಾರ ಎ.ಎಸ್.ಪೊನ್ನಣ್ಣ ಅವರನ್ನು ಆಯ್ಕೆಯಾದ ಅಭ್ಯರ್ಥಿಗಳು ಬೆಂಗಳೂರಿನಲ್ಲಿ ಆತ್ಮೀಯವಾಗಿ ಸನ್ಮಾನಿಸಿದರು.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ. ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 510/2024

ಅರ್ಜಿದಾರರು: ಶ್ರೀಮತಿ ಲಕ್ಷ್ಮಿಬಾಯಿ ಕೋಂ ಲೇಟ್ ಮತ್ರಿ ನಾಯ್ಕ ವಯಸ್ಸು 66 ವರ್ಷ ವಿಳಾಸ: ಯಲವನಾಥಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಕೊಳಗೊಂಡನಹಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ, 2 ರಿಂದ 7ನೇ ಅರ್ಜಿದಾರರ ತಂದೆಯವರಾದ ಶ್ರೀ ಮತ್ರಿ ನಾಯಕ ಬಿನ್ ಲೇಟ್ ಪುಟ್ಟನಾಯಕ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಯಲವನಾಥ ಗ್ರಾಮದಲ್ಲಿ ದಿನಾಂಕ 15.06.1999 ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 15/10/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಸೆಪ್ಟಂಬರ್ 04ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಎಸ್.ಮಹದೇಶ್ ನಾಯ್ಕ
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 602 /2024

ಅರ್ಜಿದಾರರು: ಶ್ರೀಮತಿ ಸುಜಾತ ಬಾಯಿ ಬಿನ್ ಲೇಟ್ ಶಿವಶಂಕರ ನಾಯ್ಕ, ಕೋಂ ಶಿವಮಾರ ನಾಯ್ಕ ವಯಸ್ಸು 37 ವರ್ಷ ವಿಳಾಸ: ಶಿವನೇಗೌಡನದೊಡ್ಡಿ ಗ್ರಾಮ ಐ. ಗೊಲ್ಲಹಳ್ಳಿ ಅಂಚೆ ಉಯ್ಯಂಬಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಶಿವನಹಳ್ಳಿ ವೃತ್ತ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಾಯಿಯವರಾದ ಮಹಾದೇವಿ ಬಾಯಿ ಕೋಂ ಲೇಟ್ ಶಿವಶಂಕರ ನಾಯ್ಕ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ತುಳಸಿದೊಡ್ಡಿ ಗ್ರಾಮದಲ್ಲಿ ದಿನಾಂಕ 21.11.2022 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 22.10.2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
2024ರ ಸೆಪ್ಟಂಬರ್ 11ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಕೆ.ಎಸ್.ಸ್ವಾಮಿ
ವಕೀಲರು
ಸ್ಥಳ : ಕನಕಪುರ
ದಿನಾಂಕ: 02.03.2024

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 553/2024

ಅರ್ಜಿದಾರರು: ಶ್ರೀಮತಿ ಬಸವರಾಜಮ್ಮ ಕೋಂ ಲೇಟ್ ಪುಟ್ಟಸ್ವಾಮಿಗೌಡ ವಯಸ್ಸು 67 ವರ್ಷ ವಾಸ: ಸೂರನಹಳ್ಳಿ ಗ್ರಾಮ, ಅತ್ತಿಹಳ್ಳಿ ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಮಾವ, 2ನೇ ಅರ್ಜಿದಾರರ ತಂದೆ, 3ನೇ ಅರ್ಜಿದಾರರ ತಾತನವರಾದ ಶ್ರೀ ಹುಚ್ಚೇಗೌಡ ಬಿನ್ ಲೇಟ್ ಕೆಂಪೇಗೌಡ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಅತ್ತಿಹಳ್ಳಿ ಅಂಚೆ, ಸೂರನಹಳ್ಳಿ ಗ್ರಾಮದಲ್ಲಿ ದಿನಾಂಕ 06.07.1999 ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರ–ರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 15/10/2024ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
2024ರ ಸೆಪ್ಟಂಬರ್ 04ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹೆಚ್.ಎಸ್.ಮುರಳಿ
ವಕೀಲರು
ಸ್ಥಳ : ಕನಕಪುರ
ದಿನಾಂಕ: 04/09/2024

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 435/2024

ಅರ್ಜಿದಾರರು: ಶ್ರೀ ಮಹದೇವಯ್ಯ ಬಿನ್ ಲೇಟ್ ಮಲ್ಲ @ ಮಲ್ಲಮಾದಯ್ಯ @ ಮರಿಮಾದಯ್ಯ ವಯಸ್ಸು 68 ವರ್ಷ ವಾಸ: ಗೇರಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಅತ್ತಿಹಳ್ಳಿ ವೃತ್ತ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ತಂದೆ, 2ನೇ ಅರ್ಜಿದಾರರ ಮಾವ, 3ನೇ ಅರ್ಜಿದಾರರ ಗಂಡನ ತಾತ, 4 ರಿಂಧ 6ನೇ ಅರ್ಜಿದಾರರ ತಾತನವರಾದ ಮಲ್ಲ @ ಮಲ್ಲಮಾದಯ್ಯ @ ಮರಿಮಾದಯ್ಯ ಬಿನ್ ಲೇಟ್ ಸಿದ್ಧ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಹಳ್ಳಿ ಗ್ರಾಮದಲ್ಲಿ ದಿನಾಂಕ 15.08.1968 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಹಾಗೂ ನ್ಯಾಯಾಲಯದ ಆದೇಶವನ್ನು ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 16/10/2024 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಗೊಳಿಸಲಾಗುವುದು.
2024ರ ಸೆಪ್ಟಂಬರ್ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಹೆಚ್.ಎಸ್.ಮುರಳಿ
ವಕೀಲರು
ಸ್ಥಳ : ಕನಕಪುರ
ದಿನಾಂಕ: 05.09.2024

ಪ್ರಕೃತಿ ರಕ್ಷಣೆಯ ಹೊಣೆ ಎಲ್ಲರಿಗೂ ಇದೆ

ಬೆಂಗಳೂರು: ಪ್ರಾಣಿ ಸಂಪತ್ತನ್ನು ಕಾಪಾಡುವ ದಿಕ್ಕಿನಲ್ಲಿ ಇನ್ನಷ್ಟು ಪರಿಣಾಮಕಾರಿ ಕೆಲಸಗಳು ಆಗಬೇಕಿದ್ದು, ಇದಕ್ಕಾಗಿ ಲಭ್ಯ ಇರುವ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದ್ದಾರೆ.

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಅರಣ್ಯ ಭವನದಲ್ಲಿನ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಕಾಡು ಮತ್ತು ವನ್ಯ ಪ್ರಾಣಿ ಸಂಪತ್ತಿನ ರಕ್ಷಣೆ ಕೇವಲ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಯ ಕರ್ತವ್ಯ ಎಂದರೆ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡಂತಾಗು ತ್ತದೆ. ಪ್ರಕೃತಿಯಿಂದ ಲಾಭ ಪಡೆಯುತ್ತಿರುವ ಎಲ್ಲರಿಗೂ ಪ್ರಕೃತಿ ರಕ್ಷಣೆಯ ಹೊಣೆ ಇದೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಆನೆ, ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದ ಸಂಗತಿ. ಆದರೆ ಪ್ರಾಣಿ-ಮನುಷ್ಯ ಸಂಘರ್ಷ ತಪ್ಪಿಸಿ ಮಾನವ, ರಾಜ್ಯದಲ್ಲಿ ಅನುಪಾತಕ್ಕೆ ತಕ್ಕಷ್ಟು ಅರಣ್ಯವಿಲ್ಲ. ಆದ್ದರಿಂದ ಅರಣ್ಯೀಕರಣ ಹೆಚ್ಚಾಗಬೇಕು. ಅರಣ್ಯ ಹುತಾತ್ಮರ ಕುಟುಂಬಕ್ಕೆ ನೀಡುವ ಪರಿಹಾರ ಮೊತ್ತವನ್ನು 30 ರಿಂದ 50 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅರಣ್ಯ ಹುತಾತ್ಮರು ಮನುಕುಲದ ಸಂರಕ್ಷಕರು. ಇವರ ತ್ಯಾಗ ಅರಣ್ಯ ಸಂರಕ್ಷಣೆಗೆ ಸ್ಫೂರ್ತಿಯಾಗಲಿ ಎಂದು ತಿಳಿಸಿದ್ದಾರೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಕಾಡ್ಗಿಚ್ಚು ನಂದಿಸುವಾಗ, ಮಾನವ-ವನ್ಯಜೀವಿ ಸಂಘರ್ಷ ತಡೆಯುವ ಸಂದರ್ಭದಲ್ಲಿ ಮತ್ತು ಒತ್ತುವರಿದಾರರು ಮತ್ತು ಕಾಡುಗಳ್ಳರ ಆಕ್ರೋಶಕ್ಕೆ ಗುರಿಯಾಗಿ ಈವರೆಗೆ 61 ಅರಣ್ಯ ಸಿಬ್ಬಂದಿ ಮತ್ತು ಅಧಿಕಾರಿಗಳು ಹುತಾತ್ಮರಾಗಿದ್ದಾರೆ. ಈ ಎಲ್ಲರ ಕುಟುಂಬದೊಂದಿಗೆ ಇಲಾಖೆ ನಿಂತಿದೆ. ಜೊತೆಗೆ ಬೆಂಗಳೂರು, ಕೋಲಾರ, ಬೀದರ್ ಸೇರಿದಂತೆ ರಾಜ್ಯದ ವಿವಿಧೆಡೆ ಸಾವಿರಾರು ಕೋಟಿ ಬೆಲೆ ಬಾಳುವ 2500 ಎಕರೆಗೂ ಹೆಚ್ಚು ಅರಣ್ಯ ಭೂಮಿ ಮರು ವಶಕ್ಕೆ ಪಡೆದಿದೆ. ರಾಜ್ಯದ ಸಮೃದ್ಧ ಅರಣ್ಯ ಸಂಪತ್ತಿನ ರಕ್ಷಣೆಗೆ ಹಗಲಿರುಳು, ಜೀವದ ಹಂಗು ತೊರೆದು ಶ್ರಮಿಸುವ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹಾಲಿ ಇರುವ ಪೊಲೀಸ್ ಕ್ಯಾಂಟೀನ್ ಸೌಲಭ್ಯ ಬಳಸಿಕೊಳ್ಳಲು ಅವಕಾಶ ನೀಡುವಂತೆ ಮನವಿ ಮಾಡಲಾಗಿದೆ ಎಂದರು.



ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಅರಣ್ಯ ಭವನದಲ್ಲಿನ ಹುತಾತ್ಮರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಇದ್ದರು.

ಖೆಡ್ಡಾ ಕಾರ್ಯಾಚರಣೆ ವೀಕ್ಷಿಸಿದ ಸಿಎಂ

ಬೆಂಗಳೂರಿನ ಅರಣ್ಯ ಭವನಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಲಾಖೆಯ ಗ್ರಂಥಾಲಯದಲ್ಲಿ ಕಾಕನಕೋಟೆಯಲ್ಲಿ 60ರ ದಶಕದಲ್ಲಿ ನಡೆದಿದ್ದ ಖೆಡ್ಡಾ (ಆನೆ ಸೆರೆ ಕಾರ್ಯಾಚರಣೆ) ಫೋಟೊಗಳನ್ನು ವೀಕ್ಷಿಸಿದರು. ಅರಣ್ಯ ಸಚಿವ ಈಶ್ವರ ಖಂಡ್ರೆ ಚಿತ್ರದಲ್ಲಿದ್ದಾರೆ. ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಬಾಷ್ ಮಾಲ್ಕಡೆ ಮುಖ್ಯಮಂತ್ರಿಗಳಿಗೆ ಖೆಡ್ಡಾ ಕಾರ್ಯಾಚರಣೆಯ ಬಗ್ಗೆ ವಿವರಿಸಿದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕಾಲ್ಚೆಂಡಿನತ್ತ ಸಂಜು ಸ್ಟಾರ್ ಕ್ರಿಕೆಟಿಗ

ಸಂಜು ಸ್ಯಾಮ್ಸನ್ ಕೇರಳ ಸೂಪರ್ ಲೀಗ್‌ನಲ್ಲಿ ಸ್ಪರ್ಧಿಸುವ ಮಲಪ್ಪುರಂ ಫುಟ್‌ಬಾಲ್ ಕ್ಲಬ್ ಸಹ ಮಾಲೀಕರಾಗಿ ಗುರುತಿಸಿ ಕೊಂಡಿದ್ದಾರೆ.

ಪುಟ ತೆರೆದಂತೆ...

ಮತ್ತೊಬ್ಬರ ಜೀವನ ಬೆಳೆಸುತ್ತಾ ನಾವು ಸಾರ್ಥಕ್ಯ ಕಾಣುವ ಪರಿ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಯಾವ ದೇಶದಲ್ಲೂ ನಮ್ಮಲ್ಲಿರುವಷ್ಟು ಹಬ್ಬಗಳಿಲ್ಲ!
ಸಂಗತ
ಡಾ.ವಿಜಯ್ ದರಡಾ

ಸಂ.ಗಮ | 7

ದಾರಿದೀಪೋಕ್ತಿ

ನಿಮ್ಮನ್ನು ಯಾವತ್ತೂ ಬೇರೆಯವರೊಂದಿಗೆ ಹೋಲಿಸಿಕೊಳ್ಳಬೇಡಿ. ನಿಮ್ಮ ವ್ಯಕ್ತಿತ್ವ ನಿಮ್ಮದು. ನೀವು ಎಂದಿಗೂ ಬೇರೆಯವರಾಗಲು ಸಾಧ್ಯವಿಲ್ಲ. ಬೇರೆಯವರೊಂದಿಗೆ ಹೋಲಿಸಿಕೊಂಡರೆ, ಅವರನ್ನು ಅನುಕರಿಸಲಾರಂಭಿಸುತ್ತೀರಿ. ಅಷ್ಟಕ್ಕೂ ನೀವು ಬೇರೆಯವರೊಂದಿಗೆ ಪೈಪೋಟಿಗೆ ಬಿದ್ದಿಲ್ಲವಲ್ಲ.

ವಕ್ರತುಂಡೋಕ್ತಿ

ಮೊದಲೆಲ್ಲ ಸಪ್ಪೆಯಾಗಿದ್ದಾಗ ಕೇಳುತ್ತಿದ್ದರು, 'ಏನು ನಿಮ್ಮ ಹೆಂಡತಿ ತವರುಮನೆಗೆ ಹೋಗಿದ್ದಾಳಾ' ಅಂತ. ಈಗ ತುಂಬಾ ಖುಷಿಯಲ್ಲಿದ್ದಾಗಲೂ ಅದನ್ನೇ ಕೇಳುತ್ತಾರೆ.

ಸಿಎಂ ಕುರ್ಚಿ ಖಾಲಿ ಇಲ್ಲ, ಮುಂದುವರಿಕೆ ಬಗ್ಗೆ ಡೌಟೂ ಇಲ್ಲ: ಸಿದ್ದರಾಮಯ್ಯ

5 ವರ್ಷ ನಾನೇ ಸಿಎಂ

ಬೆಂಗಳೂರು: ರಾಜ್ಯದಲ್ಲಿ ಕಳೆದ ಕೆಲದಿನಗಳ ಭಾರಿ ಚರ್ಚೆಗೆ ಗ್ರಾಸವಾಗಿದ್ದ 'ಮುಖ್ಯಮಂತ್ರಿ ಬದಲಾವಣೆ' ಹೇಳಿಕೆಗೆ ಮೊದಲ ಬಾರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆಯೇ ಖಾಲಿಯಿಲ್ಲದಿರುವಾಗ, ಬದಲಾವಣೆ ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸುವ ಮೂಲಕ ತಾವೇ ಮುಖ್ಯಮಂತ್ರಿ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ.

ಒಂದೆಡೆ ಮುಡಾ ಪ್ರಕರಣವನ್ನು ಮುಂದಿಟ್ಟುಕೊಂಡು ಬಿಜೆಪಿಗರು ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸುತ್ತಿದ್ದರೆ, ಇನ್ನೊಂದೆಡೆ ಕಾಂಗ್ರೆಸ್‌ನಲ್ಲಿ ಕೆಲ ನಾಯಕರು 'ಖಾಲಿಯಿಲ್ಲದ ಕುರ್ಚಿಯ ಮೇಲೆ ಕಣ್ಣಿಟ್ಟಿದ್ದಾರೆ'. ಈ ನಡುವೆ ಕೆಲ ಕಾಂಗ್ರೆಸಿಗರು ಪಕ್ಷದ ಹೈಕಮಾಂಡ್‌ಗೆ ಪತ್ರ ಬರೆದಿದ್ದರು. ಈ ಬೆನ್ನಲ್ಲೆ, 'ನಾನೇ ಮುಖ್ಯಮಂತ್ರಿ. ಯಾವುದೇ ಕಾರಣಕ್ಕೂ ಬದಲಾವಣೆ ಯಿಲ್ಲ' ಎನ್ನುವ ಸ್ಪಷ್ಟ ಸಂದೇಶವನ್ನು ಸಿದ್ದರಾಮಯ್ಯ ರವಾನಿಸಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲದಿರುವಾಗ, ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನೇ ಮುಖ್ಯಮಂತ್ರಿಯಾಗಿ ಮುಂದುವರಿಯುವುದರಲ್ಲಿ ಸಂಶಯವಿಲ್ಲ ಎಂದು ತಿಳಿಸಿದರು.

ಸಿಎಂ ಸ್ಥಾನ ಖಾಲಿಯಿಲ್ಲವೆಂದ ಸಚಿವರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆ ಹಾಗೂ ಮುಖ್ಯಮಂತ್ರಿ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡದಂತೆ ಸಚಿವರಿಗೆ ಸೂಚನೆ ನೀಡಬೇಕೆಂದು ಕಾಂಗ್ರೆಸ್‌ನ ಹಿರಿಯ ಸಚಿವರು ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದ ಬೆನ್ನಲ್ಲೇ, ಬಹುತೇಕ ಸಚಿವರು ತಮ್ಮ ವರಸೆ ಬದಲಾಯಿಸಿದ್ದು, ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ಪ್ರಸ್ತಾಪವೇ ಇಲ್ಲ ಎನ್ನುವ ಮಾತುಗಳನ್ನು ಆಡುತ್ತಿದ್ದು, ಸಿದ್ದರಾಮಯ್ಯ ಪರವಾಗಿ ಬ್ಯಾಟ್ ಬೀಸಲು ಶುರು ಮಾಡಿದ್ದಾರೆ.

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನದ ಅಂಗವಾಗಿ ಸಿಎಂ ಸಿದ್ದರಾಮಯ್ಯ ಅವರು ಬೆಂಗಳೂರಿನ ಅರಣ್ಯ ಭವನದಲ್ಲಿ ಹುತಾತ್ಮರ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು.

ನ್ಯಾಯಾಲಯ ತೀರ್ಮಾನ

ವಾಲ್ಮೀಕಿ ಹಗರಣದಲ್ಲಿ ಮಾಜಿ ಸಚಿವ ನಾಗೇಂದ್ರ ಹೆಸರನ್ನು ಇಡಿ ಉಲ್ಲೇಖಿಸಿರುವ ಬಗ್ಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ಈ ಪ್ರಕರಣದ ಬಗ್ಗೆ ಎಸ್‌ಐಟಿಯವರೂ ತನಿಖೆ ಮಾಡಿ ಚಾರ್ಜ್ ಶೀಟ್ ಸಲ್ಲಿಸಿದ್ದು, ಈ ಬಗ್ಗೆ ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದೆ ಎಂದರು.

ಸಿದ್ದರಾಮಯ್ಯ ಒಳ್ಳೆಯ ಆಡಳಿತ ಮಾಡುತ್ತಿದ್ದಾರೆ. ಅವರ ಅವಧಿ ಮುಗಿದ ಮೇಲೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಸಿಎಂ ಆಗಬೇಕು ಎನ್ನುವ ಆಸೆಯಿದ್ದವರಿಗೆ ನಿರಾಸೆಯಾಗಲಿದೆ.
- ಶಾಮನೂರು ಶಿವಶಂಕರಪ್ಪ ಶಾಸಕ

ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ. ಸಿಎಂ ರೇಸ್‌ನಲ್ಲಿ ಯಾರೂ ಇಲ್ಲ. ಬಿಜೆಪಿ ಸರಕಾರ ಅಸ್ಥಿರ ಗೊಳಿಸಲು ಈ ಸುಳ್ಳನ್ನು ಸೃಷ್ಟಿಸಲು ಮುಂದಾಗಿದೆ.
- ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ಸಿಎಂ ಸ್ಥಾನ ಖಾಲಿಯಿಲ್ಲ. ಖಾಲಿಯಾಗು ವುದೂ ಇಲ್ಲ. ಸಿದ್ದರಾಮಯ್ಯನವರೇ ನಮ್ಮ ಸಿಎಂ.
- ಎಚ್.ಕೆ.ಪಾಟೀಲ್ ಕಾನೂನು ಸಚಿವ

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಗಟ್ಟಿಯಾಗಿದ್ದಾರೆ. ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುವವರೆಗೆ ಸಿಎಂ ಸ್ಥಾನದ ಬದಲಾವಣೆಯ ಪ್ರಶ್ನೆ ಬರುವುದಿಲ್ಲ.
- ಲಕ್ಷ್ಮೀ ಹೆಬ್ಬಾಳ್ಕರ್
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ

ಕ್ರಿಮಿನಲ್ ಆರೋಪ ಹೊತ್ತ ದೂರುದಾರರ ವಾದಕ್ಕೆ ಮಣೆ
ಸ್ನೇಹಮಯಿ ಕೃಷ್ಣ, ಅಬ್ರಾಹಂ ವಿರುದ್ಧ ಹಲವು ಆರೋಪ

ಪ್ರಾಸಿಕ್ಯೂಷನ್: ರಾಜ್ಯಪಾಲರ ನಡೆ ಎಷ್ಟು ಸರಿ?

ವಿಶ್ವವಾಣಿ ವಿಶೇಷ

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ವಾದ-ಪ್ರತಿವಾದ ಒಂದು ಹಂತಕ್ಕೆ ತಲುಪಿದೆ. ಈ ಹಂತದಲ್ಲೂ ಹತ್ತು ಹಲವು ಜಿಜ್ಞಾಸೆಗಳು ಸಾರ್ವಜನಿಕರನ್ನು ಈಗಲೂ ಕಾಡುತ್ತಿವೆ.

ಪ್ರಮುಖವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಯಾವ ಆಧಾರದಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ ಎನ್ನುವುದೇ ಸಾರ್ವಜನಿಕ ವಲಯದಲ್ಲಿರುವ ಬಹುದೊಡ್ಡ ಪ್ರಶ್ನೆಯಾಗಿದೆ. ರಾಜ್ಯಪಾಲರ ಪರ ವಾದ ಮಂಡಿಸಿದ ಸಾಲಿಟರ್ ಜನರಲ್ ತುಷಾರ್ ಮೆಹ್ತಾ ಸೇರಿದಂತೆ ದೂರದಾರರ ಪರ ವಾದ ಮಂಡಿಸಿದ ವಕೀಲರು ತಾಸುಗಟ್ಟಲೇ 'ವಾದ' ಮಂಡಿಸಿದ್ದಾರೆ. ಆದರೆ ಈವರೆಗೆ ಇಡೀ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರ ಪಾತ್ರವೇನು ಎನ್ನುವುದನ್ನು ಹೇಳದಿರುವುದು ಹಲವು ಗೊಂದಲಗಳಿಗೆ ಕಾರಣವಾಗಿದೆ.

ಇಬ್ಬರ ಇತಿಹಾಸ ಪ್ರಸ್ತಾಪಿಸಲಿ

ಮುಖ್ಯಮಂತ್ರಿಗಳ ಪರವಾಗಿ ಹೈಕೋರ್ಟ್‌ನಲ್ಲಿ ವಾದ ಮಂಡಿಸುತ್ತಿರುವ ರವಿವರ್ಮಾ ಕುಮಾರ್ ಆಗಲಿ, ಶಶಿಕಿರಣ್ ಶೆಟ್ಟಿ ಅವರಾಗಲಿ ಅಬ್ರಾಹಂ ಹಾಗೂ ಸ್ನೇಹಮಯಿ ಕೃಷ್ಣ ಅವರು ಈ ಹಿಂದೆ ಮಾಡಿಕೊಂಡು ಬಂದಿರುವ 'ಕಾರ್ಯ'ದ ಬಗ್ಗೆ ಹಾಗೂ ಅವರ ವಿರುದ್ಧ ಇರುವ 'ಅಕ್ರಮ'ದ ದೂರುಗಳ ಬಗ್ಗೆ ನ್ಯಾಯಾಲಯದಲ್ಲಿ ಪ್ರಸ್ತಾಪಿಸಿಲ್ಲ. ದೂರುದಾರರ ಹಿನ್ನೆಲೆ ಹಾಗೂ ಕಾರಣಗಳೂ ದೂರಿನ ನೈಜತೆಯನ್ನು ತೋರಿಸುತ್ತದೆ. ಆದ್ದರಿಂದ ಈ ಇಬ್ಬರ ಇತಿಹಾಸವನ್ನು ಹೈಕೋರ್ಟ್‌ನಲ್ಲಿ ಪ್ರಸ್ತಾಪಿಸುವುದು ಅಗತ್ಯ ಎನ್ನುವ ಮಾತುಗಳನ್ನು ಕಾನೂನು ತಜ್ಞರು ಹೇಳುತ್ತಿದ್ದಾರೆ.

ಇದಕ್ಕೂ ಮುಖ್ಯವಾಗಿ ಸಾಂವಿಧಾನಿಕ ಹುದ್ದೆಯಲ್ಲಿರುವವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಾಗ ತನಿಖಾ ಸಂಸ್ಥೆಯ ವರದಿ ಕಡ್ಡಾಯವಾಗಿರಬೇಕು. ಆದರೆ ಸಿದ್ದರಾಮಯ್ಯ ಅವರ ಪ್ರಕರಣದಲ್ಲಿ ಯಾವ ತನಿಖಾ ಸಂಸ್ಥೆಯಿಂದಲೂ ಯಾವುದೇ ವರದಿಗಳು ಬಂದಿಲ್ಲ. ಹೋಗಲಿ ಯಾವ ಸಂಸ್ಥೆಯೂ ತನಿಖೆಯನ್ನೂ ನಡೆಸಿಲ್ಲ. ಹೀಗಿದ್ದರೂ, ಯಾರೋ ಖಾಸಗಿ ದೂರುದಾರರು ದೂರು ನೀಡಿದ್ದಾರೆ ಎನ್ನುವ ಮಾತ್ರಕ್ಕೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ನಡೆ ಎಷ್ಟು ಸಮಂಜಸ ಎನ್ನುವುದು ಸಾರ್ವಜನಿಕ ವಲಯದಲ್ಲಿ ಬಹುದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. → 4

ದೂರುದಾರರ ಬಗ್ಗೆಯೂ ಹಲವು ಅನುಮಾನ

ಸಿದ್ದರಾಮಯ್ಯ ಅವರ ಪಾತ್ರವೇ ಇಲ್ಲದಿರುವುದು ಸಾಮಾನ್ಯರಿಗೂ ಕಾಣಿಸುತ್ತಿರುವಾಗಲೂ ರಾಜ್ಯಪಾಲರ ಬಳಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿರುವ ಎ.ಜೆ.ಅಬ್ರಾಹಂ ಹಾಗೂ ಸ್ನೇಹಮಯಿ ಕೃಷ್ಣ ಅವರ ಬಗ್ಗೆಯೇ ಹಲವು ಅನುಮಾನಗಳು ಶುರುವಾಗಿದೆ. ಮುಡಾ ವ್ಯಾಪ್ತಿಯಲ್ಲಿ ಹಾಗೂ ಮೈಸೂರು ಭಾಗದಲ್ಲಿ ಹಲವು ಭೂ ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ಮೊದಲಿನಿಂದಲೂ 'ಸುಖಾಸುಮ್ಮನೆ' ದೂರು ನೀಡಿರುವ ಸ್ನೇಹಮಯಿ ಕೃಷ್ಣ ಅವರ ವಿರುದ್ಧ ಸುಮಾರು 25ಕ್ಕೂ ಹೆಚ್ಚು ಪ್ರತಿದೂರುಗಳು ರಾಜ್ಯಾದ್ಯಂತ ದಾಖಲಾಗಿವೆ. ವರ್ಷಗಳ ಕಾಲ ನ್ಯಾಯಾಲಯಕ್ಕೆ ಅಲೆಯಲಾಗದೇ ಅನೇಕ ದೂರುದಾರರು ಹಿಂದೆ ಸರಿದಿರುವುದರಿಂದ ಹಲವು ಪ್ರಕರಣಗಳು 'ಬಿದ್ದು' ಹೋಗಿವೆ. ಕೆಲ ಪ್ರಭಾವ ಬಳಸಿಕೊಂಡು ಒಂಬತ್ತು ಪ್ರಕರಣದಲ್ಲಿ ಬಿ ರಿಪೋರ್ಟ್ ಪಡೆದಿದ್ದಾರೆ. ಆದರೆ ಈಗಲೂ ಮೂರು ಪ್ರಕರಣಗಳ ವಿಚಾರಣೆ ಕೋರ್ಟ್‌ನಲ್ಲಿ ನಡೆಯುತ್ತಿದ್ದರೆ, ಎರಡು ಪ್ರಕರಣಗಳು ತನಿಖಾ ಹಂತದಲ್ಲಿವೆ ಎನ್ನುವುದು ದಾಖಲೆಗಳಲ್ಲಿ ಬಹಿರಂಗವಾಗಿದೆ.

ಎ.ಜೆ.ಅಬ್ರಾಹಂ ಅವರ ವಿರುದ್ಧವೂ ಇದೇ ರೀತಿಯ ಆರೋಪಗಳು ಕೇಳಿಬಂದಿವೆ. ಅವರ ಈ ಹಿಂದಿನ ಕಾರ್ಯವೈಖರಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಧಿಕಾರದಲ್ಲಿರುವವರ ವಿರುದ್ಧ ದೂರು ನೀಡುವುದನ್ನೇ ಪೂರ್ಣಕಾಲಿಕ ಕೆಲಸವನ್ನಾಗಿ ಮಾಡಿಕೊಂಡಿದ್ದಾರೆ. ಈ ಹಿಂದೆ ಯಡಿಯೂರಪ್ಪ ವಿರುದ್ಧವೂ ಅಬ್ರಾಹಂ ದೂರು ನೀಡಿದ್ದರು. ಬಳಿಕ ಪ್ರಭಾವಿ ಸಚಿವರು, ಅಧಿಕಾರಿಗಳ ವಿರುದ್ಧ ದೂರು ನೀಡುತ್ತಾರೆ. ಹಲವು ಪ್ರಕರಣಗಳು ಕೆಲ ದಿನದ ಬಳಿಕ ಸದ್ದುಗದ್ದಲವಿಲ್ಲದೇ ಹಿಂಪಡೆದಿರುವ ಉದಾಹರಣೆಗಳಿವೆ. ಆದರೆ ಪ್ರಕರಣವನ್ನು ಹಿಂಪಡೆದಿರುವುದು ಏಕೆ ಎನ್ನುವುದು ಮಾತ್ರ 'ನಿಗೂಢ'.

ಸಿದ್ದರಾಮಯ್ಯ ವಿರುದ್ಧ ರಾಜಭವನದ ಕದ ತಟ್ಟಿರುವ ಈ ಇಬ್ಬರ ವಿರುದ್ಧ ಹಲವು ಕ್ರಿಮಿನಲ್ ಪ್ರಕರಣ ದಾಖಲಾಗಿರುವುದರಿಂದ ಈ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತರಬೇಕಿದೆ. ಪ್ರಭಾವಿಗಳ ವಿರುದ್ಧ ದೂರು ನೀಡುವುದನ್ನೇ ನಿತ್ಯ ಕಾಯಕ ಮಾಡಿರುವ ಈ ಇಬ್ಬರ ವಿರುದ್ಧವೂ ಕಾನೂನು ಕ್ರಮ ಸಾಧ್ಯವೇ ಎನ್ನುವ ಬಗ್ಗೆಯೂ ಚರ್ಚಿಸಬೇಕಿದೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಮೂವರು ಉಗ್ರರ ಹತ್ಯೆ

ಶ್ರೀನಗರ: ಸೇನೆಯ ವಿಶೇಷ ಪಡೆಗಳು, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬುಧವಾರ ಕಥುವಾ ಜಿಲ್ಲೆಯಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ಭಯೋತ್ಪಾದಕರನ್ನು ಹೊಡೆದುರುಳಿಸಿದ್ದು, ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಉಗ್ರರ ವಿರುದ್ಧದ ಕಾರ್ಯಾಚರಣೆ ಮುಂದುವರಿದಿದೆ. ಇಬ್ಬರು ಉಗ್ರರ ಮೃತದೇಹಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ಗಣೇಶ ಮೆರವಣಿಗೆ ವೇಳೆ ಕಲ್ಲು ತೂರಾಟ, ಅಂಗಡಿ, ವಾಹನಗಳಿಗೆ ಬೆಂಕಿ

ನಾಗಮಂಗಲ ಉದ್ವಿಗ್ನ: ಲಾಠಿ ಪ್ರಹಾರ

ನಾಗಮಂಗಲ: ಮೈಸೂರು ರಸ್ತೆಯ ದರ್ಗಾದ ಬಳಿ ಬುಧವಾರ ರಾತ್ರಿ ಗಣೇಶ ಮೂರ್ತಿಗಳ ಮೆರವಣಿ ಗೆ ಸಾಗುತ್ತಿದ್ದ ವೇಳೆ ಗುಂಪೊಂದು ಕಲ್ಲು ತೂರಾಟ ಮಾಡಿದ ಪರಿಣಾಮ ಪಟ್ಟಣದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ.

- ಉದ್ರಿಕ್ತರಿಂದ ಅಂಗಡಿ, ವಾಹನಗಳಿಗೆ ಬೆಂಕಿ
- ಪಟ್ಟಣದಲ್ಲಿ ಆತಂಕದ ವಾತಾವರಣ

ಪಟ್ಟಣದ ಬದ್ರಿಕೊಪ್ಪಲು ಗ್ರಾಮದ ಯುವಕರು ಪಟ್ಟಣದ ಹೆದ್ದಾರಿಯಲ್ಲಿ ಗಣೇಶ ವಿಸರ್ಜನೆ ಅಂಗವಾಗಿ ಮೆರವಣಿಗೆ ನಡೆಸುತ್ತಿದ್ದರು. ಆ ಸಂದರ್ಭ ಹಿಂದೂ-ಮುಸ್ಲಿಂ ಯುವಕರ ಗುಂಪಿನ ನಡುವೆ ಮಾತಿನ ಚಕಮಕಿ ನಡೆದಿತ್ತು. ಸ್ಥಳದಲ್ಲಿ ಬಿಗುವಿನ ವಾತಾವರಣ ಉಂಟಾಗಿದೆ.

ಕಲ್ಲು ತೂರಾಟದಿಂದ ಪೊಲೀಸ್ ಸಿಬ್ಬಂದಿ ಯೊಬ್ಬರಿಗೆ ಗಾಯಗಳಾಗಿವೆ. ಮಾತಿನ ಚಕಮಕಿ ವೇಳೆ ಗುಂಪೊಂದು ಕತ್ತಿ, ತಲ್ವಾರ್ ಝಳಪಿಸಿದೆ ಎನ್ನಲಾಗಿದೆ.



ವಿರಾಮ
ಪ್ರತಿ ಭಾನುವಾರ

ತುಕಾರಾಮ್ ಗೆಲುವು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಶ್ರೀರಾಮುಲು ದಾವೆ

ಸಂಡೂರು ಉಪಚುನಾವಣೆ ಹೋರಾಟಕ್ಕೆ ಬಿಜೆಪಿ ಸಿದ್ಧತೆ

ಬಳ್ಳಾರಿ: ವಾಲ್ಮೀಕಿ ಹಗರಣದ ಹಣವನ್ನು ಚುನಾವಣೆಯಲ್ಲಿ ಬಳಸಿ ಹಣ, ಹೆಂಡ ಹಂಚಿ ಮತದಾರರ ಮೇಲೆ ಪ್ರಭಾವ ಬೀರಿ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದೆ. ಹಣ, ಹಂಚಿ ಗೆದ್ದಿರುವ ಕಾಂಗ್ರೆಸ್ ಸಂಸದ ತುಕಾರಾಮ್ ಗೆಲುವನ್ನು ಪ್ರಶ್ನಿಸಿ ಮಾಜಿ ಸಚಿವ ಬಿ. ಶ್ರೀರಾಮುಲು ಅವರು ಹೈಕೋರ್ಟ್‌ನಲ್ಲಿ ದಾವೆ ಹೂಡಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾ ಮೋಹನ್ ಅಗರವಾಲ್ ಹೇಳಿದ್ದಾರೆ.

ಸಂಡೂರಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅಗರವಾಲ್ , ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆ ಯಲ್ಲಿ ವಾಲ್ಮೀಕಿ ನಿಗಮದ 20.19 ಕೋಟಿ ಹಣ ಬಳಕೆ ಯಾಗಿದೆ ಎಂದು ಇ.ಡಿ. ಚಾರ್ಜ್‌ಶೀಟ್ ನಲ್ಲಿ ಉಲ್ಲೇಖಿಸಿದೆ. 1975 ರಲ್ಲೂ ಇದೇ ರೀತಿ ಹಣ, ಹೆಂಡ ಹಂಚಿ ಗೆದ್ದಿದ್ದ ಇಂದಿರಾಗಾಂಧಿಯವರ ಗೆಲುವನ್ನು ಪ್ರಶ್ನಿಸಿ ಕೋರ್ಟ್ ಮೊರೆಹೋಗಲಾಗಿತ್ತು. ಸದಸ್ಯತ್ವವನ್ನು ಕೋರ್ಟ್ ರದ್ದುಪಡಿ ಸಿದಾಗ ಇಂದಿರಾಗಾಂಧಿ ತುರ್ತುಪರಿಸ್ಥಿತಿ ಘೋಷಿಸಿದರು. ಸಂಸದ ತುಕಾರಾಮ್ ಪ್ರಕರಣವೂ ಅದೇ ರೀತಿ ಆಗಲಿದೆ ಎಂದರು.

ಮುಡಾ ಹಗರಣ: ವಾಲ್ಮೀಕಿ ಹಣಗರಣಕ್ಕೆ ಸಂಬಂಧಿಸಿದಂತೆ ಎಸ್ ಐಟಿ, ಇಡಿ ಚಾರ್ಜ್‌ಶೀಟ್ ಸಲ್ಲಿಸಿದೆ. ನಾಗೇಂದ್ರನನ್ನು ರಕ್ಷಣೆ ಮಾಡಲು ಎಸ್ ಐಟಿ ಕ್ಲೀನ್‌ಚಿಟ್ ನೀಡಿದೆ. ಇ.ಡಿ. ನಾಗೇಂದ್ರ, ಅವರೇ ಪ್ರಮುಖ ಆರೋಪಿ ಎಂದಿದೆ.ಹಗರಣ ಕುರಿತು ಬಿಜೆಪಿ ಆರೋಪ ಮಾಡಿದಾಗ ಸಿಎಂ ಸಿದ್ದರಾಮಯ್ಯ ನಡೆದೇ ಇಲ್ಲ ಎಂದರು. ಬಳಿಕ ಅಧಿವೇಶನದಲ್ಲೇ 89 ಕೋಟಿ ರೂ. ಹಗರಣ ನಡೆದಿದೆ ಎಂದು ಒಪ್ಪಿಕೊಂಡಿದ್ದರು. ಅವರು ಸಹ ಮುಡಾದಲ್ಲಿ ಬದಲಿ ನಿವೇಶನ ಪಡೆದು ೫4 ಸಾವಿರ ಕೋಟಿ ಹಗರಣ ಮಾಡಿದ್ದಾರೆ ಎಂದು ಅವರು ಆರೋಪಿಸಿದರು.

ಸಂಡೂರು ಉಪಚುನಾವಣೆ: ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯಲಿದ್ದು ಬಿಜೆಪಿ ವಾಲ್ಮೀಕಿ ಹಗರಣವನ್ನೇ ಪ್ರಮುಖ ಅಸ್ತ್ರವನ್ನಾಗಿಸಿ ಹೋರಾಟಕ್ಕೆ ಸಿದ್ಧತೆ ಮಾಡಿಕೊಂಡಿದೆ.

ಖರ್ಗೆ ಅಳಿಯನಿಗೂ ಭೂಮಿ

ಮಲ್ಲಿಕಾರ್ಜುನ ಖರ್ಗೆ ಅಳಿಯನ ಹೆಸರಲ್ಲೂ ಐದು ಎಕರೆ ಜಮೀನು ಪಡೆದಿದ್ದಾರೆ. ಕಾಂಗ್ರೆಸ್ ಬರೀ ಭ್ರಷ್ಟಾಚಾರದಲ್ಲೇ ತೊಡಗಿದೆ. ಲೋಕಸಭಾ ಚುನಾವಣೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ. ಕೆ.ಶಿವಕುಮಾರ್, ರಾಹುಲ್ ಗಾಂಧಿ ಸೇರಿ ಎಲ್ಲರೂ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದ್ದಾರೆ ಎಂದು ರಾಧಾಮೋಹನ್ ಅಗರ್‌ವಾಲ್ ಆರೋಪಿಸಿದರು.

ಪ್ರಾಸಿಕ್ಯೂಷನ್: ರಾಜ್ಯಪಾಲರ ನಡೆ ಎಷ್ಟು ಸರಿ?

← ಮೊದಲಪುಟದಿಂದ

ಶಿಫಾರಸ್ಸೇ ಮಾಡಿಲ್ಲ ಎಂದರೆ ಸಿಎಂ ತಪ್ಪೇನು?: ಹಾಗೇ ನೋಡಿದರೆ, ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಡಳಿತ ಅಥವಾ ಪ್ರತಿಪಕ್ಷದಲ್ಲಿದ್ದಾಗ ಯಾವುದೇ ಶಿಫಾರಸು ಪತ್ರವನ್ನು ನೀಡಿಲ್ಲ. ಅಧಿಕಾರಿಗಳಿಗೆ ಮೌಖಿಕ ಸೂಚನೆಯನ್ನೂ ನೀಡಿಲ್ಲ. ಹೀಗಿರುವಾಗ, ಅಧಿಕಾರಿಗಳು ನಿವೇಶನವನ್ನು ಹಂಚಿಕೆ ಮಾಡಿದ್ದರೆ ಅದಕ್ಕೆ ಸಿದ್ದರಾಮಯ್ಯ ಅವರು ಹೇಗೆ ಹೊಣೆಯಾಗುತ್ತಾರೆ? ಒಂದು ವೇಳೆ ನಿವೇಶನ ಹಂಚಿಕೆಯಲ್ಲಿ ತಪ್ಪು ನಡೆದಿದ್ದರೆ ಅದರ ಹೊಣೆ ಅಧಿಕಾರಿಗಳು ಹಾಗೂ ಅಧಿಕಾರದಲ್ಲಿದ್ದ ಸಚಿವರು ಹೊರಬೇಕೆ ಹೊರತು, ಸಿದ್ದರಾಮಯ್ಯ ಅವರು ಹೇಗಾಗುತ್ತಾರೆ ಎನ್ನುವುದು ಈಗಿರುವ ಪ್ರಶ್ನೆಯಾಗಿದೆ.

ದೂರುದಾರ ಅಬ್ರಾಹಂ ಪರ ವಕೀಲರ ನಡೆಯೇ ಹಲವು ಗೊಂದಲಗಳಿಗೆ ಕಾರಣವಾಗಿದೆ. ಹೈಕೋರ್ಟ್‌ನಲ್ಲಿ ವಾದಿಸುವಾಗ 17 'ಎ'ನಲ್ಲಿ ಈ ಪ್ರಕರಣವನ್ನು ಕೈಗೆತ್ತಿಕೊಳ್ಳಲು ಬರುವುದಿಲ್ಲವೆಂದು ಅವರೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಭಾರತೀಯ ನ್ಯಾಯ ಸಂಹಿತೆಯ 19ರಲ್ಲಿ ದೂರು ದಾಖಲಿಸಬೇಕು ಎಂದು ವಾದ ಮಂಡಿಸಿದ್ದಾರೆ. ಆದರೆ ಈ ಘಟನೆ ನಡೆದಾಗ ಹಾಗೂ ದೂರು ದಾಖಲಾದ ಸಮಯದಲ್ಲಿ ಭಾರತೀಯ ನ್ಯಾಯ ಸಂಹಿತೆಯೇ ಜಾರಿಯಲ್ಲಿರಲಿಲ್ಲ. ಹೀಗಿರುವಾಗ, ಅದರನ್ವಯ ದೂರು ದಾಖಲಿಸಲು ಹೇಗೆ ಸಾಧ್ಯ? ಎನ್ನುವ ಪ್ರಶ್ನೆಯನ್ನು ಕಾನೂನಿನ ಅಲ್ಪಜ್ಞಾನ ಹೊಂದಿರುವವರೂ ಪ್ರಶ್ನಿಸುತ್ತಿದ್ದಾರೆ.

ಇಂದು ಸಿಎಂ ಪರ ಸಿಂಘ್ವಿ ವಾದ

ರಾಜ್ಯಪಾಲರ ನಡೆ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಗುರುವಾರ ಅಂತಿಮವಾಗಿ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಲಿದ್ದಾರೆ. ಬುಧವಾರ ಸಂಜೆಯೇ ಬೆಂಗಳೂರಿಗೆ ಆಗಮಿಸಿರುವ ಸಿಂಘ್ವಿ ಅವರಿಗೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಹಾಗೂ ಹಿರಿಯ ವಕೀಲರ ತಂಡ ತುಷಾರ್ ಮೆಹ್ತಾ ಹಾಗೂ ಇನ್ನುಳಿದ ವಕೀಲರು ನಡೆಸಿರುವ ವಾದದ ಬಗ್ಗೆ ಮಾಹಿತಿ ನೀಡಿದ್ದಾರೆ. ರಾಜ್ಯಪಾಲರ ಪರ ಹಾಗೂ ಇನ್ನುಳಿದ ದೂರುದಾರರ ಪರವಾಗಿ ವಾದ ಮಂಡಿಸಿರುವ ಎಲ್ಲ ಅಂಶಗಳಿಗೂ 'ಉತ್ತರ' ನೀಡುವ ಮಾತುಗಳನ್ನು ಆಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಣ ಬಡಿದಾಟ; ಸಂಘ ಮಧ್ಯಸ್ಥಿಕೆ

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಆಯ್ಕೆಯಾದ ದಿನದಿಂ ದಲೂ ಪಕ್ಷದಲ್ಲಿ ಶುರುವಾಗಿರುವ ಬಣ ಬಡಿದಾಟಕ್ಕೆ ಬ್ರೇಕ್ ಹಾಕಲು ಸಂಘ ಪರಿವಾರದ ಮಧ್ಯಸ್ಥಿಕೆಯಲ್ಲಿ ವೇದಿಕೆ ಸಜ್ಜಾಗಿದೆ.

ಗುರುವಾರ ಬೆಳಗ್ಗೆ ಮಾಗಡಿ ರಸ್ತೆಯಲ್ಲಿರುವ ಚೆನ್ನೇನಹಳ್ಳಿಯ ಆರ್‌ಎಸ್‌ಎಸ್ ಕೇಂದ್ರದಲ್ಲಿ ಸಭೆ ನಡೆಯಲಿದೆ. ಈ ಸಭೆಗೆ ಪ್ರಮುಖವಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಂಡಾಯವಾಗಿ ಗುರುತಿಸಿ ಕೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರು ಭಾಗವಹಿಸಲಿದ್ದಾರೆ. ಇದರೊಂದಿಗೆ ಕೋರ್ ಕಮಿಟಿ ಸದಸ್ಯರು, ಪ್ರತಿಪಕ್ಷ ನಾಯಕ ಆರ್.ಅಶೋಕ, ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರ ವಾಲ್, ಮಾಜಿ ಸಚಿವ ಅರವಿಂದ ಲಿಂಬಾವಳಿ, ರಮೇಶ್ ಜಾರಕಿಹೊಳಿ ಸೇರಿದಂತೆ ಒಟ್ಟು 40 ಪ್ರಮುಖರು ಭಾಗವಹಿಸಲಿದ್ದಾರೆ ಎಂದು ಹೇಳಲಾಗಿದೆ.

ವಿಜಯೇಂದ್ರ ಬಣ ಹಾಗೂ ವಿರೋಧಿ ಬಣದ ನಡುವೆ ತಿಕ್ಕಾಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದ ರಿಂದ ಪಕ್ಷದ ಸಂಘಟನೆಗೆ ಭಾರಿ ಹೊಡೆತ ಬೀಳುತ್ತಿದ್ದು, ಪಕ್ಷದ ನಿಷ್ಠರು 'ಮೌನ'ಕ್ಕೆ ಶರಣಾಗುತ್ತಿದ್ದಾರೆ ಎನ್ನುವ ಆತಂಕ ನಾಯಕರಲ್ಲಿ ಶುರುವಾಗಿದೆ. ಇದರ ಬೆನ್ನಲ್ಲೇ ಕೇಂದ್ರ ನಾಯಕರ ಮನವಿ ಮೇರೆಗೆ ಸಂಘದ ಪ್ರಮುಖರು ಎರಡೂ ಕಡೆಯವರನ್ನು ಆಹ್ವಾನಿಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ.

ಎರಡೂ ಕಡೆಯವರ ವಾದ ಮಂಡನೆಗೆ ಅವಕಾಶ: ಇತ್ತೀಚಿನ ದಿನದಲ್ಲಿ ಪಕ್ಷದ ದೈನಂದಿನ ವಿಷಯದಲ್ಲಿ ಆರ್ ಎಸ್‌ಎಸ್ ಮಧ್ಯಪ್ರವೇಶಿಸುತ್ತಿಲ್ಲ. ಆದರೆ ರಾಜ್ಯದಲ್ಲಿ ಬಣ ರಾಜಕೀಯ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಸಂಘ ಪರಿವಾರದ ನಾಯಕರು 'ಪರಿಹಾರ' ಕೊಡಬೇಕು ಎಂದು ಕೇಂದ್ರ ಸಚಿವರೊಬ್ಬರ ಮನವಿಯ ಹಿನ್ನೆಲೆಯಲ್ಲಿ ಈ ಸಭೆ ಆಯೋಜಿಸಲಾಗಿದೆ ಎಂದು ಹೇಳಲಾಗಿದೆ. ಈ ಸಭೆಯಲ್ಲಿ, ಎರಡೂ ಕಡೆಯವರು ತಮ್ಮ ತಮ್ಮ ವಾದ ಮಂಡನೆಗೆ ಅವಕಾಶ ನೀಡುವ ಸಾಧ್ಯತೆಯಿದೆ. ಆದ್ದರಿಂದ ಈ ಸಭೆಯನ್ನು ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಸಭೆ ಮಹತ್ವ ಏಕೆ?: ವಿಧಾನಸಭೆ ಚುನಾವಣೆ ಸೋಲಿನ ಬಳಿಕ ಬಿಜೆಪಿಯಲ್ಲಿ ನಾಯಕರ ನಡುವೆ ಬಿರುಕು ಮೂಡಿದೆ. ವಿಜಯೇಂದ್ರರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಿದ ಬಳಿಕ ಕೆಲ ಹಿರಿಯ ನಾಯಕರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು. ಇದಕ್ಕೆ ಕೇಂದ್ರದ ವರಿಷ್ಠರು ನಾಯಕರನ್ನು ಕರೆಸಿಕೊಂಡು ಮನವೊಲಿಸಿದ್ದರಾದರೂ ಪೂರ್ಣ ಪ್ರಮಾಣದಲ್ಲಿ ಶಮನಗೊಳಿಸುವಲ್ಲಿ ಯಶಸ್ವಿಯಾಗಲಿಲ್ಲ. ನಂತರ, ಲೋಕ ಚುನಾವಣೆಗೆ ಟಿಕೆಟ್ ಕೈ ತಪ್ಪುತ್ತಿದ್ದಂತೆ ನಿರೀಕ್ಷೆಯಲ್ಲಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಕೆಲ ನಾಯಕರು ಹತಾಶೆಯಿಂದ ಅಸಮಾಧಾನ ಹೊರ ಹಾಕಿದರು.

ಪ್ರತ್ಯೇಕ ಪಾದಯಾತ್ರೆ ಬಗ್ಗೆ ಚರ್ಚೆ ಸಾಧ್ಯತೆ

ಈ ಸಭೆಯಲ್ಲಿ ಬಳ್ಳಾರಿ ಪಾದಯಾತ್ರೆಯ ಬಗ್ಗೆ ಚರ್ಚೆ ನಡೆ ಸುವ ಸಾಧ್ಯತೆಯಿದೆ. ಇತ್ತೀಚೆಗೆ ಬಿಜೆಪಿ ನಡೆಸಿದ ಮೈಸೂರು ಚಲೋ ಪಾದಯಾತ್ರೆಯಲ್ಲಿ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಗೈರಾಗಿದ್ದರು. ಬದಲಿಗೆ ಬಳ್ಳಾರಿವರೆಗೆ ಪ್ರತ್ಯೇಕ ಪಾದಯಾತ್ರೆ ಮಾಡುತ್ತೇವೆ, ಹೈಕ ಮಾಂಡ್ ಒಪ್ಪಿಗೆಗಾಗಿ ಕಾಯುತ್ತಿದ್ದೇವೆ ಎಂದು ಘೋಷಿಸಿ ದ್ದರು. ಗುರುವಾರದ ಸಭೆಯಲ್ಲಿ ಈ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಬುದ್ಧಿವಾದ ಹೇಳಿದ್ದಕ್ಕೆ ಯುವಕ ಆತ್ಮಹತ್ಯೆ

ಚಿಕ್ಕಬಳ್ಳಾಪುರ: ಗಣೇಶ ಪ್ರತಿಷ್ಠಾಪನೆ ಜಾಗದಲ್ಲಿ ಹಾಡುಗಳಿಗೆ ಡ್ಯಾನ್ಸ್ ಮಾಡಿ ಸಂಭ್ರಮದಲ್ಲಿ ತೇಲಾಡುತ್ತಿದ್ದ ಯುವಕನಿಗೆ ಸಹೋದರ ಹಾಗೂ ತಾಯಿ ಬುದ್ಧಿ ವಾದ ಹೇಳಿ ದ್ದಕ್ಕೆ ನೊಂದು ಯುವಕ ಆತ್ಮಹತ್ಯೆಗೆ ಶರಣಾದ ಘಟನೆ ಚಿಕ್ಕಬಳ್ಳಾಪುರ ತಾಲೂಕಿನ ಚಿಕ್ಕಪಾಯಲಗುರ್ಕಿ ಗ್ರಾಮದಲ್ಲಿ ನಡೆದಿದೆ. ಗಿರೀಶ್ (21) ಆತ್ಮಹತ್ಯೆ ಮಾಡಿಕೊಂಡ ಯುವಕ. ಈತ ಗಣೇಶೋತ್ಸವದಲ್ಲಿ ಹಾಡು ಹಾಕಿ ಡ್ಯಾನ್ಸ್ ಮಾಡುತ್ತಿದ್ದು, ರಾತ್ರಿ 11 ಗಂಟೆಯಾದರೂ ಮನೆಗೆ ಬಂದಿರಲಿಲ್ಲ. ಇದರಿಂದ ಆತನ ಸಹೋದರ ಹಾಗೂ ತಾಯಿ ಬಂದು ಮನೆಗೆ ಬಾ ಎಂದು ಬೈದು ಬುದ್ಧಿ ವಾದ ಹೇಳಿದ್ದಾರೆ. ಈ ಮಾತುಗಳಿಂದ ನೊಂದ ಗಿರೀಶ್ ಗ್ರಾಮದ ಹೊರವಲಯದ ಮುತ್ತುರಾಯಸ್ವಾಮಿ ದೇವಾಲಯದ ಬಳಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಬೆಳಗ್ಗೆ ಹೊಲದ ಕಡೆ ಹೋದ ಗ್ರಾಮಸ್ಥರು ಮರದಲ್ಲಿ ನೇತಾಡುತ್ತಿದ್ದ ಯುವಕನ ಶವ ಕಂಡು ಗ್ರಾಮಸ್ಥರಿಗೆ ವಿಷಯ ಮುಟ್ಟಿಸಿದ್ದಾರೆ. ಪೆರೇಸಂದ್ರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು.

ಕಲುಷಿತ ನೀರು ಒಬ್ಬ ಸಾವು, 12 ಜನರು ಅಸ್ವಸ್ಥ

ಮೈಸೂರು: ಕಲುಷಿತ ನೀರು ಸೇವನೆಯಿಂದ ಒಬ್ಬರು ಸಾವನ್ನಪ್ಪಿದ್ದು, 12 ಜನರು ವಾಂತಿ-ಭೇದಿಯಿಂದ ಅಸ್ವಸ್ಥಗೊಂಡಿರುವ ಘಟನೆ ಸಾಲಿಗ್ರಾಮ ತಾಲೂಕಿನ ಬೆಟ್ಟಹಳ್ಳಿಯಲ್ಲಿ ನಡೆದಿದೆ.

ಗೋವಿಂದೇಗೌಡ (65) ಸಾವಿಗೀಡಾದ ವ್ಯಕ್ತಿ. ಗ್ರಾಮದ ಟ್ಯಾಂಕ್‌ನಿಂದ ಸರಬರಾಜಾಗಿದ್ದ ನೀರನ್ನು ಸೇವಿಸಿ ಕೆಲವರಿಗೆ ವಾಂತಿ-ಭೇದಿ ಆಗಿದೆ ಎಂದು ಶಂಕಿಸಲಾಗಿದೆ. ಅಸ್ವಸ್ಥರನ್ನು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಿಸಲಾಗಿದೆ. ಆದರೆ ತೀವ್ರ ಅಸ್ವಸ್ಥಗೊಂಡಿದ್ದ ಗೋವಿಂದೇಗೌಡ ಹಾಸನದ ಸರಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ತಾಲೂಕು ಆಸ್ಪತ್ರೆಯ ವೈದ್ಯರ ತಂಡ ಬೆಟ್ಟಹಳ್ಳಿಗೆ ಭೇಟಿ ನೀಡಿ, ಗ್ರಾಮಸ್ಥರ ಆರೋಗ್ಯದ ಪರಾಮರ್ಶೆ ನಡೆಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ
ಸಂ.ಕಾನಿಅ/ಲೋಇ/ಕವಿ/ತಾಶಾ-3, 1 & 6/ಟೆಂಡರ್.ಅಧಿಸೂಚನೆ/2024-25/2868 ದಿನಾಂಕ: 09.09.2024
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಲೆಕ್ಕ ಶೀರ್ಷಿಕೆ 2059, 3054 ನಿರ್ವಹಣೆ ಹಾಗೂ 8443 ಧಾರ್ಮಿಕ ಧತ್ತಿ ಯೋಜನೆಯಡಿಯಲ್ಲಿ ಒಟ್ಟು (02) ಕಾಮಗಾರಿಗಳು ವರ್ಕ ಇಂಡೆಂಟ್ : 15508, 12668 ಪರಿಶಿಷ್ಟ ಜಾತಿ ವರ್ಗಕ್ಕೆ ಮಿಸಲು: 14799 12571 KPPP Portal ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿಗಾಗಿ ಇಟ್ಟ ಅಂದಾಜು ಮೊತ್ತ: **ಕನಿಷ್ಠ ರೂ. 37.99 ಲಕ್ಷಗಳು ಮತ್ತು ಗರಿಷ್ಠ ರೂ. 128.50 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ನಾಲ್ಕನೇ ಹಾಗೂ ಮೂರನೇ ದರ್ಜೆ ಮೇಲ್ಪಟ್ಟ ನೋಂದಯಿತ ಸಿವಿಲ್ ಗುತ್ತಿಗೆದಾರರಾಗಿರಬೇಕು. 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ KPPP Portal ನಂತೆ, ಇ.ಎಮ್.ಡಿ. ಮೊತ್ತ ಕನಿಷ್ಠ ರೂ. 4800.00 ಮತ್ತು ಗರಿಷ್ಠ ರೂ. 200000.00, 5) ಪ್ರೀ ಬಿಡ್ ಸಭೆ ದಿನಾಂಕ: **13/09/2024 (11.00 ಗಂಟೆಗೆ),** 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **17/09/2024 (17.30 ಗಂಟೆ),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **19/09/2024 (16.00 ಗಂಟೆ),** 8) ತಾಂತ್ರಿಕ ಬಿಡ್ ತೆರೆವುಗೊಳಿಸುವ ದಿನಾಂಕ: **20/09/2024 (16.30 ಗಂಟೆ),** 9) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ: **21/09/2024 (16.30 ಗಂಟೆ),** 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜೀನಿಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ ಕಚೇರಿ, 11) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in, 12) ಗಮನಿಸಬೇಕಾದ ಅಂಶಗಳು: ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಮರು ಟೆಂಡರ್/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮೂಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ, ಟೆಂಡರ್ ರದ್ದುಗೊಳಿಸುವ/ಮರು ಟೆಂಡರ್/ಟೆಂಡರ್ ನಿರಾಕರಿಸುವಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/422/ಕೆಎಸ್‌ಎಂಸಿಎ/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗೆ ಇಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರವರ ಕಚೇರಿ (ಕಾವೇರಿ-ಕಾ&ನಿ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09.					
1.	ಕಾವೇರಿ (ಕಾ&ನಿ) -2	ಬೆಂಜಮಂ/ಕಾನಿಅ (ಕಾ-ಕಾ&ನಿ) -2/ಪಿಬಿ/956/2024-25 ದಿನಾಂಕ: 09.09.2024	ರೂ.74.09 ಲಕ್ಷಗಳು / ರೂ.1.50,000/-	03.10.2024 ಸಂಜೆ 4:00 ಗಂಟೆಯವರೆಗೆ	04.10.2024 ಸಂಜೆ 4:00 ಗಂಟೆಯ ನಂತರ
2.	ಕಾವೇರಿ (ಕಾ&ನಿ) -2	ಬೆಂಜಮಂ/ಕಾನಿಅ (ಕಾ-ಕಾ&ನಿ) -2/ಪಿಬಿ/954/2024-25 ದಿನಾಂಕ: 09.09.2024	ರೂ.21.87 ಲಕ್ಷಗಳು / ರೂ.50,000/-	03.10.2024 ಸಂಜೆ 4:00 ಗಂಟೆಯವರೆಗೆ	04.10.2024 ಸಂಜೆ 4:00 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಕಾವೇರಿ ಕಾ&ನಿ)-2					
ಮುಖ್ಯ ಅಭಿಯಂತರವರ ಕಚೇರಿ (ತ್ಯಾಜ್ಯನೀರು ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09.					
3.	(ತ್ಯಾನೀನಿ -ಎನ್) ಸಿ-ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ-ಎನ್) ಸಿವಿ/ಪಿಬಿ/507/2024-25 ದಿನಾಂಕ: 09.09.2024	ರೂ.88.71 ಲಕ್ಷಗಳು / ರೂ.1.77 ಲಕ್ಷಗಳು	19.09.2024 ಸಂಜೆ 4:00 ಗಂಟೆಯವರೆಗೆ	20.09.2024 ಸಂಜೆ 4:10 ಗಂಟೆಗೆ
4.	(ತ್ಯಾನೀನಿ -ಎನ್) ಸಿ-ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ-ಎನ್) ಸಿವಿ/ಪಿಬಿ/509/2024-25 ದಿನಾಂಕ: 09.09.2024	ರೂ.78.09 ಲಕ್ಷಗಳು / ರೂ.1.84 ಲಕ್ಷಗಳು	19.09.2024 ಸಂಜೆ 4:00 ಗಂಟೆಯವರೆಗೆ	20.09.2024 ಸಂಜೆ 4:10 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ-ಎನ್) ಸಿ-ವ್ಯಾಲಿ					
5.	(ತ್ಯಾನೀನಿ -ಯೋ) ಕೆ&ಟಿ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ-ಯೋ) ಕೆ&ಟಿ/ಸಅ/664/2024-25 ದಿನಾಂಕ: 10.09.2024	ರೂ.20,99,660/- / ರೂ.41,993/-	18.09.2024 ಸಂಜೆ 4:00 ಗಂಟೆಯವರೆಗೆ	20.09.2024 ಸಂಜೆ 4:05 ಗಂಟೆಯ ನಂತರ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ-ಯೋ) ಕೆ&ಟಿ-ವ್ಯಾಲಿ					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್ ಅಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/AAPL/RO1931/24-25

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in
ಸಂಖ್ಯೆ: ಹೊಯೋಪ್ರಾ/ಭೂಉಬ/22/2024-25 ದಿನಾಂಕ: 10-09-2024
ಸಾರ್ವಜನಿಕ ಪ್ರಕಟಣೆ
ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಗೊಟ್ಟಿಪುರ ಗ್ರಾಮ

ಕ್ರ. ಸಂ.	ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀ ವಿನೋದ್ ಕುಮಾರ್ ರೆಡ್ಡಿ ಅಬ್ಬವರಂ ಬಿನ್ ವಿಜಯ್ ಮೋಹನ್ ರೆಡ್ಡಿ ಅಬ್ಬವರಂ	49/26	01-00 3/4
2		49/42	01-09

ಷರಾ:- ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ / ಕೈಗಾರಿಕೆ ಬೆಳವಣಿಗೆಗಳು ಬಂದಿದ್ದು / ಬರುತ್ತಲಿದ್ದು, ಉದ್ದೇಶಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.
ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.
ವಾಸಾಸಂಇ/ವಾ.ಪ್ರ/1947/ಅಡ್ವರ್ಟೋರ್/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ
ಸಂ:ಡಿಒಎಂ-1/ಹೊಸನೇ/ಸಿಆರ್-77/2023-24 ದಿನಾಂಕ:09.09.2024
ಪ್ರಕಟಣೆ
ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿನಿಲಯಗಳು/ ವಸತಿ ಶಾಲೆಗಳು/ ಕಾಲೇಜು ಹಾಗೂ ಜಿಲ್ಲಾ ಕಛೇರಿ/ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು 2024-25 ನೇ ಸಾಲಿಗೆ ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ ಟೆಂಡರ್‌ಅನ್ನು Online System (https://kppp.karnataka.gov.in) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. 1)ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ.247.93 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ.3,71,895 ಲಕ್ಷಗಳು, 2)ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:10.09.2024 3)ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:09.10.2024 ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಆಕಾಶವಾಣಿ ಹಿಂಭಾಗ, ಹಾಸನ (ದೂರವಾಣಿ ಸಂಖ್ಯೆ:08712-267373) ಇವರನ್ನು ಸಂಪರ್ಕಿಸಬಹುದಾಗಿದೆ.
ಸಹಿ/-(ಸುನಿತಾ ಎ.ಎಸ್) ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಸನ ಜಿಲ್ಲೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/432/ಕೆಎಸ್‌ಎಂಸಿಎ/2024-25

ಯುವ ಸಂಭ್ರಮ ಉಪ ಸಮಿತಿ -2024
ಮೈಸೂರು ಜಿಲ್ಲೆ, ಮೈಸೂರು.
ಮೈಸೂರು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು
Email: yuvasambrama.2024@gmail.com
ಅನುಬಂಧ-ಬಿ (ಸರಕು ಮತ್ತು ಸೇವೆಗಳು)
ಟೆಂಪ್ರಸಂ: ಯು.ಸ.ಉ.ಸ/ಸಿಆರ್-01/2024-25 ದಿ: 06.09.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
Website: https://kppp.karnataka.gov.in
ಸಹ ಕಾರ್ಯಾಧ್ಯಕ್ಷರು, ಯುವ ಸಂಭ್ರಮ ಉಪ ಸಮಿತಿ, ಮೈಸೂರು ಇವರು ಸರಬರಾಜು/ಸೇವೆಯ ಟೆಂಡರ್ ಅನ್ನು ನಿಯಮಾನುಸಾರ ಏಕ-ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮಗಳ 2000ರಂತೆ ಹಾಗೂ ಅರ್ಹ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ-3ರ ನಿಯಮಗಳನ್ವಯ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಅರ್ಹ ದರ್ಜೆ ನೊಂದಾಯಿತ ಸಂಸ್ಥೆ/ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 13.09.2024 ರ ಸಂಜೆ 5.27 ವರೆಗೆ ಮತ್ತು 17.09.2024ರ ಸಂಜೆ 4.00 ವರೆಗೆ. ಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ನಿಂದ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ದೂರವಾಣಿ ಸಂಖ್ಯೆ: 0821-2419345/9845550590ರಲ್ಲಿ ಪಡೆಯಬಹುದಾಗಿದೆ ಅಥವಾ ಈ ಕಛೇರಿಯನ್ನು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/- ಸಹ ಕಾರ್ಯಾಧ್ಯಕ್ಷರು, ಯುವ ಸಂಭ್ರಮ ಉಪ ಸಮಿತಿ-2024, ಮೈಸೂರು
DIPR/DDMYS-529/KSMCA-357/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ. ಮ.ಎ.ಕಾ. ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ-591116ತಾಲೂಕು:ಸವದತ್ತಿ. ಜಿಲ್ಲಾ:ಬೆಳಗಾವಿ. ರಾಜ್ಯ:ಕರ್ನಾಟಕ
Dn. e-mail: eemlbcnth@gmail.com Ph: - 08330-224516
ಟೆಂಡರ ಪ್ರಕಟಣೆ ಸಂಖ್ಯೆ/ಮಕಾನಿವಿ.2/ಡಿಬಿ/4701-22-23 SCP-TSP /ಇ-ಟೆಂಡರ/2024-25/1490 & 1491, ದಿನಾಂಕ: 29-08-2024
ಅಲ್ಪಾವಧಿ ಟೆಂಡರ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ)
(ದ್ವಿ ಲಕೋಟೆ ಪದ್ಧತಿಯಲ್ಲಿ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ ಕಚೇರಿ ಅಡಿಯಲ್ಲಿ 4701 SCP/ TSP ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲೂ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ-ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರನ್ನು ಆಹ್ವಾನಿಸಲಾಗಿದೆ
(Work Indent Numbers. 1096 & 1097)
ಕಾಮಗಾರಿಯ ಅಂದಾಜು ಮೊತ್ತ ರೂ. 100.00 & 105.00 ಲಕ್ಷಗಳು.
1. ಗುತ್ತಿಗೆದಾರರು ಇ-ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20-09-2024 ರಂದು ಸಂಜೆ 4.00 ಘಂಟೆವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 23-09-2024 ರಂದು 11.00 ಘಂಟೆಯ ನಂತರ 3. ಆರ್ಥಿಕ ಬಿಡ್ ತೆರೆಯುವ ದಿನಾಂಕ :25-09-2024 ರಂದು 11.00 ಘಂಟೆಯ ನಂತರ
ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224516 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.
ಸಹಿ/-(ಪಿ.ವ್ಹಿ.ಮುಳ್ಳೂರ), ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ. ಮ.ಎ.ಕಾ.ನಿ.ವಿಭಾಗ.ನಂ.2 ನವಿಲುತೀರ್ಥ.
DIPR/BGM/RO-NO-790/KSMCA/2024-25

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560009, ದೂರವಾಣಿ: 080-22273511-16
ಟೆಂಡರ್ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡನ್ನು ಕರೆಯಲಾಗಿದೆ.
ಕಾಮಗಾರಿಯ ಹೆಸರು :ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿಯ ಕಾಡುಜಕ್ಕನಹಳ್ಳಿ ಗ್ರಾಮದ ಸೂರ್ಯನಗರ 4ನೇ ಹಂತದ ಬ್ಲಾಕ್-12ಎ ರಲ್ಲಿ ನಿವೇಶನಗಳು ಮತ್ತು ಸೇವೆಗಳು ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ. ಕಾಮಗಾರಿ ಇಂಡೆಂಟ್ & ಐಎಫ್‌ಟಿ ನಂ.: KHB/2024-25/OW/ WORK_INDENT 277 & IFT No. 50/2024-25, Date: 10.09.2024.
ಟೆಂಡರ್‌ಗಿಟ್ಟ ಮೊತ್ತ(ರೂ ಗಳಲ್ಲಿ) : 7,40,01,627/-
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 10.10.2024 ಸಂಜೆ 4.00 ಗಂಟೆವರೆಗೆ
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ದೂರವಾಣಿ: 080-22273511/ 080-22100077
website:https://eproc.karnataka.gov.in
ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/1948/Zen/2024-25

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಉಪ ನಿರ್ದೇಶಕರು (ಗ್ರಾ.ಕೈ)ರವರ ಕಚೇರಿ, ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್, ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 109, ಹುಬ್ಬಳ್ಳಿ ರೋಡ, ಗದಗ-582103. ದೂರವಾಣಿ : 08372-220506.
Mail : ddkvi-gadag@karnatakaindustry.gov.in
ಸಂಖ್ಯೆ: ಜಿಪಂಗ/ಉನಿ(ಗ್ರಾಕೈ)/ಹೊಆಮಾಸ/ಕಂ&ಡಿಗೂ/ಟೆಂಡರ್/2024-25 ದಿನಾಂಕ : 10-09-2024
ಟೆಂಡರ್ ಪ್ರಕಟಣೆ
2024-25ನೇ ಸಾಲಿಗೆ ಉಪ ನಿರ್ದೇಶಕರು (ಗ್ರಾಕೈ) ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್ ಗದಗ ಕಚೇರಿ ಕೆಲಸ ಕಾರ್ಯಗಳಿಗೆ ವಿವಿಧ ಹುದ್ದೆಗಳ ಮಾನವ ಸಂಪನ್ಮೂಲ ಪೂರೈಕೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಅನ್ವಯ ಅರ್ಹ ಪೂರೈಕೆದಾರರಿಂದ ಕೆಪಿಪಿಪಿ ಪೋರ್ಟಲ್ ಮೂಲಕ ಅಲ್ಪಾವಧಿ ಇ-ಟೆಂಡರ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ನಲ್ಲಿ ಹಾಗೂ ಕಚೇರಿಯ ದೂರವಾಣಿ ಸಂಖ್ಯೆ: **08372-220506** ಗೆ ಸಂಪರ್ಕಿಸಲು ಕೋರಲಾಗಿದೆ.
(1) ಟೆಂಡರ್ ಪ್ರಕಟಣೆ ದಿನಾಂಕ : **06-09-2024** (2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **21-09-2024** (ಸಂಜೆ 5-00 ಗಂಟೆಯೊಳಗೆ) (3) ತಾಂತ್ರಿಕ ಬಿಡ ತೆರೆಯಲು ದಿನಾಂಕ : **23-09-2024** (ಬೆಳಿಗ್ಗೆ 11-00 ಗಂಟೆಗೆ) (4) ಆರ್ಥಿಕ ಬಿಡ ತೆರೆಯಲು ದಿನಾಂಕ : **25-09-2024** (ಬೆಳಿಗ್ಗೆ 11-00 ಗಂಟೆಗೆ) (5) ಇಎಂಡಿ ಮೊತ್ತ ರೂ. **14122/-**
ಸಹಿ/- ಉಪ ನಿರ್ದೇಶಕರು(ಗ್ರಾಕೈ) ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/211/2024-25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ - 580001 ದೂರವಾಣಿ: 0836-2448310
ಇ-ಮೇಲ್: eemidivdwd@yahoo.com , midn_dwd@rediffmail.com
ಸಂಖ್ಯೆ: ಕಾನಿಇಂ/ಸನೀವಿಧಾ/ಯೋಶಾ-1/2024-25/1093 ದಿನಾಂಕ: 10/09/2024
ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 08/2024-25 ದಿನಾಂಕ: 10-09-2024
ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ **ಧಾರವಾಡ, ರಾಣೆಬೆನ್ನೂರು, ಗದಗ ಮತ್ತು ಹಾನಗಲ್ ಉಪವಿಭಾಗದ ಈ ಕೆಳಗಿನ ಕಾಮಗಾರಿಗಳನ್ನು ಕೆ.ಡಬ್ಲ್ಯೂ-2,3&4 (ದ್ವಿ ಲಕೋಟೆ) ಪದ್ಧತಿಯಲ್ಲಿ "ಇ-ಪ್ರೊಕ್ಯೂರ್‌ಮೆಂಟ್" ಮುಖಾಂತರ ಟೆಂಡರ್ ಕರೆಯಲಾಗಿದೆ. 4702-ಅಣೆಕಟ್ಟು ಪಿಕಪ್ ಬಾಂದಾರ ಪ್ರಧಾನ ಕಾಮಗಾರಿಗಳು (ಒಟ್ಟು 12 ಕಾಮಗಾರಿಗಳು), 4702-ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು, (ಒಟ್ಟು 02 ಕಾಮಗಾರಿಗಳು), 4702-ಏತ ನೀರಾವರಿ ಯೋಜನೆ-ಪ್ರಧಾನ ಕಾಮಗಾರಿಗಳು(ಒಟ್ಟು 01 ಕಾಮಗಾರಿಗಳು), 4702-ಪ್ರವಾಹ ನಿಯಂತ್ರಣ, (ಒಟ್ಟು 01 ಕಾಮಗಾರಿಗಳು)**
ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ.990.00 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ: 14.85 ಲಕ್ಷಗಳು; ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 40.00 ಲಕ್ಷಗಳು; ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ:0.50ಲಕ್ಷಗಳು; ಖಾಲಿ ಟೆಂಡರ್ ಫಾರಂಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ದಿನಾಂಕ: 17/09/2024ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ: 23.09.2024 ರ 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 25.09.2024 ಸಂಜೆ 17.45 ಗಂಟೆಗೆ ತೆರೆಯಲಾಗುವುದು.
ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಬದಲಾವಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ವಿಭಾಗ ಧಾರವಾಡ
ಡಿಐಪಿಆರ್/ಧಾರವಾಡ/378/ ಮಣಿಪಾಲ್/2024-25

ಟ್ವೀಟೂ-ಖಾರಾ



ಬಿಜೆಪಿ, ಕರ್ನಾಟಕ

ಮೀಸಲು ವಿರೋಧಿಸುವುದು, ದಲಿತ ನಾಯಕರನ್ನು ಮೂಲೆಗೆ ಅಟ್ಟುವುದು, ಶೋಷಿತರನ್ನು ಸದಾ ಕಡೆಗಣಿಸುವುದು ಕಾಂಗ್ರೆಸ್‌ಗೆ ರಕ್ತಗತವಾಗಿ ಬಂದಿದೆ. ಇದರ ಮುಂದುವರಿದ ಭಾಗವಾಗಿ ದಲಿತದ್ವೇಷಿ ರಾಹುಲ್ ಗಾಂಧಿ ಅಮೆರಿಕಾದಲ್ಲಿ ನಿಂತು ಮೀಸಲು ರದ್ದುಪಡಿಸುವುದಾಗಿ ಹೇಳಿದ್ದಾರೆ.

ವೇದಾವತಿ, ಬೆಂಗಳೂರು

ಯಾರಪ್ಪ ಅದು ಅಡ್ಮಿನ್ ಸರ್. ರಾಹುಲ್ ಮೀಸಲು ತೆಗೀರಿ ಅಂದಿಲ್ಲ. ಸಮಾನತೆ ಸಿಗುವವರೆಗೂ ಮೀಸಲು ಇರಬೇಕು ಅಂದಿದ್ದಾರೆ. ಈ ಮೂಲಕ ಅವರು ಹೇಳಿದ್ದು 'ನನ್ನ ದೇಶ ಸರಿ ಇಲ್ಲ' ಎಂದು. ರಾಹುಲ್ ಮೀಸಲು ರದ್ದುಪಡಿಸಿ ಅಂದ್ರೆ ಕಾಂಗಿಗಳು ಗಂಜಿಗೇನ್ಮಾಡ್ತಾರೆ..?

ಸಮಾಚಾರ ಸಣ್ಣದಲ್ಲ

ಎಂಕಾಂ ಪರೀಕ್ಷೆಯಲ್ಲಿ ಅಪೂರ್ಣ ಪ್ರಶ್ನೆಪತ್ರಿಕೆ

ದಾವಣಗೆರೆ: ದಾವಣಗೆರೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬುಧವಾರ ನಡೆದ ಎಂ.ಕಾಂ 4 ನೇ

ಸೆಮಿಸ್ಟರ್ ಬಿಸಿನೆಸ್ ಅಪ್ಲಿಕೇಶನ್ ಅಂಡ್ ರಿಸರ್ಚ್ ವಿಷಯಕ್ಕೆ ಸಂಬಂಧಿಸಿದಂತೆ ಅಪೂರ್ಣ ಪ್ರಶ್ನೆಪತ್ರಿಕೆ ವಿತರಿಸಿದ್ದರಿಂದ ಪರೀಕ್ಷಾರ್ಥಿಗಳು ಗೊಂದಲಕ್ಕೆ ಒಳಗಾದ ಘಟನೆ ನಡೆದಿದೆ. ಬೆಳಗ್ಗೆ 10ಕ್ಕೆ ಎಂ.ಕಾಂ 4 ನೇ ಸೆಮಿಸ್ಟರ್‌ನ ಬಿಸಿನೆಸ್ ಅಪ್ಲಿಕೇಶನ್ ಅಂಡ್ ಆಪರೇಶನ್ ರಿಸರ್ಚ್ ವಿಷಯವಾಗಿ ಪರೀಕ್ಷೆ ನಡೆದಿದ್ದು, ಪ್ರಶ್ನೆ ಪತ್ರಿಕೆಯಲ್ಲಿ ಅಪೂರ್ಣವಾದ ಪ್ರಶ್ನೆಗಳನ್ನು ನೀಡಿರುವುದನ್ನು ಗಮನಿಸಿದ ವಿದ್ಯಾರ್ಥಿ ಗಳಲ್ಲಿ ಗೊಂದಲ ಮೂಡಿದೆ. 70 ಅಂಕಗಳ ಪ್ರಶ್ನೆ ನೀಡಲಾಗಿದ್ದು, ಪ್ರಶ್ನೆಗಳು ಅಪೂರ್ಣವಾಗಿದ್ದರಿಂದ ವಿದ್ಯಾರ್ಥಿಗಳಿಗೆ ಉತ್ತರ ಬರೆಯಲಾಗದೆ ಪರದಾಡಬೇಕಾಯಿತು.ಪ್ರಶ್ನೆಪತ್ರಿಕ ಿಯ ಎಡವಟ್ಟಿನಿಂದ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ ಎಂದು ಪೋಷಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಓಲಾ ಶೋರೂಂಗೆ ಬೆಂಕಿ ಇಟ್ಟ ಭೂಪ

ಕಲಬುರಗಿ: ಓಲಾ ಎಲೆಕ್ಟ್ರಿಕ್ ಬೈಕ್ ಶೋರೂಂಗೆ ಬೆಂಕಿ ಅವಘಡ ಪ್ರಕರಣಕ್ಕೆ ಬಿಗ್ ಟ್ವಿಸ್ಟ್ ಸಿಕ್ಕಿದ್ದು, ಶಾರ್ಟ್ ಸರ್ಕ್ಯುಟ್ ನಿಂದ ಬೆಂಕಿ ತಗುಲಿಲ್ಲ. ಬದಲಿಗೆ ಎಲೆಕ್ಟ್ರಿಕ್

ಬೈಕ್ ಸರಿಯಾಗಿ ರಿಪೇರಿ ಮಾಡಿಲ್ಲವೆಂದು ಕೋಪಗೊಂಡ ಗ್ರಾಹಕನೊಬ್ಬ ಇಡೀ ಶೋರೂಂಗೆ ಬೆಂಕಿ ಹಚ್ಚಿದ ಘಟನೆ ಮಂಗಳವಾರ ಬೆಳಕಿಗೆ ಬಂದಿದೆ. ನಗರದ ಹುಮನಬಾದ್ ಬೇಸ್ ನಲ್ಲಿರುವ ಓಲಾ ಎಲೆಕ್ಟ್ರಿಕ್ ಬೈಕ್ ಶೋರೂಂಗೆ ಮಂಗಳವಾರ ಬೆಳಗ್ಗೆ ಬಾಟಲ್‌ನಲ್ಲಿ ಪೆಟ್ರೋಲ್ ಕೊಂಡೊಯಿದ್ದ ಗ್ರಾಹಕ ಮಹ್ಮದ್ ನದೀಮ್ ತನ್ನ ದ್ವಿಚಕ್ರವಾಹನ ಸರಿಯಾಗಿ ರಿಪೇರಿ ಆಗಿಲ್ಲವೆಂದು ಸಿಬ್ಬಂದಿ ಜತೆ ವಾಗ್ವಾದ ನಡೆಸಿದ್ದ. ಬಳಿಕ ಶೋರೂಮ್ ಗೆ ಬೆಂಕಿ ಹಚ್ಚಿದ್ದಾನೆ ಎಂದು ತಿಳಿದು ಬಂದಿದೆ. ಪೊಲೀಸರ ತನಿಖೆ ವೇಳೆ ಬೆಂಕಿ ಹಚ್ಚಿದ ಕೃತ್ಯ ಬೆಳಕಿಗೆ ಬಂದಿದ್ದು, ಚೌಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿ ಮಹ್ಮದ್ ನದೀಮ್‌ನನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ಗೋಕರ್ಣ ಬೀಚ್‌ನಲ್ಲಿ ಮುಳುಗಿ ಯುವಕ ಸಾವು

ಕಾರವಾರ: ಸಮುದ್ರದಲ್ಲಿ ಈಜಲು ತೆರಳಿದ್ದ ಬೆಂಗಳೂರು ಮೂಲದ ಪ್ರವಾಸಿಗರಲ್ಲಿ ಒಬ್ಬ ನೀರಿನಲ್ಲಿ ಸಿಲುಕಿ ನಾಪತ್ತೆಯಾಗಿದ್ದು, ಐವರು ಅಸ್ವಸ್ಥಗೊಂಡ ಘಟನೆ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಬಾವಿಕೊಡ್ಲ ಕಡಲತೀರದಲ್ಲಿ ನಡೆದಿದೆ. ಕೋಲಾರದ ಶ್ರೀನಿವಾಸಪುರದ ವಿನಯ ಎಸ್.ವಿ (22) ನೀರುಪಾಲಾದ ವಿದ್ಯಾರ್ಥಿ. ಆತನ ಮೃತದೇಹಕ್ಕಾಗಿ ಶೋಧಕಾರ್ಯ ಮುಂದು ವರಿದಿದೆ. ಬೆಂಗಳೂರಿನ ಖಾಸಗಿ ಫಾರ್ಮಸಿ ಕಾಲೇಜಿನ 48 ವಿದ್ಯಾರ್ಥಿಗಳು ಗೋಕರ್ಣಕ್ಕೆ ಪ್ರವಾಸಕ್ಕೆ ಬಂದಿದ್ದರು. ಈ ವೇಳೆ ಸಮುದ್ರದಲ್ಲಿ ಮೋಜು ಮಸ್ತಿ ಮಾಡಲು ತೆರಳಿದ್ದ ವೇಳೆ ಈ ಅವಘಡ ನಡೆದಿದೆ. ವಿದ್ಯಾರ್ಥಿಗಳು ಅಪಾಯಕ್ಕೆ ಸಿಲುಕಿದ್ದನ್ನು ಗಮನಿಸಿ ದುಬ್ಬಸಸಿಯ ಸರ್ವೇಶ ಮೊರ್ಜೆ ಮತ್ತು ಪಂಢರಿನಾಥ ಮೂರ್ಜೆ ತಕ್ಷಣ ರಕ್ಷಣೆಗೆ ಧಾವಿಸಿ, ಐವರನ್ನು ಪಾರುಮಾಡಿದರು.

ಫನ್‌ತರಂಗ

– ರಘುಪತಿ ಶೃಂಗೇರಿ –

ಪಕ್ಷಾಂತರ ಮಾಡುವ ಶಾಸಕರಿಗೆ ಇನ್ನು ಮುಂದೆ ಪೆನ್ಷನ್ ಇಲ್ಲ – ಹಿಪ್ರ ಸರ್ಕಾರ

ಸುದ್ದಿ

ನೋಂದಣಿಗೆ ವೇಗ ನೀಡುವಂತೆ ವರಿಷ್ಠರ ಸೂಚನೆ | ಜಿಲ್ಲಾ ಕೇಂದ್ರಗಳಲ್ಲಿ ಕುಳಿತು ಸದಸ್ಯತ್ವ ನೋಂದಣಿಗೆ ವೇಗ ನೀಡಿ

ಸದಸ್ಯತ್ವ ಅಭಿಯಾನಕ್ಕೆ ಸಿಗದ ವೇಗ; ವರಿಷ್ಠರ ಅಸಮಾಧಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಒಂದುಕಾಲು ಕೋಟಿಯ ನಿರೀಕ್ಷೆಯೊಂದಿಗೆ ಶುರುವಾದ ಬಿಜೆಪಿಯ ಸದಸ್ಯತ್ವ ಅಭಿಯಾನ, ಟೇಕ್ ಆಫ್ ಆಗುತ್ತಿಲ್ಲ ಎನ್ನುವ ಅಸಮಾಧಾನವನ್ನು ಪಕ್ಷದ ವರಿಷ್ಠರು ಹೊರಹಾಕಿದ್ದು, ಕೂಡಲೇ ನೋಂದಣಿ ಅಭಿಯಾನಕ್ಕೆ ವೇಗ ನೀಡಿ ಎನ್ನುವ ಖಡಕ್ ಸೂಚನೆ ನೀಡಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಪ್ರಮುಖರನ್ನು ದೆಹಲಿಗೆ ಕರೆಸಿಕೊಂಡಿರುವ ಬಿಜೆಪಿ ವರಿಷ್ಠರು, ನೋಂದಣಿ ಕಾರ್ಯ ಆರಂಭಗೊಂಡು ಒಂದು ವಾರ ಕಳೆದರೂ ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ. ಕಳೆದ ವರ್ಷ 1.10 ಕೋಟಿ ಸದಸ್ಯತ್ವವನ್ನು ರಾಜ್ಯ ಬಿಜೆಪಿ ಮಾಡುವಲ್ಲಿ ಯಶಸ್ವಿಯಾಗಿತ್ತು. ಆದರೆ ಈ ಬಾರಿ ವಾರ ಕಳೆದರೂ ಸದಸ್ಯತ್ವ ಸಂಖ್ಯೆ 10 ಲಕ್ಷ ದಾಟಿಲ್ಲ ಎನ್ನುವುದು ವರಿಷ್ಠರ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ

ವಿವಿಧ ರಾಜ್ಯಗಳ ಸದಸ್ಯತ್ವ ಅಭಿಯಾನದ ಮಾಹಿತಿಯನ್ನು ಪಡೆದುಕೊಂಡಿರುವ ಬಿಜೆಪಿ ವರಿಷ್ಠರು, ಕರ್ನಾಟಕ ಬಿಜೆಪಿಯ ಪ್ರದರ್ಶನ ತೃಪ್ತಿದಾಯಕವಾಗಿಲ್ಲವೆಂದು ನೇರವಾಗಿ ಹೇಳಿದೆ. ಇದರೊಂದಿಗೆ ಇನ್ನುಳಿದ ಸಮಯದಲ್ಲಿ ನಿರೀಕ್ಷಿತ ಮಟ್ಟದಲ್ಲಿ ನೊಂದಣಿ ಕಾರ್ಯವನ್ನು ಮಾಡಿಸಬೇಕು. ಈ ನಿಟ್ಟಿನಲ್ಲಿ ಎಲ್ಲ ಮೋರ್ಚಾಗಳಿಗೆ ಸ್ಪಷ್ಟ ಸಂದೇಶವನ್ನು ರವಾನಿಸಿ ಎಂದು ಸೂಚನೆ ನೀಡಿದ್ದಾರೆ ಮೂಲಗಳು ತಿಳಿಸಿವೆ.

ರಾಜ್ಯದ ಸದಸ್ಯತ್ವ ಅಭಿಯಾನವನ್ನು ಗಂಭೀರವಾಗಿ ಪರಿಗಣಿಸಿರುವ ದೆಹಲಿ ನಾಯಕರು ಪ್ರತಿ ಬೂತ್ ಮಟ್ಟದಲ್ಲಿ ಪಕ್ಷವನ್ನು ಬಲ ಪಡಿಸುವಂತೆ ಸಲಹೆ ನೀಡಿದ್ದಾರೆ. ಎಲ್ಲಾ ಪ್ರಮುಖ ನಾಯಕರು ಪ್ರತಿ ತಾಲೂಕು ಮಟ್ಟದಲ್ಲಿ ಎರಡು ದಿನಗಳ ಕಾಲ ಅಲ್ಲೇ ವಾಸ್ತವ್ಯ ಹೂಡಿ ಹೆಚ್ಚು ಸದಸ್ಯತ್ವ ಮಾಡುವುದಕ್ಕೆ ಒತ್ತು ಕೊಡುವಂತೆ ಸಲಹೆ ನೀಡಿದ್ದಾರೆ.

-ಆರ್.ಅಶೋಕ್ ಪ್ರತಿಪಕ್ಷ ನಾಯಕ

ಸದಸ್ಯತ್ವ ಅಭಿಯಾನಕ್ಕೆ ಶೇ.40 ರಷ್ಟು ಹೆಚ್ಚು ಗುರಿ ನೀಡಲಾಗಿದ್ದು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು. ಸುಮಾರು 60 ಲಕ್ಷ ಹೆಚ್ಚು ಸದಸ್ಯತ್ವ ಗುರಿ ತಲುಪಬೇಕು. ಯಾವ ವಿಭಾಗದಲ್ಲಿ ನ್ಯೂನತೆ ಇದೆ ಎಂದು ಸ್ವತಃ ಅಮಿತ್ ಶಾ ತಿಳಿಸಿದ್ದು ಆ ಬಗ್ಗೆ ಮುಂದಿನ ದಿನಗಳಲ್ಲಿ ಹೆಚ್ಚು ಒತ್ತು ಕೊಡಲಾಗುವುದು.

ನಂದೀಶ್ ರೆಡ್ಡಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಜಿಲ್ಲೆಯಲ್ಲಿ ನಾಯಕರು ತಂಗಬೇಕು: ಈ ಬಾರಿ ದಕ್ಷಿಣ ಭಾರತದಲ್ಲಿ ಸದಸ್ಯತ್ವವನ್ನು ಹೆಚ್ಚಿಸಬೇಕು ಎನ್ನುವ ಗುರಿಯನ್ನು ಬಿಜೆಪಿ ವರಿಷ್ಠರು ಹೊಂದಿದ್ದಾರೆ. ದಕ್ಷಿಣ ಭಾರತದಲ್ಲಿ ಈ ಗುರಿ ಸಾಧಿಸಲು ಕರ್ನಾಟಕ ಬಿಜೆಪಿಗೆ ಪ್ರಮುಖ ರಾಜ್ಯವಾಗಲಿದೆ. ಆದರೆ ಕರ್ನಾಟಕದಲ್ಲಿಯೇ ನಿರೀಕ್ಷಿತ ಫಲಿತಾಂಶ ಸಿಗದಿರುವುದು ವರಿಷ್ಠರ ಬೇಸರಕ್ಕೆ ಕಾರಣವಾಗಿದೆ. ಆದ್ದರಿಂದ ಮುಂದಿನ ದಿನದಲ್ಲಿ ಬಿಜೆಪಿಯ ನಾಯಕರಿಗೆ ಜಿಲ್ಲಾವಾರು ಜವಾಬ್ದಾರಿಗಳನ್ನು ನೀಡಬೇಕು. ಯಾವ ಜಿಲ್ಲೆಗೆ ನಿಯೋಜನೆ ಮಾಡಲಾಗಿದೆಯೋ ಆ ಜಿಲ್ಲೆಗೆ ನಾಯಕರು ಹೋಗಿ, ಎರಡು ದಿನಗಳ ಕಾಲ ಅಲ್ಲಿಯೇ ತಂಗಿ ಸದಸ್ಯತ್ವದ ನೇತೃತ್ವವನ್ನು ವಹಿಸಿಕೊಳ್ಳಬೇಕು. ಯಾರು ಸರಿಯಾಗಿ ಜವಾಬ್ದಾರಿ ನೀಡುವುದಿಲ್ಲವೋ ಅವರ ವಿರುದ್ಧ ಕ್ರಮಕ್ಕೆಗೊಳ್ಳಬೇಕಾಗುತ್ತದೆ ಎನ್ನುವ ಎಚ್ಚರಿಕೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ರಾಜ್ಯಕ್ಕೆ ಶಾ, ಸಂತೋಷ್?



ಕಳೆದ ವಿಧಾನಸಭಾ ಚುನಾವಣೆಯಿಂದ ಕರ್ನಾಟಕದಲ್ಲಿ ಪಕ್ಷ ಸಂಘಟನೆಯಲ್ಲಿ ತೀವ್ರ ಸಮಸ್ಯೆ ಕಾಣಿಸಿರುವುದನ್ನು ಅಮಿತ್ ಶಾ ಗಂಭೀರವಾಗಿ ಪರಿಗಣಿಸಿದ್ದಾರೆ. ಆದ್ದರಿಂದ ಸದಸ್ಯತ್ವ ನೋಂದಣಿ ಕಾರ್ಯ ಪೂರ್ಣಗೊಳ್ಳುವ ವೇಳೆಗೆ ಒಂದು ದಿನ ಮಟ್ಟಿಗೆ ಅಮಿತ್ ಶಾ ಅವರು ರಾಜ್ಯಕ್ಕೆ ಆಗಮಿಸುವ ಸಾಧ್ಯತೆಯಿದೆ. ಬಳಿಕ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸಹ ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಲೇಹ್‌ನಲ್ಲಿ ಮೈಸೂರಿನ ಚಾರಣಿಗ ಸಾವು

ಮೈಸೂರು: ಲಡಾಖ್‌ನ ಲೇಹ್‌ಗೆ ಚಾರಣಕ್ಕೆ ತೆರಳಿದ್ದ ವೇಳೆ ಉಸಿರಾಟದ ತೊಂದರೆಯಿಂದ ಮೈಸೂರು ಮೂಲದ ಎಂಜಿನಿಯರ್ ಮೃತಪಟ್ಟಿದ್ದಾರೆ. ಬೆಂಗಳೂರಿನ ಜಿಇ ಎಲೆಕ್ಟ್ರಿಕಲ್ಸ್-ಮೆಡಿಕಲ್ ಎಕ್ವಿಪ್‌ಮೆಂಟ್ ವಿಂಗ್‌ನ ಡೆಪ್ಯುಟಿ ಮ್ಯಾನೇಜರ್ ನರೇನ್ ಕೌಶಿಕ್ (44) ಮೃತರು.

ಮೈಸೂರು ಮಹಾರಾಜ ಪದವಿ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಆರ್.ಎನ್.ಪದ್ಮನಾಭ ಅವರ ಪುತ್ರರಾಗಿದ್ದು, ಹರಿಯಾಣದಿಂದ ಲೇಹ್‌ಗೆ ಚಾರಣಕ್ಕೆ ಕೌಶಿಕ್ ತೆರಳುತ್ತಿದ್ದಾಗ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಸೆ.2ರಂದು ನರೇನ್ ಕೌಶಿಕ್ ತಮ್ಮ

ಏಳು ಸ್ನೇಹಿತರ ಜತೆ ಬೆಂಗಳೂರಿನಿಂದ ಉತ್ತರ ಭಾರತಕ್ಕೆ ಚಾರಣಕ್ಕಾಗಿ ತೆರಳಿದ್ದರು. ಅವರೊಂದಿಗೆ ಇಬ್ಬರು ವೈದ್ಯರು ಹಾಗೂ ಇಬ್ಬರು ಶೆರ್ಪಾಗಳೂ ಇದ್ದರು. ಆದರೆ, ಪರ್ವತ ಪ್ರದೇಶದಲ್ಲಿ 18000 ಅಡಿ ಎತ್ತರದಲ್ಲಿದ್ದಾಗ ಅವರಿಗೆ ಉಸಿರಾಟದ ತೊಂದರೆ ಕಾಣಿಸಿಕೊಂಡಿದೆ. ವೈದ್ಯರು ಸರ್ವ ಪ್ರಯತ್ನ ಮಾಡಿದರೂ ಅವರನ್ನು ಬದುಕಿಸಲು ಸಾಧ್ಯವಾಗಿಲ್ಲ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಲೇಹ್‌ನಲ್ಲೇ ಅಂತ್ಯಕ್ರಿಯೆ

ಸೆ.8ರಂದು ನರೇನ್ ಕೌಶಿಕ್ ನಿಧನದ ಸುದ್ದಿ ತಿಳಿದ ಕುಟುಂಬಸ್ಥರು ಸೆ.9ರಂದು ಲೇಹ್‌ತಲುಪಿದ್ದರು. 10ರಂದು ಸ್ಥಳೀಯ ಅಧಿಕಾರಿಗಳ ನೆರವಿನಿಂದ ಅಲ್ಲೇ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆ. ಮೃತದೇಹವನ್ನು ಮೈಸೂರಿಗೆ ತಲುಪಿಸಲು ವ್ಯವಸ್ಥೆ ಮಾಡುವುದಾಗಿ ಅಲ್ಲಿನ ಅಧಿಕಾರಿಗಳು ತಿಳಿಸಿದ್ದರು. ಆದರೆ, ನರೇನ್ ಅವರು ಮೃತಪಟ್ಟು ಮೂರು ದಿನ ಆಗಿದ್ದರಿಂದ ಲೇಹ್‌ನಲ್ಲೇ ಅಂತ್ಯ ಸಂಸ್ಕಾರ ಮಾಡಿದ್ದಾರೆ.

ಸಿದ್ದರಾಮಯ್ಯ ಪರ ಪ್ರತಾಪ್‌ಸಿಂಹ ಬ್ಯಾಟಿಂಗ್

ಮೈಸೂರು ಚಾಮುಂಡಿ ಬೆಟ್ಟದ ಅಭಿವೃದ್ಧಿಗೆ ಪ್ರಾಧಿಕಾರ ಅಗತ್ಯ

ಮೈಸೂರು: ಚಾಮುಂಡಿ ಬೆಟ್ಟದ ಯದ್ವಾತದ್ವಾ ಬೆಳವಣಿಗೆ ನಿಯಂತ್ರಿಸಲು ನ್ಯೂನತೆ ಸರಿಪಡಿಸಲು ಪ್ರಾಧಿಕಾರದ ಅಗತ್ಯವಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರತಿಪಾದಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,



ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಸಂಬಂಧ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಹೆಸರು ಹೇಳದೆ ಪರೋಕ್ಷವಾಗಿ ತಿರುಗೇಟು ಕೊಟ್ಟರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕೆಲವು ಸೈದ್ಧಾಂತಿಕ ವಿಚಾರದಲ್ಲಿ ಮಾತ್ರ ವಿರೋಧಿಸುತ್ತೇನೆ ಎಂದ ಪ್ರತಾಪಸಿಂಹ, ಬೆಟ್ಟಕ್ಕೆ ಪೊಲೀಸ್ ಠಾಣೆ ಹಾಗೂ ಆಸ್ಪತ್ರೆ ಬೇಕು. ಇದೆಲ್ಲಾ ಆಗಲು ಒಂದು ಪ್ರಾಧಿಕಾರ ಬೇಕೇ ಬೇಕು. ಈ ಹಿಂದೆ ಬಿಜೆಪಿ ಸರಕಾರದಲ್ಲೂ ಪ್ರಾಧಿಕಾರ ಬೇಕೆಂದು ಧ್ವನಿ ಎತ್ತಿದ್ದೆವು. ಸಿದ್ದರಾಮಯ್ಯ ಈಗ ಪ್ರಾಧಿಕಾರ ರಚಿಸಿದ್ದಾರೆ. ಖಂಡಿತ ಇದು ಒಳ್ಳೆಯ ಕೆಲಸ ಎಂದು ಸಮರ್ಥಿಸಿಕೊಂಡರು.

ದೇವರು ಭಕ್ತರಿಗೆ ಸೇರಬೇಕು

ಆಸ್ತಿ ಹೊಡೆದಾಟದ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ, ದೇವರು ಭಕ್ತರಿಗೆ ಸೇರಬೇಕು. ಭಕ್ತರಿಗೆ ಸೌಲಭ್ಯ ಕಲ್ಪಿಸಬೇಕಾಗಿದ್ದು ಸರಕಾರದ ಕರ್ತವ್ಯ ಎಂದು ಸೂಚ್ಯವಾಗಿ ನುಡಿದರು. ಅಮೃತ್ ಯೋಜನೆ ಕುಡಿಯುವ ನೀರು ಚಾಮುಂಡಿ ಬೆಟ್ಟಕ್ಕೆ ತಲುಪದಿರಲು ಕಾರಣ ಯಾರು.? ನಾನು ಹೇಳಿದರೆ ಅದನ್ನು ಗೊಂದಲ ಮೂಡಿಸುವ ಕೆಲಸ ಮಾಡಲಾಗುತ್ತದೆ. ಪೈಪ್‌ಲೈನ್ ಎಲ್ಲಿ ತಡೆದು ನಿಂತಿದೆ ? ನೀವೇ ಹೋಗಿ ಹುಡುಕಿ ಎಂದು ಪ್ರತಾಪಸಿಂಹ ಸುದ್ದಿಗಾರರಿಗೆ ಹೇಳಿದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಭವಿಷ್ಯ

ಮೂರು ರಾಜ್ಯಗಳ ಚುನಾವಣೆ ಬಳಿಕ ಕೇಂದ್ರ ಸರಕಾರ ಪತನ

ಧಾರವಾಡ: ಹರಿಯಾಣ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ ಚುನಾವಣೆಯ ಬಳಿಕ ಕೇಂದ್ರದ ಮೋದಿ ಸರಕಾರ ಅಲ್ಲಾಡಲಿದೆ.

ಈಗಾಗಲೇ ಬಿಜೆಪಿಯವರ ನಂಬರ್ ಕಡಿಮೆ ಇದೆ. ಸದ್ಯದ ಸಮೀಕ್ಷಾ ವರದಿಗಳು ಎಲ್ಲೆಡೆ ಬಿಜೆಪಿ ಸೋಲುತ್ತದೆ ಎಂದು ಹೇಳಿವೆ. ಹೀಗಾಗಿ ಅವರಿಗೆ ಭಯವಿದೆ. ಆದರೆ, ರಾಜ್ಯದಲ್ಲಿ ನಾವು 136 ಶಾಸಕರಿದ್ದೇವೆ. ಐದು ವರ್ಷ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸರಕಾರ ಪತನವಾಗದು ಎಂದು ಸಚಿವ ಸಂತೋಷ್ ಲಾಡ್ ಭವಿಷ್ಯ ನುಡಿದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಬದಲಾವಣೆ ಕುರಿತ ಪ್ರಶ್ನೆಗೆ, ಎಲ್ಲ ಶಾಸಕರು, ಸಚಿವರು, ಸಂಸದರು, ನಾಯಕರು, ಕಾರ್ಯಕರ್ತರು ಸಿದ್ದರಾಮಯ್ಯ ಪರವಾಗಿದ್ದೇವೆ. ನಾವು ಅವರ ಪರವಾಗಿ ಗಟ್ಟಿಯಾಗಿ ನಿಂತಿದ್ದೇವೆ. ಯಾವುದೇ ಕಾರಣಕ್ಕೂ ಸಿಎಂ ಬದಲಾವಣೆ ಇಲ್ಲ ಎಂದರು.

ದೀಪಾವಳಿಗೆ ರಾಜ್ಯ ಸರಕಾರ ಪತನವಾಗಲಿದೆ ಎಂಬ ಸಿ.ಟಿ.ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಲಾಡ್, ಕೇಂದ್ರ ಸರಕಾರ ಶೀಘ್ರ ಪತನವಾಗಲಿದೆ. ರಾಜ್ಯ ಸರಕಾರ ಪತನವಾಗುತ್ತದೆ ಎಂದು ಎರಡು ವರ್ಷದಿಂದ ಅವರು ಹೇಳುತ್ತಲೇ ಬಂದಿದ್ದಾರೆ ಇದೇನು ಹೊಸದಾ ಎಂದು ಪ್ರಶ್ನಿಸಿದರು.

ಡಿಕೆಶಿ-ರಾಹುಲ್ ಭೇಟಿ ಕುತೂಹಲವಿಲ್ಲ

ರಾಹುಲ್ ಗಾಂಧಿ ಹಾಗೂ ಡಿಕೆಶಿ ಅಮೆರಿಕದಲ್ಲಿ ಭೇಟಿಯಾಗಿರುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಅವರು ಭೇಟಿಯಾಗಿದ್ದರಲ್ಲಿ ಕುತೂಹಲ ಏನಿಲ್ಲ. ಅವರು ನಮ್ಮ ನಾಯಕರು. ರಾಹುಲ್ ಅಲ್ಲಿದ್ದಾಗ ಭೇಟಿಯಾಗಿದ್ದಾರೆ. ಅಲ್ಲಿ ರಾಜ್ಯ ರಾಜಕಾರಣದ ಬಗ್ಗೆ ಚರ್ಚೆ ಆಗಿಲ್ಲ. ನೀವು ಅದನ್ನು ಪದೇ ಪದೇ ಕೇಳಬೇಡಿ ಎಂದು ಸಚಿವ ಲಾಡ್ ಗರಂ ಆದರು.

ಮುಖ್ಯಮಂತ್ರಿ ರೇಸ್ ನಲ್ಲಿ ಯಾರೂ ಇಲ್ಲ | ಸರಕಾರ ಬೀಳಿಸಲು ಬಿಜೆಪಿ ನಾಯಕರ ಕುತಂತ್ರ: ದಿನೇಶ್ ಗುಂಡೂರಾವ್

ಸಿಎಂ ಬದಲಾವಣೆ ಇಲ್ಲ, ಕೈ ನಾಯಕರ ಸ್ಪಷ್ಟೋಕ್ತಿ

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಕಾಂಗ್ರೆಸ್ ನಾಯಕರ ಹೇಳಿಕೆಗಳು ಮುಂದುವರಿದಿವೆ. ಸಿಎಂ ಸಿದ್ದರಾಮಯ್ಯನವರೇ ಮುಂದುವರಿಯಲಿದ್ದು, ಅವರ ಬದಲಾವಣೆ ಪ್ರಶ್ನೆಯೇ ಇಲ್ಲ ಎಂದು ಎಲ್ಲ ನಾಯಕರು ಸ್ಪಷ್ಟವಾಗಿ ಹೇಳಿದ್ದಾರೆ. ಸಿದ್ದರಾಮಯ್ಯನವರ ಐದು ವರ್ಷಗಳ ಅವಧಿ ಮುಗಿದ ನಂತರ ಶಾಸಕರ ಅಭಿಪ್ರಾಯ ಪಡೆದು ಹೈಕಮಾಂಡ್ ಮುಂದಿನ ಮುಖ್ಯಮಂತ್ರಿಯನ್ನು ನಿರ್ಧರಿಸಬಹುದು. ಆದರೆ ಸದ್ಯದ ಪರಿಸ್ಥಿತಿಯಲ್ಲೇ ಸಿಎಂ ಸ್ಥಾನದ ರೇಸ್‌ನಲ್ಲಿ ಯಾರೂ ಇಲ್ಲ ಎಂದು ಹಲವು ನಾಯಕರು ಪುನರುಚ್ಚರಿಸಿದ್ದಾರೆ.

ಬೆಳಗಾವಿ: ಸಿಎಂ ರೇಸ್ ನಲ್ಲಿ ಯಾರೂ ಇಲ್ಲವೇ ಇಲ್ಲ. ಸಿದ್ದರಾಮಯ್ಯ ಅವರೇ ಸಿಎಂ ಆಗಿರುತ್ತಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯ ವರಿಗೆ ಸ್ಥಿರ ಸರಕಾರವನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಬಿಜೆಪಿಯವರದ್ದು ಸರಕಾರ ಅಸ್ಥಿರ ಮಾಡುವುದು, ಸರಕಾರ ಬೀಳಿಸುವುದು, ಒಡೆಯುವುದು, ಆಪರೇಷನ್ ಮಾಡುವುದು ಕೇಂದ್ರದವರಿಗೆ ಇದೇ ಕೆಲಸ ಆಗಿದೆ. ಕರ್ನಾಟಕದ ಅಭಿವೃದ್ಧಿ ಕೆಲಸವನ್ನು ಬಿಜೆಪಿ ಮುಖಂಡರು ಮಾಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಳೆ ಸಿಎಂ ಭವಿಷ್ಯ ನಿರ್ಧಾರ ಆಗುತ್ತದೆಯೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ , ನಾಳೆ ಏನು ಆಗುವುದಿಲ್ಲ, ಸಿಎಂ ಅವರ ಭವಿಷ್ಯ ನಿರ್ಧಾರದ ಪ್ರಶ್ನೆಯಿಲ್ಲ. ಸಿದ್ದರಾಮಯ್ಯ ಅವರೇ ಸಿಎಂ ಆಗಿ ಇರುತ್ತಾರೆ. ಸಿಎಂ ರೇಸ್ ನಲ್ಲಿ ಯಾರೂ ಇಲ್ಲ ಎಂದು ಸಚಿವ ದಿನೇಶ್ ಸ್ಪಷ್ಟಪಡಿಸಿದರು.

ಬಿಜೆಪಿ ಸುಳ್ಳಿನ ಕಂತೆ: ಬಿಜೆಪಿ ಸಾಮಾಜಿಕ ಜಾಲತಾಣದಲ್ಲಿ ಭ್ರಷ್ಟ ಸಿಎಂ, ಭ್ರಷ್ಟ ಸಿಎಂ ಆಕಾಂಕ್ಷಿಗಳು ಪೋಸ್ಟ್ ವಿಚಾರಕ್ಕೆ ಉತ್ತರಿಸಿದ ಅವರು, ಅವರ ಸೋಷಿಯಲ್ ಮೀಡಿಯಾದಲ್ಲಿ ಏನೇನೂ ಹಾಕುತ್ತಿರುತ್ತಾರೆ. ಸುಳ್ಳು ಸುದ್ದಿ ಹಾಕುವುದರಲ್ಲಿ, ಪ್ರಚೋದಿಸುವುದರಲ್ಲಿ ಬಿಜೆಪಿಯವರು ದೇಶದಲ್ಲಿ ನಂಬರ್ ಒನ್ ಎಂದು ಸಚಿವರು ಕಟುಟೀಕೆ ಮಾಡಿದರು.

ರಾಜ್ಯಪಾಲರ ಪಕ್ಷಪಾತ ಧೋರಣೆ: ಕುಮಾರಸ್ವಾಮಿ, ಜೊಲ್ಲೆ, ನಿರಾಣಿ ಮೇಲೆ ಇರುವ ಭ್ರಷ್ಟಾಚಾರದ ಕುರಿತು ಅರ್ಜಿ ರಾಜ್ಯಪಾಲರ ಕಚೇರಿಯಲ್ಲಿ ತಿಂಗಳುಗಟ್ಟಲೇ ಹಾಗೇ ಬಿದ್ದಿದೆ. ರಾಜಪಾಲರು ಇವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಈಗ ಸಿಎಂ ವಿರುದ್ಧ ಖಾಸಗಿ ದೂರು ಬಂದ ತಕ್ಷಣವೇ ನೋಟಿಸ್ ಕೊಟ್ಟಿದ್ದಾರೆ. ಇದರಲ್ಲಿ ರಾಜಪಾಲರ ಮನಸ್ಥಿತಿ ಗೊತ್ತಾಗುತ್ತದೆ. ಇದರಲ್ಲಿ ಪಕ್ಷಪಾತ ಮಾಡುತ್ತಿರೋದು ಗೊತ್ತಾಗುತ್ತದೆ. ಸಿಎಂ ಸಿದ್ದರಾಮಯ್ಯ ಮೇಲೆ ಯಾವುದೇ ದೋಷ ಇಲ್ಲವೇ ಇಲ್ಲಾ. ರಾಜಪಾಲರು ತನಿಖೆ ಗೆ ಕೊಟ್ಟಿರುವ ಅನುಮತಿ ಸರಿಯೋ ತಪ್ಪೋ ಅನ್ನೋದು ಅಷ್ಟೇ ಕೋರ್ಟ್ ಮುಂದೆಯಿದೆ. ಕೋರ್ಟ್ ನಲ್ಲಿ ಸಿಎಂ ತಪ್ಪು ಮಾಡಿದ್ದಾರೆ ಅನ್ನೋದು ಇಲ್ಲವೇ ಇಲ್ಲಾ ಎಂದರು.

ಕೋರ್ಟ್‌ನಲ್ಲಿ ಏನು ವ್ಯತಿರಿಕ್ತವಾದ ತೀರ್ಮಾನ ಬರುವುದಿಲ್ಲ. ಕೋರ್ಟ್ ನಲ್ಲಿ ರಾಜಪಾಲರು ತನಿಖೆಗೆ ಕೊಟ್ಟಿರುವುದು ಸರಿಯೋ ಇಲ್ಲವೋ ಅಷ್ಟೇ ಇರೋದು. ಅವರು ತಪ್ಪು ಮಾಡಿದ್ದಾರೆ ಅನ್ನೋದಿಲ್ಲ.ನಮ್ಮ ಸಿಎಂ ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ, ಯಾವುದೇ ಅಧಿಕಾರದ ದುರುಪಯೋಗವು ಮಾಡಿಲ್ಲ. ರಾಜಪಾಲರು ಕೇಂದ್ರ ಸರಕಾರದ ಕೈಗೊಂಬೆಯಾಗಿದ್ದಾರೆ.

-ದಿನೇಶ್ ಗುಂಡೂರಾವ್ ಸಚಿವ

ನಕಲಿ ವೈದ್ಯರ ವಿರುದ್ಧ ಕ್ರಮ

ಆರೋಗ್ಯ ಇಲಾಖೆಯಲ್ಲಿ ವೈದ್ಯರ ಕೊರತೆಯಿದೆ ವೈದ್ಯರ ಕೊರತೆ ನಿವಾರಿಸಲು ಪ್ರಯತ್ನ ಮಾಡುತ್ತಿದ್ದೇವೆ ತಜ್ಞ ವೈದ್ಯರನ್ನ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುತ್ತಿದ್ದೇವೆ ನಿರೀಕ್ಷಿತ ಪ್ರಮಾಣದಲ್ಲಿ ತಜ್ಞ ವೈದ್ಯರು ಬರ್ತಾಯಿಲ್ಲ ನಕಲಿ ವೈದರು ಎಲ್ಲಾ ಕಡೆಯಿದ್ದಾರೆ. ನಕಲಿ ವೈದ್ಯರ ವಿರುದ್ಧ ಕಾನೂನು ರೀತಿ ಮುಲಾಜಿಲ್ಲದೇ ಕ್ರಮ ಜರುಗಿಸಲು ಹೇಳಿದ್ದೇನೆ ನಕಲಿ ವೈದ್ಯರ ವಿರುದ್ಧ ಕಾನೂನು ಕ್ರಮ ಆಗಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬದಲಾವಣೆ ಪ್ರಸಂಗ ಬಂದರೆ ಸಿಎಂ ಕುರ್ಚಿಗೆ ಸ್ಪರ್ಧೆ

ದಾವಣಗೆರೆ: ಸಿಎಂ ಬದಲಾವಣೆ ಪ್ರಸಂಗ ಬಂದ್ರೆ ನಾನೇ ಸ್ಪರ್ಧೆ ಮಾಡುತ್ತೇನೆ ಎಂದು ಕಾಂಗ್ರೆಸ್‌ನ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ವ್ಯಕ್ತವಾಗಿರುವ ಸಿಎಂ ಕುರ್ಚಿ ಬದಲಾವಣೆ ಬಗೆಗಿನ ಸಚಿವರ ಹೇಳಿಕೆಗಳಿಗೆ ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಆದರೆ ಲಿಂಗಾಯತ ಸಿಎಂ ಆಗಬೇಕು ಎಂದು ಬಂದರೆ ಸಡ್ಡು ಹೊಡೆಯುತ್ತೇವೆ ಎಂದಿದ್ದಾರೆ.

ಸಿದ್ದರಾಮಯ್ಯ ಅವಧಿ ನಂತರವೇ ಹೊಸ ಸಿಎಂ ಆಯ್ಕೆ

ಸಿದ್ದರಾಮಯ್ಯ ಒಳ್ಳೆಯ ಆಡಳಿತ ಮಾಡುತ್ತಿದ್ದಾರೆ. ಅವರ ಅವಧಿ ಮುಗಿದ ಮೇಲೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅದಕ್ಕೂ ಮೊದಲು ನಮ್ಮ ಶಾಸಕರು ಆಯ್ಕೆ ಮಾಡುವವರನ್ನು ಕಾಂಗ್ರೆಸ್ ವರಿಷ್ಠರು ಸಿಎಂ ಮಾಡುತ್ತಾರೆ. ಸಚಿವರಿಗೆ ಸಿಎಂ ಆಗಬೇಕು ಎನ್ನುವ ಆಸೆ ಜಾಸ್ತಿ ಇದೆ. ಆಸೆ ಇದ್ದವರಿಗೆ ನಿರಾಸೆ ಆಗಲಿದೆ. ಕೆಲವರು ಬಾಯಿಗೆ ಬಂದಂತೆ ಮಾತಾಡಿಕೊಂಡು ಹೋಗೋದ್ರಿಂದ ಏನು ಪ್ರಯೋಜನ ಆಗಲ್ಲ. ಅವರೇ ಹಗುರ ಆಗ್ತಾರೆ ಅಷ್ಟೇ ಎಂದು ಎಚ್ಚರಿಸಿದ್ದಾರೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಭಿಪ್ರಾಯ

ಸಿದ್ದರಾಮಯ್ಯ ಕೆಳಗಿಳಿಸಲು ಯಾರಿಂದಲೂ ಸಾಧ್ಯವಿಲ್ಲ

ಬೆಳಗಾವಿ: ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಇಳಿಸಲು ಯಾರಿಂದಲೂ

ಸಾಧ್ಯವಿಲ್ಲ. ನ್ಯಾಯಾಂಗ ವ್ಯವಸ್ಥೆ ತನ್ನ ಪಾಡಿಗೆ ಕೆಲಸ ಮಾಡುತ್ತದೆ. ಮುಖ್ಯಮಂತ್ರಿಯಾಗಿ ಅವರೇ ಮುಂದುವರೆಯಬೇಕು ಎಂಬುದು ನಮ್ಮೆಲ್ಲರ ಆಸೆಯಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಭಿಪ್ರಾಯ ಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಸಿಎಂ ಬದಲಾವಣೆ ವಿಚಾರವನ್ನು ತಳ್ಳಿಹಾಕಿದರು. ಕೋರ್ಟ್ ನಲ್ಲಿ ಅರವಿಂದ ಕೇಜ್ರಿವಾಲ್, ಮಮತಾ ಬ್ಯಾನರ್ಜಿ ವಿರುದ್ಧ ಪ್ರಕರಣ ಇವೆ. ಆದರೆ ಬಿಜೆಪಿಯವರಿಗೆ ಸಿದ್ದರಾಮಯ್ಯ ಅಷ್ಟೇ ಯಾಕೆ ಕಾಣುತ್ತಾರೆ ಎಂಬುದು ನನ್ನ ಪ್ರಶ್ನೆ. ನಮ್ಮ ತಂದೆ ಮುಖ್ಯಮಂತ್ರಿ ಇದ್ದಾಗ ಬೇಕಾದಷ್ಟು ಪ್ರಕರಣ ನೋಡಿದ್ದೇವೆ, ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಎಂದರು.

ಸಿಎಂ ರೇಸ್ ನಲ್ಲಿ ಕಾಂಗ್ರೆಸ್ ನಾಯಕರೇ ಹೆಚ್ಚಿನವರು ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿ. ಬಿಜೆಪಿ, ಜೆಡಿಎಸ್ ಸೇರಿ ಎಲ್ಲ ವಿರೋಧ ಪಕ್ಷದವರಿಗೂ ಸಿಎಂ ಭಯ ಇದೆ. ಸಿದ್ದರಾಮಯ್ಯ ನುಡಿದಂತೆ ನಡೆದಿದ್ದಾರೆ. ಒಳ್ಳೆಯವರನ್ನು ಕೆಳಗಿಳಿಸಲು ಕುತಂತ್ರ ಇದ್ದೇ ಇರುತ್ತದೆ. ಇದರಲ್ಲಿ ಬಿಜೆಪಿಯವರು ನಿಸ್ಸೀಮರು. ಇವತ್ತಿನವರೆಗೂ ಅವರ ಹಣೆಬರಹಕ್ಕೆ ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬಂದಿಲ್ಲ ಎಂದು ಮಧು ಬಂಗಾರಪ್ಪ ವ್ಯಂಗ್ಯವಾಡಿದರು.

ಮುಖ್ಯಮಂತ್ರಿ ಸ್ಥಾನದ ವಿಚಾರ ಬೀದಿಗಳಲ್ಲಿ ಮಾತನಾಡಬಾರದು

ಸಿಎಂ ಸ್ಥಾನದ ಬದಲಾವಣೆಯ ಪ್ರಶ್ನೆ ಬರಲ್ಲ

ಬೆಳಗಾವಿ: ಮುಖ್ಯಮಂತ್ರಿ ಸ್ಥಾನದ ವಿಚಾರ

ಗಲ್ಲಿ, ಬೀದಿಗಳಲ್ಲಿ ಮಾತನಾಡುವಂತದ್ದಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪುನರುಚ್ಚರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ನಾಯಕ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಗಟ್ಟಿಯಾಗಿದ್ದಾರೆ. ಕಾಂಗ್ರೆಸ್‌ನಲ್ಲಿ ಹೈಕಮಾಂಡ್ ಇದೆ. ಶಿಸ್ತು ಎನ್ನುವುದೂ ಇದೆ. ನಾನು ಕೂಡ ಪಕ್ಷದ ಶಿಸ್ತಿನ ಸಿಪಾಯಿ, ಇಂಥ ವಿಚಾರಗಳನ್ನು ಹೈಕಮಾಂಡ್ ಹಾಗೂ ಪಕ್ಷದ 135 ಶಾಸಕರು ತೀರ್ಮಾನಿಸುತ್ತಾರೆ ಎಂದರು

ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುವವರೆಗೆ, ಆಯ್ಕೆಯಾದ ಶಾಸಕರು ತೀರ್ಮಾನ ತೆಗೆದುಕೊಳ್ಳುವವರೆಗೆ ಸಿಎಂ ಸ್ಥಾನದ ಬದಲಾವಣೆಯ ಪ್ರಶ್ನೆ ಬರುವುದಿಲ್ಲ. ಇಂಥ ವಿಚಾರಗಳನ್ನು ಬೀದಿಯಲ್ಲಿ, ಗಲ್ಲಿಯಲ್ಲಿ ಮಾತನಾಡುವುದು ಸರಿಯಲ್ಲ ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಎಚ್ಚರಿಕೆ ಕೊಟ್ಟರು.

ಸಿಎಂ ಸ್ಥಾನ: ಹೇಳಿಕೆಗೆ ಪಾಟೀಲ್ ಕಿಡಿ

ಸಿಎಂ ಸ್ಥಾನ ಖಾಲಿ ಇಲ್ಲ, ಖಾಲಿ ಆಗುವ ಪ್ರಶ್ನೆ ಇಲ್ಲ

ಗದಗ: ಸಿಎಂ ಸ್ಥಾನ ಖಾಲಿ ಇಲ್ಲ. ಖಾಲಿ ಆಗುವ ಪ್ರಶ್ನೆಯೂ ಇಲ್ಲ ಎಂದು ಕಾನೂನು, ನ್ಯಾಯ, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಸಿಎಂ ಸ್ಥಾನ ಬದಲಾವಣೆ ವಿಚಾರವಾಗಿ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಸಿಎಂ ಸ್ಥಾನ ಖಾಲಿ ಇಲ್ಲ. ಖಾಲಿ ಆಗುವ ಪ್ರಶ್ನೆಯೂ ಇಲ್ಲ. ಸಿದ್ದರಾಮಯ್ಯನವರೇ ನಮ್ಮ ಸಿಎಂ ಹಾಗೂ ನಮ್ಮ ನಾಯಕರು. ಅನಾವಶ್ಯಕವಾಗಿ ಸಿಎಂ ಸ್ಥಾನದ ಬಗ್ಗೆ ಮಾಧ್ಯಮದವರು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದರು. ಸಿಎಂ ಸ್ಥಾನದ ರೇಸ್‌ನಲ್ಲಿ ಎಚ್.ಕೆ.ಪಾಟೀಲ್ ಹೆಸರು ಕೇಳಿ ಬರುತ್ತಿರುವ ವಿಷಯವಾಗಿ ಮಾತನಾಡಿ, ಸಿಎಂ ಸ್ಥಾನ ಖಾಲಿಯೂ ಇಲ್ಲ, ಆ ಪ್ರಶ್ನೆ ಉದ್ಭವಿಸುವುದಿಲ್ಲ, ಇದು ಸಮಯವೂ ಅಲ್ಲ. ಈ ಬಗ್ಗೆ ಅನಾವಶ್ಯಕ ಚರ್ಚೆಯನ್ನು ವಿವೇಕ ಇದ್ದವರು ಮಾಡೋದಿಲ್ಲ ಎಂದು ಸಿಡಿಮಿಡಿಗೊಂಡರು.

ಸರಕಾರ ಮತ್ತು ತನಿಖಾ ಸಂಸ್ಥೆಗಳ ಹಂತದಲ್ಲಿ ಚಾಲ್ತಿಯಲ್ಲಿರುವ ವಿವಿಧ ಹಗರಣಗಳ ತನಿಖೆ, ಪ್ರಗತಿ, ಸಮನ್ವಯ ಕಾರ್ಯಗಳಿಗೆ ಸಂಬಂಧಿಸಿದ ಸಚಿವರು ಕ್ರಮವಹಿಸಲು ಸಮಿತಿ ರಚನೆಯ ಕುರಿತು ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ಗೃಹ ಸಚಿವರ ಅಧ್ಯಕ್ಷತೆಯಲ್ಲಿ 5 ಜನ ಸಚಿವರ ಸಮಿತಿ ರಚಿಸಿದ್ದಾರೆ. ಪ್ರಮಾದಗಳು, ತಪ್ಪು ಎಸಗಿರುವ ಬಗ್ಗೆ ತನಿಖೆ ಹಾಗೂ ಮುಂದಿನ ಕ್ರಮಗಳನ್ನು ಶಿಫಾರಸು ಮಾಡಲು ಈ ಬಗ್ಗೆ ನಮ್ಮ ಸಮಿತಿ ಬೇಗ ಕೆಲಸ ಮಾಡಲು ಪ್ರಾರಂಭ ಮಾಡಲಿದೆ ಎಂದರು.

ವಾಲ್ಮೀಕಿ ನಿಗಮ ಹಗರಣ ಬಗ್ಗೆ ಎಸ್‌ಐಟಿ ಹಾಗೂ ಇಡಿ ತಂಡ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದ್ದಾರೆ. ಕಾನೂನು ಕ್ರಮ, ಕಾನೂನು ಪ್ರಕ್ರಿಯೆ ಮುಂದುವರೆಯುತ್ತದೆ. ಕೋರ್ಟ್‌ಗಳ ಮೂಲಕ ಸತ್ಯಾಸತ್ಯತೆ ಹೊರಬರುತ್ತದೆ. ಸತ್ಯಾಸತ್ಯತೆ ಕೋರ್ಟ್‌ನಲ್ಲಿ ನಡೆಯುವ ಪ್ರಕರಣವನ್ನು ಹೊರಹಾಕುತ್ತದೆ.

-ಎಚ್.ಕೆ.ಪಾಟೀಲ್ ಸಚಿವ

ಸಿಎಂ ಬದಲಾವಣೆ; ಸಚಿವರ ಹೇಳಿಕೆಗೆ ಅರ್ಥವೇ ಇಲ್ಲ

ಸೋಮವಾರಪೇಟೆ: ಮುಖ್ಯಮಂತ್ರಿ ಸ್ಥಾನದ ಬಗ್ಗೆ ಹಲವು ಸಚಿವರು ನೀಡುತ್ತಿರುವ ಹೇಳಿಕೆಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನಾನು ಸಿಎಂ ಆಗಬೇಕು ಎಂದು ಹೇಳುತ್ತಿರುವ ಸಚಿವರಿಗೆ ರಾಮಲಿಂಗಾರೆಡ್ಡಿ ತಿರುಗೇಟು ನೀಡಿದ್ದಾರೆ. ಕೊಡಗು ಜಿಲ್ಲೆಯ ಶನಿವಾರ ಸಂತೆಯಲ್ಲಿ ಸಾರಿಗೆ ಬಸ್ ನಿಲ್ದಾಣಕ್ಕೆ ಶಂಕುಸ್ಥಾಪನೆ

ನೆರವೇರಿಸಿದ ಬಳಿಕ ಅವರು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಲ ಹಿರಿಯ ಸಚಿವರು ಸೇರಿದಂತೆ ಏಳೆಂಟು ಸಚಿವರು ಈ ರೀತಿಯ ಹೇಳಿಕೆ ನೀಡಿದ್ದಾರೆ. ಆದರೆ ಅವರ ಹೇಳಿಕೆಗೆ ಅರ್ಥವೇ ಇಲ್ಲ. ಸಿಎಂ ಸಿದ್ದರಾಮಯ್ಯ ತಮ್ಮ ಐದು ವರ್ಷ ಅಧಿಕಾರಾವಧಿ ಪೂರ್ಣಗೊಳಿಸುತ್ತಾರೆ. ಮುಂದೆಯೂ ಅವರೇ ಸಿಎಂ ಆಗಿರುತ್ತಾರೆ ವಿನಾ ಬದಲಾವಣೆ ಇಲ್ಲವೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಯಾರೂ ಮಾತನಾಡಬಾರದು ಎಂದು ಎಲ್ಲ ನಾಯಕರಿಗೆ ಸಚಿವ ರಾಮಲಿಂಗಾರೆಡ್ಡಿ ವಿನಂತಿಸಿದರು.

ವಿಶ್ವವಾಣಿ

ಸಂಪಾದಕೀಯ

ಸಿಲಿಕಾನ್ ಸಿಟಿ ಡ್ರಗ್ಸ್ ಸಿಟಿ ಆಗದಿರಲಿ

ಬೆಂಗಳೂರು ಈಗ ಡ್ರಗ್ ಸಿಟಿ ಎನಿಸಿಕೊಳ್ಳುತ್ತಿದ್ದು ಮಾದಕದ್ರವ್ಯ ಮಾರಾಟ, ಸಾಗಾಟ ಪ್ರಕರಣಗಳು ಪ್ರತಿದಿನ ಎಂಬಂತೆ ವರದಿಯಾಗುತ್ತಿವೆ. ಇಲ್ಲಿನ 12 ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.9ರಂದು ಕಾರ್ಯಾಚರಣೆ ನಡೆಸಿ, ಥಾಯ್ಲೆಂಡ್‌ನಿಂದ ಹೈಡ್ರೋ ಗಾಂಜಾ ತಂದು ಮಾರುತ್ತಿದ್ದ ಓರ್ವ ವಿದೇಶಿ ಮಹಿಳೆ ಸೇರಿದಂತೆ 15 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 4.5 ಕೋಟಿ ರು. ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಯುವಜನತೆಯನ್ನು ಗುರಿಯಾಗಿಸಿ ಮಾದಕದ್ರವ್ಯ ಜಾಲ ಕಾರ್ಯಾಚರಿಸುತ್ತಿದ್ದು ಸತತ ಕಾರ್ಯಾಚರಣೆ ಬಳಿಕವೂ ಇವರನ್ನು ಮಟ್ಟ ಹಾಕಲು ಸಾಧ್ಯವಾಗಿಲ್ಲ. ಬೆಂಗಳೂರು ಮಾತ್ರವಲ್ಲದೆ ಮಂಗಳೂರು, ಶಿವಮೊಗ್ಗ, ಮೈಸೂರು, ಹುಬ್ಬಳ್ಳಿಯಂಥ ನಗರಗಳಲ್ಲಿ ಡಗ್ಸ್ ಜಾಲ ಹಬ್ಬಿದೆ. ಆಫ್ರಿಕನ್ ದೇಶಗಳ ಕೆಲವು ಪ್ರಜೆಗಳು, ವಿದ್ಯಾಭ್ಯಾಸ ಮತ್ತು ಸಿದ್ಧ ಉಡುಪು ಮಾರಾಟದ ನೆಪದಲ್ಲಿ ಈ ದಂಧೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದಲ್ಲದೆ ಅಫ್ಘಾನಿಸ್ತಾನ, ಪಾಕಿಸ್ತಾನ, ನೇಪಾಳ, ಥಾಯ್ಲೆಂಡ್, ಬ್ರೆಜಿಲ್, ಬೆಲ್ಜಿಯಂಗಳಿಂದ ಪೂರೈಕೆಯಾಗುವ ಮಾದಕದ್ರವ್ಯ, ಪಂಜಾಬ್‌ನ ಪಠಾಣ್‌ಕೋಟ್ ಮೂಲಕ ದೇಶದೊಳಗೆ ನುಸುಳುತ್ತಿದೆ. ಇಲ್ಲಿಂದ ಮುಂಬಯಿ, ಗೋವಾ, ಕೊಚ್ಚಿ ಮಾರ್ಗವಾಗಿ ಬೆಂಗಳೂರು ತಲುಪುತ್ತದೆ. ಅಂದಾಜಿನಂತೆ ಬೆಂಗಳೂರಿನಲ್ಲಿ ವರ್ಷಕ್ಕೆ 500 ಕೋಟಿ ರು.ನಷ್ಟು ಡ್ರಗ್ಸ್ ವಹಿವಾಟು ನಡೆಯುತ್ತದೆ. ಇದೀಗ ಆನ್‌ಲೈನ್ ಮತ್ತು ಪೋಸ್ಟ್ ಮೂಲಕವೂ ಡ್ರಗ್ಸ್ ಪೂರೈಕೆಯಾಗುತ್ತಿರುವುದು ಬೆಳಕಿಗೆ ಬಂದಿದೆ. ಅಂದಾಜಿನ ಪ್ರಕಾರ ದೇಶದಲ್ಲಿ 7 ಕೋಟಿ ಮಾದಕದ್ರವ್ಯ ವ್ಯಸನಿಗಳಿದ್ದಾರೆ. ಅಂದರೆ ಫ್ರಾನ್ಸ್, ಸ್ಪೇನ್, ಇಟಲಿ ಮುಂತಾದ ಐರೋಪ್ಯ ದೇಶಗಳ ಒಟ್ಟು ಜನಸಂಖ್ಯೆಯಷ್ಟು. ಪ್ರತಿಷ್ಠಿತರೆನಿಸಿಕೊಂಡವರು, ನಟ-ನಟಿಯರು, ನಿರ್ದೇಶಕ, ನಿರ್ಮಾಪಕರು, ರಾಕ್‌ಸ್ಟಾರ್‌ಗಳು, ಸಂಗೀತಲೋಕದ ದಿಗ್ಗಜರು, ಕ್ರೀಡಾಪಟುಗಳು, ಸಾಫ್ಟ್‌ವೇರ್ ಉದ್ಯೋಗಿಗಳು, ಕಾಲೇಜು ವಿದ್ಯಾರ್ಥಿಗಳಿಂದ ಹಿಡಿದು ಕೊಳಗೇರಿಯ ಮಕ್ಕಳವರೆಗೂ ಮಾದಕದ್ರವ್ಯ ಜಾಲದ ಬಲೆಯಲ್ಲಿ ಸಿಲುಕಿದ್ದಾರೆ. ಇದನ್ನು ಮಟ್ಟ ಹಾಕಲು ಸಂಘಟಿತ ಪ್ರಯತ್ನ ಅಗತ್ಯ.

ಸೊಂಪಾದಕೀಯ

ಸ್ಯಾಮ್‌ಸಂಗ್ ಸಂಗ

ಸ್ಯಾಮ್‌ಸಂಗ್ ಗೆಲಾಕ್ಸಿ ಎಸ್ 24 ಸರಣಿಯ ಫೋನ್‌ಗಳು ಇನ್ನೇನು ಬಿಡುಗಡೆ ಆಗಲಿವೆ. ಆದರೆ ಎಸ್ 23 ಸರಣಿಗೂ ಈ ಮೊಬೈಲ್‌ಗಳಿಗೂ ಅಂಥ ವ್ಯತ್ಯಾಸ ಏನೂ ಇಲ್ಲ. ನನ್ನ ಬಳಿ ಲೇಟೆಸ್ಟ್ ಫೋನ್ ಇದೆ ಎನ್ನುವವರಿಗಾಗಿ ಮಾತ್ರ ಈ ಫೋನ್‌ಗಳು. ಬ್ರ್ಯಾಂಡ್ ಅನ್ನೋದು ಆಧುನಿಕ ಗ್ರಾಹಕರ ಮನಸ್ಸಲ್ಲಿ ಒತ್ತಿರುವ ಛಾಪು ಅಂತಿಂಥದ್ದಲ್ಲ. ಕೆಲವು ವಸ್ತುಗಳನ್ನು ಕೊಳ್ಳುವಾಗ ಅದಕ್ಕಿಂತ ಕಮ್ಮಿ ಬೆಲೆಗೆ ಅದಕ್ಕಿಂತ ಹೆಚ್ಚು ಫೀಚರ್ಸ್ ಇರುವ ಉತ್ಪನ್ನಗಳು ಸಿಕ್ಕರೂ ಕೆಲವರಿಗೆ ತಾವು ತೆಗೆದುಕೊಳ್ಳುವ ಬ್ರ್ಯಾಂಡ್ ಮೇಲೆ ಮಾತ್ರ ನಂಬಿಕೆ. ಸ್ಮಾರ್ಟ್‌ಫೋನ್ ವಿಷಯದಲ್ಲಿ ಕೆಲವರಿಗೆ ಆಪಲ್ ಐಫೋನ್, ಸ್ಯಾಮ್‌ಸಂಗ್, ಆಡಿಯೋ ಉಪಕರಣಗಳ ವಿಷಯದಲ್ಲಿ ಸೋನಿ, ಬೈಕುಗಳ ವಿಷಯದಲ್ಲಿ ಹೀರೋ ಹೊಂಡಾ ಕಂಪನಿಯ ಉತ್ಪನ್ನಗಳೇ ಶ್ರೇಷ್ಠ. ಅದು ಅವರು ಆ ಕಂಪನಿಯ ಉತ್ಪನ್ನಗಳಿಗೆ ಒಗ್ಗಿಕೊಂಡಿರುತ್ತಾರೆ ಅಂತಲೋ ಅಥವಾ ಬೇರೆ ಕಂಪನಿಯ ಉತ್ಪನ್ನಗಳನ್ನು ಟೆಸ್ಟ್ ಮಾಡುವ ಗೊಡವೆ ಏಕೆ, ಒಮ್ಮೆ ಬಳಸಿ ಚೆನ್ನಾಗಿದೆ ಎಂದು ಗೊತ್ತಾದ ಮೇಲೆ ಅದನ್ನೇ ಬಳಸುವ ರಿಸ್ಕ್ ಫ್ರೀ ಮನೋಭಾವವೋ ಗೊತ್ತಿಲ್ಲ, ಆದರೆ ಈ ಗ್ರಾಹಕರು ಮಾತ್ರ ತಮ್ಮ ಬ್ರ್ಯಾಂಡ್‌ಗಳನ್ನು ಬಿಟ್ಟು ದೂರ ಸರಿಯೋದಿಲ್ಲ. ಕೆಲವು ಕಂಪನಿಗಳು ಹೀಗೆ ತಮ್ಮ ಪರ್ಮನೆಂಟ್ ಗ್ರಾಹಕರಾಗಿರುವವರ ಬಗ್ಗೆ ಕಾಳಜಿ ಇಟ್ಟುಕೊಂಡು ತಮ್ಮ ಕಂಪನಿಯಿಂದ ಇನ್ನಷ್ಟು ಉತ್ತಮ ದರ್ಜೆಯ ಉತ್ಪನ್ನಗಳನ್ನು ಕೊಟ್ಟರೆ, ಇನ್ನು ಕೆಲವು ಕಂಪನಿಗಳು ಅದನ್ನೇ ಬಂಡವಾಳವನ್ನಾಗಿಸಿಕೊಂಡು ಗ್ರಾಹಕರನ್ನು ಮರುಳು ಮಾಡುತ್ತವೆ. ಇದಕ್ಕೆ ಐಫೋನ್ ತಯಾರಿಸುವ ಆಪಲ್ ಕಂಪನಿಯೂ ಹೊರತಲ್ಲ. ಇಂಥದೇ ಇನ್ನೊಂದು ಕಂಪನಿ ಅಂದ್ರೆ– ಹೊಂಡಾ ಆಕ್ಟಿವಾ ಸ್ಕೂಟರ್. ತನ್ನ ಬೆಸ್ಟ್ ಸೆಲ್ಲಿಂಗ್ ಸ್ಕೂಟರ್ ಆಗಿರುವ ಆಕ್ಟಿವಾದ ಹೊಸ ಆವೃತ್ತಿಗಳನ್ನು ಕಂಪನಿ ಹೊರತರುತ್ತಲೇ ಇದೆ. ಆಕ್ಟಿವಾ 2ಜಿ, 3ಜಿ ಅಂತ ಶುರುವಾದ ಈ ಸ್ಕೂಟರ್ ಆವೃತ್ತಿ ಈಗ 7ಜಿವರೆಗೂ ಬಂದು ನಿಂತಿದೆ. ಆದರೆ ಈ ಮಾಡೆಲ್ ಸ್ಕೂಟರ್‌ಗಳ ಮೊದಲ ಆವೃತ್ತಿಗೂ ಇಂದಿನ ಆವೃತ್ತಿಗೂ ಅಂಥ ವ್ಯತ್ಯಾಸ ಏನೂ ಇರೋದಿಲ್ಲ. ಇವೊಂಥರಾ ನಮ್ಮ ಡಾರ್ಲಿಂಗ್ ಕೃಷ್ಣ ಅವರ ಇತ್ತೀಚಿನ ಸಿನಿಮಾಗಳಿದ್ದಂತೆ. ನೋಡೋಕೆ ಒಂದೇ ಥರ, ಸಣ್ಣ ಪುಟ್ಟ ವ್ಯತ್ಯಾಸ. ಈಗ ಸ್ಯಾಮ್‌ಸಂಗ್ ಹೊಸ ಸೀರೀಸ್ ಫೋನ್‌ಗಳದ್ದೂ ಇದೇ ಕಥೆ. ಆದ್ರೆ ಅದೇ ಲುಕ್, ಅದೇ ಫೀಲ್. ಆದರೆ ಇವುಗಳ ಬೆಲೆ ಎಷ್ಟೇ ಇದ್ದರೂ ಬ್ರ್ಯಾಂಡ್ ಪ್ರಿಯರು ಮರು ಮಾತಾಡದೇ ಖರೀದಿಸ್ತಾರೆ ಅನ್ನೋದು ಸತ್ಯ.

ಸಂಪಾದಕರ ಸದ್ಯಶೋಧನೆ

ರೀ ಸ್ಟಾರ್ಟ್ ಮಾಡೋದು ಹೇಗೆ?

ಪ್ರಕಾಶಕ ಮಿತ್ರರಾದ ಜಮೀಲ್ ಅವರು ಇತ್ತೀಚೆಗೆ ತಮ್ಮ ಸಾವಣ್ಣ ಪ್ರಕಾಶನದಿಂದ ಹೊರತಂದ ಪುಸ್ತಕಗಳ ಪ್ರತಿಗಳನ್ನು ಕಳಿಸಿಕೊಟ್ಟಿದ್ದರು. ಆ ಪೈಕಿ ಗೌರಿಬಿದನೂರು ವಾಗೀಶ ಕಟ್ಟಿ ಬರೆದ 'ರೀ Start ಎಂಬ ಕೃತಿಯೂ ಸೇರಿತ್ತು. ಸಹಜ ಕುತೂಹಲದೊಂದಿಗೆ ಪುಸ್ತಕವನ್ನು ಕೈಗೆತ್ತಿ ಓದಲಾರಂಭಿಸಿದೆ. ಪರಿವಿಡಿಯಲ್ಲಿನ ವಿಷಯಗಳು ಆಸಕ್ತಿದಾಯಕವಾಗಿದ್ದವು. ಆಗದು ಎಂದು ಕೈ ಕಟ್ಟಿ ಕುಳಿತರೆ..? RE-START, ಜೀವನದಲ್ಲಿ ಸೋತು ಸೋತು ಸಾಕಾಗಿ ಹೋಗಿದ್ದೀರ?, ಛಲ ನಮ್ಮೆಲ್ಲರ ಬಲ, ಕಷ್ಟಗಳು ನಮ್ಮೊಬ್ಬರಿಗೆ, ಬೇರೆಯವರೆಲ್ಲ ಸುಖಜೀವಿಗಳೇ? ಶಾರ್ಪ್ ಆಗುವ ಪೆನ್ಸಿಲ್‌ಗಳು ಮತ್ತು ಸೋಲುಗಳಿಂದಲೇ ಶಾರ್ಪ್ ಆದವರು, ಎಲ್ಲರಿಗೂ ಮಾದರಿಯಾದ ಕಥೆ–127 Hours, ಅವಮಾನಗಳನ್ನು ಗೆಲುವಾಗಿ ಪರಿವರ್ತಿಸಬೇಕು, ಇತಿಹಾಸ ನಿರ್ಮಿಸಿದವರೆಲ್ಲರೂ optimistic ಜನರೇ, ಬುದ್ಧಿವಂತ ಆಗುವುದು ಹೇಗೆ? ...ಮುಂತಾದ ಅಧ್ಯಾಯಗಳ ಶೀರ್ಷಿಕೆಗಳೇ ಓದುವಂತೆ ಪ್ರೇರೇಪಿಸುವಂತಿದ್ದವು. ಒಂದೆಡೆ ಲೇಖಕ ಕಟ್ಟಿಯವರು, ಬದುಕಿನಲ್ಲಿ ನಾವು ಮುನ್ನಡೆಯಬೇಕಾದರೆ ಅವಮಾನಗಳನ್ನು ಮೀರುವ ಕಲೆಯನ್ನು ರೂಢಿಸಿಕೊಳ್ಳಬೇಕು. ತಿರಸ್ಕಾರ, ಅವಮಾನಗಳು ನಾಟಿಕೊಳ್ಳದ ಹಾಗೆ ದಪ್ಪ ಚರ್ಮವಾಗಿಸಿ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಇತರರ ಟೀಕೆಗಳಿಂದ ನಮ್ಮನ್ನು ರಕ್ಷಿಸಿಕೊಂಡು ನಮಗೆ ಬೇರೆಯವರಿಂದಾಗುವ ತಿರಸ್ಕಾರ, ಅವಮಾನಗಳನ್ನೂ ಸಹಿಸಿಕೊಳ್ಳುವ ಶಕ್ತಿಯನ್ನು ತಂದುಕೊಳ್ಳಬೇಕು. ಅವಮಾನಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ, ಆ ಕಹಿ ನೆನಪುಗಳನ್ನು ಮಾಗಿಸಲು ಬಿಟ್ಟುಬಿಟ್ಟರೆ, ಆಗ ನೋಡಿ ಬದುಕಿನ ಗಂಭೀರ ಸಮಸ್ಯೆಗಳಂತೆ ಕಂಡಿದ್ದೆಲ್ಲವೂ ಕೊನೆಗೆ ಸಮಸ್ಯೆಗಳಾಗಿಯೇ ಉಳಿದಿರುವುದಿಲ್ಲ' ಎಂದು ಹೇಳುತ್ತಾರೆ. ನಂತರ ಕಟ್ಟಿಯವರು ಒಬ್ಬರ ಜೀವನ ಪ್ರಸಂಗವನ್ನು ಹೇಳುತ್ತಾರೆ– ಇಂಗ್ಲೆಂಡಿನ ವಿದ್ಯಾರ್ಥಿಯೊಬ್ಬನಿಗೆ ಉತ್ತರ ಗೊತ್ತಿದ್ದರೂ ಉತ್ತರಿಸಲು ಉಗ್ಗುವಿಕೆಯಿಂದ ಬಹಳ ಕಷ್ಟಪಡುತ್ತಿದ್ದ. ಆ ಹುಡುಗ ನೋಡಲು ಸುಂದರವಾಗಿಯೂ ಇರಲಿಲ್ಲ, ಯಾರ ಸ್ನೇಹವೂ ಇಲ್ಲದೇ ಏಕಾಂಗಿಯಾಗಿಯೇ ಇರುತ್ತಿದ್ದ. ಆತ ಅನುಭವಿಸಿದ ಅವಮಾನಗಳು ಕಡಿಮೆಯೇನಲ್ಲ. ಮುಂದೆ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಅಧ್ಯಯನ ಮಾಡುತ್ತಿರುವಾಗಲೇ ನಟನೆಯಲ್ಲಿ ಆಸಕ್ತನಾದ. ಆದರೆ ಆತನಿಗೆ ಸಲೀಸಾಗಿ ಮಾತನಾಡಲು ಸಮಸ್ಯೆ. ಆತನಿಗೆ ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಎಂಜಿನಿಯರಿಂಗ್ ಓದಿದರೂ ನಟನೆಯಲ್ಲಿಯೇ ಆಸಕ್ತಿ. ಟಿವಿ ಚಾನೆಲ್, ಸಿನಿಮಾ, ಕಾಮಿಡಿ ಶೋ ಎಲ್ಲಿಯೂ ಅವಕಾಶಗಳು ಸಿಗಲಿಲ್ಲ. ಜೀವನದಲ್ಲಿ ಆತ ನಂಬಿಕೆ ಮತ್ತು ಭರವಸೆ ಕಳೆದುಕೊಳ್ಳದೇ ಉತ್ಸಾಹದಿಂದ ಪ್ರಯತ್ನಿಸುತಿದ್ದ. ಎಲ್ಲರನ್ನೂ ನಗಿಸುವುದು ಅವನ ಹವ್ಯಾಸವಾಗಿತ್ತು. ಈ ಮಧ್ಯೆ ಆತನೇ ಕಾಮಿಡಿ ಸ್ಕ್ರಿಪ್ಟ್‌ಗಳನ್ನು ಬರೆದು ನಟಿಸಲು ಶುರುಮಾಡಿದ. ತನಗೆ ಅಡ್ಡಿ ಮಾಡುತ್ತಿದ್ದ ಉಗ್ಗುವಿಕೆಯನ್ನು ತಡೆಯಲು, ಚಾರ್ಲಿ ಚಾಪ್ಲಿನ್ ಥರಾ ಮಾತಿಲ್ಲದೇ ನಟನೆ ಮಾಡುತ್ತ ನಗಿಸಲು ಶುರುಮಾಡಿದ. ಪ್ರಯತ್ನಗಳಿಂದಲೇ ಜಗತ್ತಿನ ಅದ್ಭುತ ನಟನಾದ, ಮುಂದೆ ನಡೆದಿದ್ದೆಲ್ಲವೂ ಇತಿಹಾಸವಾಯಿತು. ಅವಮಾನಗಳನ್ನು ಮೆಟ್ಟಿ ನಿಂತು ತನ್ನ ಕೊರತೆಗಳನ್ನೇ ಬಂಡವಾಳ ಮಾಡಿಕೊಂಡು, ಜೀವನವನ್ನೇ RE-START ಮಾಡಿ, ವಿಶ್ವ ಕಂಡ ಶ್ರೇಷ್ಠ ನಟನೆಂದು ಇತಿಹಾಸ ನಿರ್ಮಿಸಿದ. ಆತನ ಹೆಸರು ರೋವನ್ ಅಟ್‌ಕಿನ್ಸನ್ ಅಲಿಯಾಸ್ ಮಿಸ್ಟರ್ ಬೀನ್. ಇಂದು ವಿಶ್ವದಲ್ಲೇ ಬೀನ್ ಹೆಸರನ್ನು ಕೇಳದವರು ಇರಲಿಕ್ಕಿಲ್ಲ. ಜಗತ್ತಿನ ಸುಮಾರು 200 ದೇಶಗಳಲ್ಲಿ ಮಿಸ್ಟರ್ ಬೀನ್‌ನ ಕಾರ್ಯಕ್ರಮಗಳು ಪ್ರಸಾರವಾಗಿವೆ. ಮಕ್ಕಳಿಂದ ಮುದುಕರ ತನಕ ಎಲ್ಲರೂ ಆತನ ನಟನೆಯನ್ನು ಮೆಚ್ಚಿಕೊಂಡವರೇ. ಆರಂಭದಲ್ಲಿ ಆತನ ರೂಪವನ್ನು ನೋಡಿ, ನಿಜ ಹೆಸರಾದ ಅಟ್‌ಕಿನ್ಸನ್ ಎಂದು ಕರೆಯುವ ಬದಲು, ಯಾವುದಾದರೂ ತರಕಾರಿ ಹೆಸರನ್ನು ಆತನಿಗಿಡಬೇಕೆಂದು ನಿರ್ಧರಿಸಿದ್ದರಂತೆ. 'ಮಿಸ್ಟರ್ ಕ್ವಾಲಿಫ್ಲವರ್' ಎಂದು ಆರಂಭದಲ್ಲಿ ಕರೆಯುತ್ತಿದ್ದರಂತೆ. ಅದು ಉದ್ದವಾಗಿದ್ದರಿಂದ ನಂತರ, 'ಮಿಸ್ಟರ್ ಬೀನ್' ಎಂದು ಕರೆಯಲಾರಂಭಿಸಿದರಂತೆ. ಇಂದು ಆತನ ನಿಜ ಹೆಸರು ಬಹುತೇಕ ಮಂದಿಗೆ ಗೊತ್ತಿಲ್ಲ. 'ಮಿಸ್ಟರ್ ಬೀನ್' ಅಂದ್ರೆ ಎಲ್ಲರಿಗೂ ಗೊತ್ತು. ಕಟ್ಟಿಯವರ ಪುಸ್ತಕ ಹಿತವಾದ ಪ್ರೇರಣೆ ನೀಡುವುದರಲ್ಲಿ ಎರಡು ಮಾತಿಲ್ಲ.

ಮತ್ತೊಬ್ಬರ ಜೀವನ ಬೆಳೆಸುತ್ತಾ ನಾವು ಸಾರ್ಥಕ್ಯ ಕಾಣುವ ಪರಿ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಅವರು ಒಡಹುಟ್ಟಿದವರಲ್ಲ, ನೆರೆ-ಹೊರೆಯವರೂ ಅಲ್ಲ, ಪ್ರೇಮಿಗಳೂ ಅಲ್ಲ, ಬಾಯ್‌ಫ್ರೆಂಡ್-ಗರ್ಲ್‌ಫ್ರೆಂಡ್ ಸಹ ಅಲ್ಲ. ಗಂಡ-ಹೆಂಡತಿಯೂ ಅಲ್ಲ. ಬಾಸ್-ಸೆಕ್ರೆಟರಿಯೂ ಅಲ್ಲ. ಆದರೆ ಆಕೆ ಹಾಗೂ ಆತ ಮೂವತ್ತು ವರ್ಷಗಳಿಂದ ಒಟ್ಟಿಗೇ ಇದ್ದಾರೆ. ಆಕೆ ಕಿವುಡಿ. ಆತ ಅವಳ ಪಾಲಿಗೆ ಕಿವಿ, ಹೊರ ಜಗತ್ತಿನೊಂದಿಗೆ ಸಂಪರ್ಕ ಬೆಸೆಯುವ ಸೇತು. ಆತನಿಲ್ಲದಿದ್ದರೆ ಅವಳ ಪಾಲಿಗೆ ಜಗತ್ತೇ ಶೂನ್ಯ. ಹೊರ ಜಗತ್ತಿನ ಸಂಪರ್ಕವೇ ಕಟ್.

ಹಾಗಂತ ಆಕೆ ಸಾಮಾನ್ಯಳಲ್ಲ. ಅನಾಮಧೇಯಳೂ ಅಲ್ಲ. ಅವಳದು ಲೋಕಖ್ಯಾತಿ. ಆಕೆ ಹಾಲಿವುಡ್‌ನ ಖ್ಯಾತ ಅಭಿನೇತ್ರಿ. ಆದರೆ ಹುಟ್ಟಾ ಕಿವುಡಿ. ಈತ ಅವಳ ಸಂಜ್ಞಾ ದುಭಾಷಿ. ಅಂದರೆ ಸನ್ನೆ ಅಥವಾ ಸಂಜ್ಞೆ ಮೂಲಕ (sign language) ಮಾತು, ಶಬ್ದಗಳನ್ನು ಅವಳಿಗೆ ತಿಳಿಸುವವ. ಒಂದರ್ಥದಲ್ಲಿ ಅವಳ ಪಾಲಿಗೆ ಕಿವಿ, ಕಣ್ಣು, ಬಾಯಿ.

ಆಕೆಯ ಹೆಸರು ಮಾರ್ಲಿ ಮಾಟ್ಲಿನ್.

ಆತನ ಹೆಸರು ಜಾಕ್ ಜೇಸೊನ್.

ಮಾರ್ಲಿ ಮಾಟ್ಲಿನ್ ಒಂದೂವರೆ ವರ್ಷದ ಮಗುವಾಗಿದ್ದಾಗ ಒಂದು ಕಿವಿ ಕೇಳಿಸದಂತಾಯಿತು. ಮತ್ತೊಂದು ಕಿವಿ ಶೇಕಡಾ ನಲವತ್ತರಷ್ಟೇ ಕೇಳಿಸುತ್ತಿತ್ತು. ತಂದೆ-ತಾಯಿ ಏನೇ ಹೇಳಿದರೂ ಬೇಗ ಪ್ರತಿಕ್ರಿಯಿಸುತ್ತಿರಲಿಲ್ಲ. ಜೋರಾಗಿ ಕಿರುಚಿಕೊಂಡರೆ ಮಾತ್ರ ಥಟ್ಟನೆ ಏನೋ ಕೇಳಿಸಿದಂತಾಗಿ ಅದಕ್ಕೆ react ಮಾಡುತ್ತಿತ್ತು. ಮಗುವಿಗೆ ಶ್ರವಣ ದೋಷವಿದ್ದಿರಬಹುದೆಂಬುದನ್ನು ತಿಳಿಯಲು ಪಾಲಕರಿಗೆ ತಡವಾಗಲಿಲ್ಲ, ವೈದ್ಯರಲ್ಲಿಗೆ ಕರೆದುಕೊಂಡು ಹೋದರು. ಮಗುವಿನ ಕಿವುಡುತನವನ್ನು ಅವರು ಖಾತ್ರಿ ಪಡಿಸಿದರು. ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ. ಮಗುವಿನ ಶ್ರವಣದೋಷ ಸರಿಪಡಿಸಿ ಎಂದು ವೈದ್ಯರಿಗೆ ದುಂಬಾಲು ಬಿದ್ದರು. ಅವರು ಸಾಕಷ್ಟು ಪ್ರಯತ್ನಿಸಿದರೂ ಫಲ ಸಿಗಲಿಲ್ಲ, ಹತ್ತಾರು ವೈದ್ಯರನ್ನು ಭೇಟಿ ಮಾಡಿ, ಚಿಕಿತ್ಸೆ ಮಾಡಿಸಿದ ನಂತರ ಅದು ಸರಿ ಹೋಗುವಂಥದ್ದಲ್ಲ ಎಂಬುದು ಗೊತ್ತಾಯಿತು. ಮುದ್ದಾದ ಮಗು, ಸದಾ ನಗುಮುಖಿ, ಕ್ರಿಯಾಶೀಲ, ಎಂಥವರನ್ನೂ ಆಕರ್ಷಿಸುವ ಚೂಟಿತನ. ಮಾತು ಕೇಳಿಸುವುದಿಲ್ಲ ಎಂಬುದನ್ನು ಬಿಟ್ಟರೆ ಅವಳ ವ್ಯಕ್ತಿತ್ವದಲ್ಲಿ ಯಾವ ದೋಷವನ್ನೂ ಕಂಡುಹಿಡಿಯಲಾಗದು. ಆ ದೋಷವನ್ನೂ ಮರೆಮಾಚುವ ಚಾಲಾಕಿತನ. ಮನೆಯಲ್ಲಿ ಮತ್ಯಾರಿಗೂ ಕಿವುಡುತನವಿಲ್ಲ. ಆಕೆಯ ಶ್ರವಣ ಸಮಸ್ಯೆ ಕ್ರಮೇಣ ಉಲ್ಬಣಗೊಳ್ಳಬಹುದೇ ಹೊರತು ಗುಣವಾಗುವ ಸಾಧ್ಯತೆ ತೀರಾ ಕಡಿಮೆ ಎಂದು ವೈದ್ಯರು ಎಲ್ಲ ಆಸೆಗಳನ್ನು ಬಿಟ್ಟರು. ಹಾಗೆಂದು ಮಗುವನ್ನು ನಿರ್ಲಕ್ಷಿಸುವಂತಿರಲಿಲ್ಲ, ತಂದೆ-ತಾಯಿ ಅವಳನ್ನು ಸಂಜ್ಞೆ ಭಾಷೆ ಮೂಲಕ ಕಲಿಸುವ ಶಾಲೆಗೆ ಸೇರಿಸಿದರು.

ಹುಟ್ಟಾ ಕಿವುಡರು, ಮೂಕರೂ ಹೌದು. ಆದರೆ ಮಾಟ್ಲಿನ್‌ಗೆ ಸ್ವಲ್ಪ ಸ್ವಲ್ಪ ಕೇಳಿಸುತ್ತಿದ್ದರಿಂದ ಅವಳಿಗೆ ಧ್ವನಿ ಪರಿಚಯಿಸುವ ಪ್ರಯತ್ನವನ್ನು ಶಾಲೆಯಲ್ಲಿ ಮಾಡಿಸಿದರೂ ಅದು ಪ್ರಯೋಜನವಾಗಲಿಲ್ಲ, ಹನ್ನೊಂದು ವರ್ಷವಾಗಿದ್ದಾಗ ಬೇಬಿಸಿಟರ್‌ನಲ್ಲಿದ್ದಾಗ ಮಾಟ್ಲಿನ್ ಮೇಲೆ ಅತ್ಯಾಚಾರ ಪ್ರಯತ್ನ ನಡೆಯಿತು. ಮರುವರ್ಷ ಸ್ಕೂಲ್ ಟೀಚರ್ ಸಹ ಅವಳನ್ನು ರೇಪ್ ಮಾಡಲು ಪ್ರಯತ್ನಿಸಿದ.

ಮಾಟ್ಲಿನ್‌ಗೆ ಏಳು ತುಂಬಿದಾಗ ಚಿಲ್ಡ್ರನ್ ಥಿಯೇಟರ್ ಉತ್ಸವದಲ್ಲಿ ಪಾಲ್ಗೊಂಡಳು. ಅವಳ ಚೊಚ್ಚಲ ಅಭಿನಯ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಅದರಲ್ಲೂ ಅವಳದು ಮೂಕಿಯ ಪಾತ್ರ. ಆದರೆ ಆಕೆ ಮೂಲತಃ ಮೂಕಿ ಅಥವಾ ಕಿವುಡಿ ಎಂಬುದು ಯಾರಿಗೂ ಗೊತ್ತಿರಲಿಲ್ಲ, ಅಲ್ಲಿಂದ ಮುಂದೆ ನಾಟಕದಲ್ಲಿ ಅಭಿನಯಿಸುವ ಯಾವ ಅವಕಾಶವನ್ನೂ ಅವಳು ತಪ್ಪಿಸಿಕೊಳ್ಳುತ್ತಿರಲಿಲ್ಲ, ಕಾಲೇಜು ಮುಗಿಸುವ ಹೊತ್ತಿಗೆ ಅವಳು ಮುನ್ನೂರಕ್ಕೂ ಹೆಚ್ಚು ನಾಟಕ ಹಾಗೂ ಬೇರೆ ಬೇರೆ ಪ್ರದರ್ಶನಗಳಲ್ಲಿ ಅಭಿನಯಿಸುತ್ತಿದ್ದಳು. ಅವಳಿಗೆ ಇಪ್ಪತ್ತೊಂದು ತುಂಬಿದ್ದಾಗ 'Children of a Lesser God' ಎಂಬ ಚಿತ್ರದಲ್ಲಿ ಅಭಿನಯಿಸುವ ಮೂಲಕ ಅವಳು ಹಾಲಿವುಡ್‌ಗೆ ಕಾಲಿಟ್ಟಳು. ಈ ಚಿತ್ರದಲ್ಲಿನ ಅಭಿನಯಕ್ಕೆ ಅವಳಿಗೆ ಅತ್ಯುತ್ತಮ ನಟಿಗೆ ನೀಡುವ ಅಕಾಡೆಮಿ ಪ್ರಶಸ್ತಿ ಹಾಗೂ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಬಂತು.

ಸಿನಿಮಾ ಸೆಟ್‌ನಲ್ಲಿ ಮಾಟ್ಲಿನ್‌ಗೆ ಸಂಜ್ಞೆ ಮೂಲಕ ಸಂಭಾಷಣೆಯನ್ನೂ ಹೇಳಬೇಕಾಗುತ್ತಿತ್ತು. ನಿರ್ದೇಶಕರಿಗೆ ಸ್ವಲ್ಪವೂ ಕಷ್ಟವಾಗದಂತೆ ಬಹು ಬೇಗನೆ ಕಲಿತುಕೊಳ್ಳುತ್ತಿದ್ದಳು. ತನ್ನ ಪಾತ್ರಕ್ಕೆ ಬೇಕಾಗುವ ಭಾವಾಭಿನಯವನ್ನೂ ಬಹಳ ಪ್ರಾಕ್ಟೀಸ್ ಮಾಡುತ್ತಿದ್ದಳು. 'Picket Fences' ಎಂಬ ಚಿತ್ರದಲ್ಲಿ ಮನೋಜ್ಞ ಅಭಿನಯಕ್ಕೆ ಎಮ್ಮಿ ಪ್ರಶಸ್ತಿ ಬಂದಾಗ, ಹಾಲಿವುಡ್‌ನಲ್ಲಿ ಬಹುಕಾಲ ನೆಲೆ ನಿಲ್ಲುವ ತಾರೆ ಎಂಬ ಭರವಸೆಯನ್ನು ಮೂಡಿಸಿದಳು. ಅದಾದ ಬಳಿಕ ಮಾಟ್ಲಿನ್ ಹತ್ತಾರು ಸಿನಿಮಾ, ಜನಪ್ರಿಯ ಟಿವಿ ಧಾರಾವಾಹಿಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದಳು. ಇಷ್ಟಾದರೂ ಮಾಟ್ಲಿನ್ ಕಿವುಡಿ ಹಾಗೂ ಮೂಕಿ ಎಂಬುದು ಬಹಳ ಜನರಿಗೆ ಗೊತ್ತಿರಲಿಲ್ಲ, ಹೀಗಾಗಿ ಅವಳು ಅನುಕಂಪ ಆಧರಿತ ನಟಿಯಾಗಿರಲಿಲ್ಲ, ಶ್ರೇಷ್ಠತೆ ಹಾಗೂ ಅರ್ಹತೆಯೇ ಅವಳ ಉನ್ನತಿಗೆ ಮಾನದಂಡವಾಗಿತ್ತು. ಇಲ್ಲದಿದ್ದರೆ ಆಕೆಗೆ The West Wing, Blue's Clues, What the Bleep Do you know?!, Desperate Housewives, The L Word, The Blind side ಮುಂತಾದ ಸಿನಿಮಾಗಳಲ್ಲಿ ಅವಕಾಶ ಸಿಗುತ್ತಿರಲಿಲ್ಲ. ಕಿವುಡು ಮಕ್ಕಳ ಕಲ್ಯಾಣಕ್ಕಾಗಿ ಟಿವಿ ಕಾರ್ಯಕ್ರಮವೊಂದರಲ್ಲಿ ಎರಡು ಗಂಟೆಗಳ ಕಾಲದ ಮಾಟ್ಲಿನ್ ಅಭಿನಯಕ್ಕೆ ಸುಮಾರು ಹತ್ತು ಲಕ್ಷ ಡಾಲರ್ ಹಣ ಸಂಗ್ರಹವಾಗಿದ್ದು ಅವಳ ಜನಪ್ರಿಯತೆಗೆ ಸಾಕ್ಷಿ. ಹಲವು ವಿಶ್ವವಿದ್ಯಾಲಯಗಳು ಆಕೆಗೆ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿವೆ. ಬಿಲ್ ಕ್ಲಿಂಟನ್ ಅಮೆರಿಕದ ಅಧ್ಯಕ್ಷರಾಗಿದ್ದಾಗ, ಕಾರ್ಪೊರೇಷನ್ ಫಾರ್ ನ್ಯಾಷನಲ್ ಸರ್ವೀಸ್‌ಗೆ ಮುಖ್ಯಸ್ಥಳನ್ನಾಗಿ ಆಕೆಯನ್ನು ನೇಮಿಸಿದ್ದರು. ಒಮ್ಮೆ ಆಸ್ಕರ್ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರ ಹೆಸರುಗಳನ್ನು ಘೋಷಿಸುವ ಅವಕಾಶವನ್ನು ಮಾಟ್ಲಿನ್‌ಗೆ ನೀಡಲಾಗಿತ್ತು. ಎಲ್ಲರ ಹೆಸರುಗಳನ್ನು ಸಂಜ್ಞೆ ಮೂಲಕ ಹೇಳಿದ ಆಕೆ, ಅತ್ಯುತ್ತಮ ನಟ, ನಟಿಯರ ಹೆಸರುಗಳನ್ನು ಮಾತ್ರ ಜೋರಾಗಿ ಹೇಳಿ ರೋಮಾಂಚನ ಮೂಡಿಸಿದ್ದಳು. ಮೂಕಿಯಾಗಿ, ಕಿವುಡಿಯಾಗಿ ಮಾಟ್ಲಿನ್ ಏರಿದ ಎತ್ತರ ಅಸಾಧಾರಣವಾದುದು. ಹಾಗೆ ನೋಡಿದರೆ, ಅವಳ ಅಭಿನಯಕ್ಕೆ ಇವು ಅಡ್ಡಿಯಾಗಲೇ ಇಲ್ಲ. ಅವಳ ಅಭಿನಯವನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಅವಳ ಈ ದೋಷಗಳು ಗಮನಕ್ಕೆ ಬರುವುದಿಲ್ಲ, ಹೇಳಿದರೂ ನಂಬುವುದು ಕಷ್ಟ. ನಿಜಕ್ಕೂ ತನ್ನ ಶಾರೀರಿಕ ದೋಷಗಳನ್ನು ಮೆಟ್ಟಿ ನಿಂತ ಧೀರೆ ಆಕೆ.

ಇಂಥ ಮಾಟ್ಲಿನ್, ಜಾಕ್ ಜೇಸೊನ್‌ನನ್ನು ಭೇಟಿಯಾಗಿದ್ದು ಆಕಸ್ಮಿಕ. ಸುಮಾರು ಮೂವತ್ತು ವರ್ಷಗಳ ಹಿಂದೆ, ಅಂದರೆ Children of a Lesser God ಸಿನಿಮಾ ಬಿಡುಗಡೆಯಾದ ಸಂದರ್ಭದಲ್ಲಿ ಮಾಟ್ಲಿನ್ ಏಕಾಏಕಿ ಜನಪ್ರಿಯತೆಯ ಉತ್ತುಂಗಕ್ಕೇರಿದ ಸಮಯದಲ್ಲಿ, ವಿಶ್ವದೆಲ್ಲೆಡೆಯಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಮಂತ್ರಣ ಬರಲಾರಂಭಿಸಿತ್ತು. ಆ ಪ್ರಯುಕ್ತ ಆಕೆ ಲಂಡನ್‌ನ ಒಂದು ಕಾರ್ಯಕ್ರಮಕ್ಕೆ ಒಪ್ಪಿಕೊಂಡಾಗ, ಅವಳಿಗೆ ಒಬ್ಬ ಸಮರ್ಥ ಹಾಗೂ ಚಾಲಾಕಿ ಇಂಟರ್‌ಪ್ರಿಟರ್ ಅಗತ್ಯವಿತ್ತು. ಆಗ ಮಾಟ್ಲಿನ್ ಬಾಯ್‌ಫ್ರೆಂಡ್ ಆಗಿದ್ದ ನಟ ವಿಲಿಯಂ ಹರ್ಟ್‌ನ ಸಹಾಯಕ ಜೇಸೊನ್‌ನನ್ನು ಸಂಪರ್ಕಿಸಿದ. ಜೇಸೊನ್ ಹರ್ಟ್‌ನನ್ನು ಭೇಟಿಯಾಗಿ ಚರ್ಚಿಸಿದ. ಅದಾದ ಬಳಿಕ ಮಾಟ್ಲಿನ್ ಮತ್ತು ಜೇಸೊನ್ ಭೇಟಿಯಾದರು. ಇಬ್ಬರೂ ಸಂಜ್ಞೆ ಭಾಷೆ ಮೂಲಕ ಸುಮಾರು ಮುಕ್ಕಾಲು ಗಂಟೆ ಮಾತಾಡಿದರು. ಜೇಸೊನ್‌ನ ಚಾಕಚಕ್ಯತೆ ಮಾಟ್ಲಿನ್‌ಗೆ ಬಹಳ ಇಷ್ಟವಾಯಿತು. ಮೊದಲ ಭೇಟಿಯಲ್ಲಿಯೇ ಜೇಸೊನ್, ಮಾಟ್ಲಿನ್‌ಳಿಗೆ ಮೋಡಿ ಮಾಡಿದ.

ಅಂದಿನಿಂದ ಶುರುವಾದ ಈ ಬಂಧ ಇಂದಿನವರೆಗೂ ನಡೆದುಕೊಂಡು ಬಂದಿದೆ. ಅಂದಿನಿಂದ ಜೇಸೊನ್, ಮಾಟ್ಲಿನ್‌ಳ ಸಂಜ್ಞಾ ದುಭಾಷಿ, ಆಕೆಯ ಕಿವಿ, ಆಕೆಯ ಬಾಯಿ, ಆಕೆಯ ಜತೆಗಾರ, ನೆರಳು, ಆಕೆಯ ವಕ್ತಾರ ಹಾಗೂ ಬಿಜಿನೆಸ್ ಪಾರ್ಟನರ್. ಜೇಸೊನ್ ಇಲ್ಲದೇ ಮಾಟ್ಲಿನ್ ಇಲ್ಲ, ಅಪೂರ್ಣ. ಜೇಸೊನ್ ಕೇಳದೇ ಆಕೆ ಮಾತಾಡುವುದಂತೂ ಇಲ್ಲ ಬಿಡಿ. ಆತನನ್ನು ಕೇಳದೆ ಯಾವುದೇ ನಿರ್ಧಾರವನ್ನೂ ತೆಗೆದುಕೊಳ್ಳುವುದಿಲ್ಲ, ಗಂಡ-ಹೆಂಡತಿ ಅಥವಾ ಪ್ರೇಮಿಗಳು ಬೇರೆ ಬೇರೆಯಾಗಿರಬಹುದು, ಆದರೆ ಮಾಟ್ಲಿನ್-ಜೇಸೊನ್ ಮಾತ್ರ ಪರಸ್ಪರರ ಖಾಸಗಿ ಸಮಯ ಬಿಟ್ಟು ಸದಾ ಒಟ್ಟಿಗೇ ಇರುತ್ತಾರೆ. ಮಾಟ್ಲಿನ್, ಕೆವಿನ್ ಗ್ರಾಂಡಲ್‌ಸ್ಕಿ ಎಂಬ ಪೊಲೀಸ್ ಆಫೀಸರನನ್ನೂ ಮದುವೆಯಾಗಿದ್ದಾಳೆ. ಅವರಿಗೆ ನಾಲ್ವರು ಮಕ್ಕಳಿದ್ದಾರೆ. ಜೇಸೊನ್ ಅವಳ ಮದುವೆಯಲ್ಲೂ ಪಕ್ಕದಲ್ಲಿದ್ದ. ನಾಲ್ವರು ಮಕ್ಕಳು ಹುಟ್ಟಿದಾಗಲೂ ಜತೆಯಲ್ಲಿದ್ದ. ಬಹಳ ಜನ ಮಾಟ್ಲಿನ್-ಜೇಸೊನ್ ಪತಿ-ಪತ್ನಿ ಎಂದು ಭಾವಿಸಿದ್ದರೂ ಅಚ್ಚರಿಯಿಲ್ಲ, ಕಾರಣ ಸಾರ್ವಜನಿಕ ವೇದಿಕೆಗಳಲ್ಲಿ ಗಂಡನಿಗಿಂತ ಹೆಚ್ಚು ಸಲ ಜೇಸೊನ್ ಅವಳ ಪಕ್ಕ ಕಾಣಿಸಿಕೊಂಡಿದ್ದಾನೆ.

ಮಾಟ್ಲಿನ್ ಮನೆಯಿಂದ ಹೊರಬಿದ್ದರೆ ಸಾಕು, ಅವಳ ಜತೆಯಲ್ಲಿ ಜೇಸೊನ್ ಇರಲೇಬೇಕಿತ್ತು. ಕೆಲವು ವೇಳೆ ಆತ ಆಕೆಯ ಕಾರು ಡ್ರೈವರ್ ಆಗಿ, ಆಕೆಯ ಬಾಡಿಗಾರ್ಡ್ ಆಗಿ, ಸಹಾಯಕನಾಗಿ, ಸೇವಕನಾಗಿ ಕೆಲಸ ಮಾಡಿದ್ದಾನೆ. ಜೇಸೊನ್ ಇಲ್ಲದಿದ್ದರೆ ಅವಳಿಗೆ ಜಗತ್ತೇ ಶೂನ್ಯ. ಮಾಟ್ಲಿನ್‌ಗೆ ಹೇಳಬೇಕಾದುದನ್ನೆಲ್ಲ ಜೇಸೊನ್‌ಗೆ ಹೇಳಬೇಕಾಗುತ್ತಿತ್ತು. ಆತ ಅವಳಿಗೆ ಸಂಜ್ಞೆ ಮೂಲಕ ತಿಳಿಸುತ್ತಿದ್ದ. ಇಬ್ಬರೂ ಸನ್ನೆ ಭಾಷೆ ಮೂಲಕ ಮಾತಾಡಿಕೊಳ್ಳುತ್ತಿದ್ದರು. ಮಾಟ್ಲಿನ್ ಭಾಷಣ ಮಾಡುವಾಗ ಸನ್ನೆಯಲ್ಲಿ ಹೇಳಿದ್ದನ್ನು ಜೇಸೊನ್ ಮಾತಿನಲ್ಲಿ ಪ್ರೇಕ್ಷಕರಿಗೆ ಹೇಳುತ್ತಿದ್ದ. ಆಕೆಗೆ ಸಂಭಾಷಣೆ, ಅಭಿನಯ ವಿವರಗಳನ್ನು ಹೇಳುತ್ತಿದ್ದವನೂ ಅವನೇ.

ಒಮ್ಮೆ ಮಾಟ್ಲಿನ್ ಟಿವಿ ಕಾರ್ಯಕ್ರಮದಲ್ಲಿ 'ಪ್ರತಿ ಬುಧವಾರ ಬೆಳಗ್ಗೆ 9ರಿಂದ 11 ಗಂಟೆಗೆ ನನಗೆ ಫೋನ್ ಮಾಡಿ, ನನಗೆ ಆ ಸಮಯದಲ್ಲಿ ಕಿವಿ ಕೇಳಿಸುತ್ತದೆ. ನಾನು ನಿಮ್ಮೊಂದಿಗೆ ಮಾತಾಡುತ್ತೇನೆ' ಎಂದು ತಮಾಷೆ ಮಾಡಿದ್ದಳು. ಅದನ್ನೇ ನಿಜವೆಂದು ತಿಳಿದ ಅಸಂಖ್ಯ ಅಭಿಮಾನಿಗಳು ಫೋನ್ ಮಾಡಿದ್ದರು. ಫೋನ್ ಕರೆ ಬಂದಾಗ, ಸ್ಪೀಕರ್ ಫೋನ್ ಆನ್ ಮಾಡುತ್ತಿದ್ದಳು. ಅಭಿಮಾನಿಗಳ ಮಾತುಗಳನ್ನು ಕೇಳಿ ಜೇಸೊನ್ ಸಂಜ್ಞೆ ಭಾಷೆ ಮೂಲಕ ಮಾಟ್ಲಿನ್‌ಗೆ ತಿಳಿಸುತ್ತಿದ್ದ. ಆಕೆ ಅದಕ್ಕೆ ಪ್ರತಿಕ್ರಿಯಿಸುತ್ತಿದ್ದಳು. ಈಗ ಮಾಟ್ಲಿನ್‌ಗೆ ವಾರದಲ್ಲಿ ಎರಡು ಗಂಟೆ ಕಿವಿ ಕೇಳಿಸುತ್ತದೆಂದು ಅವಳ ಅಭಿಮಾನಿಗಳು ನಂಬಿದ್ದರು. ಮಾಟ್ಲಿನ್ ಬದುಕಿನಲ್ಲಿ ಜೇಸೊನ್ ಪಾತ್ರ ದೊಡ್ಡದು. ಆಕೆಗಾಗಿ ಆತ ತನ್ನ ಬದುಕನ್ನು ಧಾರೆಯೆರೆದವನು. ಆರಂಭದಲ್ಲಿ ಆಕೆಯ ಗಂಡ ಜೇಸೊನ್ ನೆರವಿನಿಂದಲೇ ಪತ್ನಿಯೊಂದಿಗೆ ಮಾತಾಡುತ್ತಿದ್ದ. ಕ್ರಮೇಣ ಆತನೂ ಸಂಜ್ಞೆ ಭಾಷೆ ಕಲಿಯಲೇಬೇಕಾಯಿತು.

ಮಾಟ್ಲಿನ್ ಸಿನಿಮಾ ನೋಡಬೇಕೆಂದು ಅನಿಸಿದಾಗಲೂ ಜೇಸೊನ್‌ನನ್ನು ಕರೆಯುತ್ತಿದ್ದಳು. ಆ ದಿನಗಳಲ್ಲಿ ಸಿನಿಮಾಗಳಿಗೆ ಸಬ್ ಟೈಟಲ್ (ಅಡಿ ಟಿಪ್ಪಣಿ)ಗಳು ಇರುತ್ತಿರಲಿಲ್ಲ. ಸಿನಿಮಾದ ಡೈಲಾಗ್‌ಗಳನ್ನೆಲ್ಲ ಜೇಸೊನ್ ಆಕೆಗೆ ಹೇಳಬೇಕಾಗುತ್ತಿತ್ತು. ಎರಡು, ಎರಡೂವರೆ ಗಂಟೆಯ ಸಿನಿಮಾ ಸಂಭಾಷಣೆಯನ್ನು ನಿರಂತರವಾಗಿ ಜೇಸೊನ್ ಆಂಗಿಕ ಭಾಷೆಯಿಂದ ಹೇಳುತ್ತಿದ್ದ. ಸಿನಿಮಾ ಮುಗಿಯುವ ಹೊತ್ತಿಗೆ ಜೇಸೊನ್ ಸುಸ್ತಾಗಿ ಅಲ್ಲಿಯೇ ನೆಲಕ್ಕೊರಗುತ್ತಿದ್ದರೆ, ಮಾಟ್ಲಿನ್ ಅವನಿಗೆ ಸೇವೆ ಮಾಡುತ್ತಿದ್ದಳು. ಕೆಲವು ಸಂದರ್ಭಗಳಲ್ಲಿ ಆಕೆ ಒಂದೇ ದಿನದಲ್ಲಿ ಎರಡನೆಯ ಸಿನಿಮಾ ನೋಡುವ ಆಸೆ ವ್ಯಕ್ತಪಡಿಸಿದರೆ, ಜೇಸೊನ್ ಇಲ್ಲವೆನ್ನುತ್ತಿರಲಿಲ್ಲ, ಅದೇ ಉತ್ಸಾಹದಿಂದ ಎದ್ದು ನಿಂತು ಶುರು ಹಚ್ಚಿಕೊಳ್ಳುತ್ತಿದ್ದ.

ಕಿವುಡು ತಂದೆ-ತಾಯಿಯ ಮಗನಾಗಿ ಹುಟ್ಟಿದ ಜೇಸೊನ್, ಮನೆಯಲ್ಲಿ ಮಾತು, ಹಾಡು, ಶಬ್ದಗಳನ್ನು ಕೇಳದೇ ಬೆಳೆದವ. ಐದು ವರ್ಷವಾಗುವ ತನಕ ಮನೆಯ ಹೊರಗಿನ ಶಬ್ದ ಬಿಟ್ಟರೆ, ಮೌನವೇ ಜಗತ್ತು ಎಂದು ಭಾವಿಸಿದವ. ಹೀಗಾಗಿ ಸಂಜ್ಞಾ ಭಾಷೆಯನ್ನು ಚಿಕ್ಕಮಗುವಾಗಿದ್ದಾಗಲೇ ಕಲಿಯುವುದು ಅನಿವಾರ್ಯವಾಯಿತು. ಸ್ಕೂಲ್‌ನಲ್ಲಿ ಸಂಜ್ಞಾಭಾಷೆಯನ್ನು ಶಿಸ್ತುವಾಗಿ ಕಲಿತ. ಜತೆಯಲ್ಲಿ ಸ್ಪಾನಿಶ್ ಭಾಷೆಯನ್ನೂ ಕಲಿತ.

ಮಾಟ್ಲಿನ್‌ಳ ಇಂಟರ್‌ಪ್ರಿಟರ್ ಆಗಿ ಸೇರಿದ ನಂತರ, ಅವಳು ಸನ್ನೆಭಾಷೆಯಲ್ಲಿ ಹೇಳಿದ್ದನ್ನು ಇತರರಿಗೆ ಇಂಗ್ಲಿಷ್‌ನಲ್ಲಿ ಹೇಳಬೇಕಾಗುತ್ತಿತ್ತು. ಹೀಗಾಗಿ ಆತ ಇಂಗ್ಲಿಷ್ ಅನ್ನೂ ಸುಧಾರಿಸಿಕೊಂಡ. ಆತ ಕೇವಲ ದುಭಾಷಿಯಷ್ಟೇ ಆಗಿರಲಿಲ್ಲ, ಭಾವನೆಗಳ ಭಾಷಿಯೂ ಆಗಿದ್ದ. ಎಷ್ಟೋ ವೇಳೆ ಮಾಟ್ಲಿನ್ ಆಂಗಿಕವಾಗಿ ಹೇಳಿದ್ದನ್ನು ಜೇಸೊನ್ ಮಾತಿನಲ್ಲಿ ಕೇಳಿ ಪ್ರೇಕ್ಷಕರು ಅತ್ತಿದ್ದುಂಟು.

ಸಭೆಯಲ್ಲಿ ಶ್ರವಣದೋಷವಿರುವ ಪ್ರೇಕ್ಷಕರಿಗಾಗಿ ಸಂಜ್ಞೆಯ ಮೂಲಕ ಹೇಳಲು ಜೇಸೊನ್ ಎಲ್ಲಿಲ್ಲದ ಬೇಡಿಕೆಯ ದುಭಾಷಿ. ಆತ ಲ್ಯಾರಿ ಕಿಂಗ್, ಎಲೆನ್, ಡೊನಾಲ್ಡ್ ಟ್ರಂಪ್, ಬರಾಕ್ ಒಬಾಮ ಮುಂತಾದವರಿಗೆ ಆಂಗಿಕ ದುಭಾಷಿಯಾಗಿದ್ದುಂಟು. ಆದರೂ ಆತ ಮಾಟ್ಲಿನ್‌ಳನ್ನು ಬಿಟ್ಟಿಲ್ಲ, ಆಕೆ ಬಿಡುವಿದ್ದಾಗ, ವಿಹಾರ ಅಥವಾ ವಿಶ್ರಾಂತಿಗೆ ತೆರಳಿದಾಗ, ಇಂಥ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳುತ್ತಾನೆ. ಇಲ್ಲದಿದ್ದರೆ ಅವನ ಸೇವೆಯೇನಿದ್ದರೂ ಮಾಟ್ಲಿನ್‌ಳಿಗೆ ಮೀಸಲು.

ತನ್ನ ಯಶಸ್ಸಿನಲ್ಲಿ ಬಹುಮುಖ್ಯ ದೊಡ್ಡ ಪಾತ್ರವನ್ನುವಹಿಸಿದ ಜೇಸೊನ್‌ನನ್ನು ಆಕೆ ತನ್ನ ವ್ಯವಹಾರದಲ್ಲಿ ಪಾರ್ಟನರ್ ಆಗಿ ಸೇರಿಸಿಕೊಂಡಿರುವುದು ಮಾಟ್ಲಿನ್‌ಳ ದೊಡ್ಡಗುಣ. ಮೂವತ್ತು ವರ್ಷಗಳಾದರೂ ಅವರ ಈ ವಿಚಿತ್ರ, ಅನೂಹ್ಯ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿಲ್ಲ, ಎಷ್ಟೋ ವೇಳೆ ಮಾಟ್ಲಿನ್ ಹೇಳದಿರುವುದನ್ನೂ ಜೇಸೊನ್ ಹೇಳುತ್ತಾನೆಂಬ ಆರೋಪಗಳಿವೆ. ಆದರೆ ಅದು ಅವರ ಸಂಬಂಧಕ್ಕೆ ಮಾರಕವಾಗಿಲ್ಲ, 'ನನ್ನ ವಿರುದ್ಧ ಮಾಟ್ಲಿನ್‌ಗೆ ಚಾಡಿ ಹೇಳುವವರಿಗೆ ಒಂದೋ ಸಂಜ್ಞೆ ಭಾಷೆ ಗೊತ್ತಿರಬೇಕು. ಇಲ್ಲವೇ ಅದನ್ನೂ ನನ್ನ ಮೂಲಕವೇ ಆಕೆಗೆ ತಲುಪಿಸಬೇಕು' ಎಂದು ಜೇಸೊನ್ ಅನೇಕ ಸಲ ತಮಾಷೆಗೆ ಹೇಳಿದ್ದುಂಟು.

ಇತ್ತೀಚೆಗೆ ನಾನು ಮಾರ್ಲಿ ಮಾಟ್ಲಿನ್ ಬರೆದ 'I Will Screem Later' ಎಂಬ ಆತ್ಮಕಥೆಯನ್ನು ಓದುತ್ತಿದ್ದೆ. ಪುಸ್ತಕದ ಮೊದಲರ್ಧದ ಬಳಿಕ ಇದು ಅವಳ ಕತೆಯೋ, ಜೇಸೊನ್ ಕತೆಯೋ ಎಂದು ಗೊಂದಲವಾಗುವಷ್ಟು ಎರಡೂ ಪಾತ್ರಗಳು ಒಬ್ಬರೊಳಗೇ ಬೆಸೆದುಕೊಂಡಿದೆ.. ಅಲ್ಲಲ್ಲಿ ಮಾಟ್ಲಿನ್ ಮಾತುಗಳನ್ನು ಕೇಳುತ್ತಿದ್ದರೆ ಆಕೆ ಮರೆಯಾಗಿ ಜೇಸೊನ್ ಆವರಿಸಿಕೊಳ್ಳುತ್ತಿದ್ದ.

ನಾವು ಮತ್ತೊಬ್ಬರ ಜೀವನದಲ್ಲಿ ಬದುಕು ಕಟ್ಟಿಕೊಂಡು, ಅವರ ಜೀವನವನ್ನೂ ಬೆಳೆಸುತ್ತಾ, ನಮ್ಮ ಬದುಕಿನ ಸಾರ್ಥಕ್ಯ ಕಾಣುವುದೆಂದರೆ ಇದೇನಾ?

ಸ್ವಾತಂತ್ರ್ಯ ಸ್ವೇಚ್ಛಾಚಾರವಾಗುತ್ತಿದೆಯೇ?

ಅಭಿಮತ

ಸಂದೀಪ್ ಶರ್ಮಾ ಮೂಟೇರಿ

vveditoped@gmail.com

ಅಭಿವ್ಯಕ್ತಿಯು ಮನುಷ್ಯನ ಮೂಲಭೂತ ಗುಣ. ಈ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನವು 19(1)(ಎ) ವಿಧಿ ಅಡಿಯಲ್ಲಿ ಪ್ರತಿಯೊಬ್ಬ ಭಾರತೀಯನಿಗೂ ನೀಡಿದೆ ಹಾಗೂ ಈ ವಿಧಿಗೆ 19(2)ರ ಅಡಿಯಲ್ಲಿ ಅದರ ಮಿತಿಗಳನ್ನೂ ತಿಳಿಸಿದೆ. ಪ್ರಜೆಯು ತನಗನಿಸಿದ್ದನ್ನು ನಿರ್ಭಿಡೆಯಿಂದ ವ್ಯಕ್ತಪಡಿಸುವುದೇ ಅಭಿವ್ಯಕ್ತಿ ಸ್ವಾತಂತ್ರ್ಯ. ಮನೆಯಲ್ಲಿ ರಚ್ಚೆ ಹಿಡಿಯುವ ಮಗುವಿನಿಂದ ಮೊದಲ್ಗೊಂಡು, ರಾಷ್ಟ್ರದ ಮುಖ್ಯಸ್ಥರ ತನಕ ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಅದನ್ನು ಅನುಭವಿಸುತ್ತಿರುವುದು ಈಗಿನ ವಾಸ್ತವ. ಮನುಷ್ಯನ ಅಮೂರ್ತ ಯೋಚನೆಗಳು ಸಂವಹನ ಮಾಧ್ಯಮಗಳ ಮೂಲಕ ಮೂರ್ತರೂಪ ತಳೆಯುವುದೇ ಅಭಿವ್ಯಕ್ತಿ. ಮಾತು ಮತ್ತು ಅದರ ವಿವಿಧ ಪ್ರಕಾರಗಳಾದ ಬರಹ, ಅಭಿನಯ, ಸನ್ನೆ, ಸಂಕೇತ, ಚಿತ್ರ-ಚಲನಚಿತ್ರ, ಸಂಗೀತ, ಸಾಮಾಜಿಕ ಮಾಧ್ಯಮಗಳು ಇವೆಲ್ಲವೂ ಅಭಿವ್ಯಕ್ತಿಯ ವೈವಿಧ್ಯಗಳು. ಇವೆಲ್ಲಕ್ಕೂ ಸಂವಿಧಾನ ಅಸ್ತು ಎಂದಿದ್ದರೂ, ಪ್ರತಿಯೊಂದಕ್ಕೂ ಹೊಣೆಗಾರಿಕೆಯ ಭದ್ರಕೊಂಡಿಯನ್ನು ಬೆಸೆದು ನಿಯಂತ್ರಿಸಿದೆ. ಇಲ್ಲಿ ಸ್ವಾತಂತ್ರ್ಯ ಮತ್ತು ಉತ್ತರದಾಯಿತ್ವಗಳು ಒಂದೇ ನಾಣ್ಯದ ಎರಡು ಮುಖಗಳು.

'ಅಭಿವ್ಯಕ್ತಿ ಸ್ವಾತಂತ್ರ್ಯ'ವು ಸದ್ಯಕ್ಕೆ ಕರ್ನಾಟಕದಲ್ಲಿ ಗಮನ ಸೆಳೆಯುವಂತೆ ಸದ್ದು ಮಾಡುತ್ತಿದೆ. ಇದಕ್ಕೆ ಕಾರಣರಾಗಿದ್ದು 'ಗುರು' ಸ್ಥಾನದಲ್ಲಿರುವ ಒಬ್ಬರು ಮಠಾಧಿಪತಿ ಹಾಗೂ 'ಮಹಾಗುರು' ಎಂದೇ ಕರೆಸಿಕೊಳ್ಳುವ ಒಬ್ಬ ಚಲನಚಿತ್ರ ಸಂಗೀತ ನಿರ್ದೇಶಕರು. ಇವರಿಬ್ಬರೂ ತಮ್ಮ ಅಸಂಬದ್ಧ ಹೇಳಿಕೆಗಳಿಂದಾಗಿ, ತಮ್ಮ ವಿವೇಚನೆಯು ಯಾವ ಮಟ್ಟಕ್ಕೆ ತಲುಪಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಷ್ಟರ ಮಟ್ಟಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಜನರು ತಾವು ಹೇಳಿದ್ದನ್ನೆಲ್ಲಾ ಕೇಳಿಸಿಕೊಳ್ಳುತ್ತಾರೆ, ತಾವು ಹೇಳಿದಂತೆ ಪಾಲಿಸುತ್ತಾರೆ ಎಂದು ಇವರಿಬ್ಬರೂ ಭಾವಿಸಿದ್ದರೆ, ಇವರಂಥ ದಡ್ಡರು ಮತ್ತು ಸಂಕುಚಿತ ಸ್ವಭಾವದವರು ಎಲ್ಲಿಯೂ ಸಿಗಲಿಕ್ಕಿಲ್ಲ. ಭಾರತದ ಸಂಸ್ಕೃತಿ ಮತ್ತು ಇತಿಹಾಸಗಳ ಮೇಲೆ ದಾಳಿಮಾಡಿ ತಲೆಮರೆಸಿಕೊಳ್ಳಲು ಇಂಥ ಬುದ್ಧಿಜೀವಿಗಳು/ಎಡಪಂಥೀಯರು ಬಳಸಿಕೊಂಡಿರುವುದೇ ಈ 'ಅಭಿವ್ಯಕ್ತಿ ಸ್ವಾತಂತ್ರ್ಯ'ವನ್ನು. ಅದರಲ್ಲೂ, ನರೇಂದ್ರ ಮೋದಿಯವರು ಪ್ರಧಾನಿಯಾದಾಗಿನಿಂದ 'ಮಹಾಗುರು'ಗಳಿಂದ 'ಅಭಿವ್ಯಕ್ತಿ ಸ್ವಾತಂತ್ರ್ಯ'ದ ದುರುಪಯೋಗ ಜೋರಾಗಿಯೇ ನಡೆದಿದೆ!

ಈ ದೇಶದಲ್ಲಿ ನಡೆಯುವ ಎಷ್ಟೋ ಕೋಮುಪ್ರಚೋದನಾ ದಂಗೆಗಳಿಗೆ ಇಂಥ ಸೋಗಲಾಡಿ ಬುದ್ಧಿಜೀವಿಗಳೇ ಕಾರಣರಾಗಿರುತ್ತಾರೆ. ಆದರೆ ಅವರೊಂದು ಚಂದದ ಮುಖವಾಡ ಧರಿಸಿರುತ್ತಾರೆ– ಅದರ ಹೆಸರೇ 'ಅಭಿವ್ಯಕ್ತಿ ಸ್ವಾತಂತ್ರ್ಯ'. ಇದೊಂದು ವ್ಯವಸ್ಥಿತ ಜಾಲ ಎಂದರೆ ಅತಿಶಯೋಕ್ತಿಯಲ್ಲ. ತಮ್ಮ ಬೇಳೆ ಬೇಯಿಸಿಕೊಳ್ಳಲು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಳ್ಳುವ ಇವರು, ಸಂವಿಧಾನದ 19(1)(ಎ) ವಿಧಿಯ ಬಗ್ಗೆ ಮಾತ್ರ ಹೇಳಿ ಜನರನ್ನು ಮೂರ್ಖರಾಗಿಸಲು ಹೊರಟಂತಿದೆ. ದೇಶದ ನೈಜ ಇತಿಹಾಸ ಮತ್ತು ಸಂಸ್ಕೃತಿಯ ಪರ ಮಾತನಾಡುವವರನ್ನು, 'ದಾಳಿಕೋರರು' ಅಥವಾ 'ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವವರು' ಎಂಬಂತೆ ಚಿತ್ರಿಸಲು ಇವರು ಯತ್ನಿಸುತ್ತಾರೆ. 'ಬ್ರಾಹ್ಮಣರು ಹಾಗೆ, ಹೀಗೆ...', 'ಹಿಂದುತ್ವದಿಂದ ಬಹಳಷ್ಟು ತೊಂದರೆಯಾಗುತ್ತಿದೆ' ಎನ್ನುತ್ತಾ ಮೈ ಪರಚಿಕೊಂಡು, ತಮ್ಮ ಈ ಕೆಟ್ಟ ವಿಧಾನವನ್ನು ಮುಂದಿಟ್ಟುಕೊಂಡು 'ನಮ್ಮ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ' ಎಂದು ಬೊಬ್ಬೆಹೊಡೆಯುವ ಇವರು, ಅದೇ ಸಂವಿಧಾನದಲ್ಲಿರುವ 19(2) ವಿಧಿಯ ಬಗ್ಗೆ ಏನೂ ಮಾತನಾಡುವುದಿಲ್ಲ. ಏಕೆಂದರೆ ಅದು ಅಭಿವ್ಯಕ್ತಿ ಸ್ವಾತಂತ್ರ್ಯದ ಮಿತಿಗಳ ಬಗ್ಗೆ ಸ್ಪಷ್ಟವಾಗಿ ಹೇಳಿದೆ. ಅಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸುಳ್ಳುಗಳನ್ನು ಹೇಳುವುದು ಅಥವಾ ಯಾವುದೋ ಧರ್ಮವನ್ನು ಹೀಯಾಳಿಸುವಂತೆ ವರ್ತಿಸುವುದು (ಅದು ಬರಹ ಅಥವಾ ಭಾಷಣ ಯಾವುದೇ ಆಗಿರಲಿ) ಸಾಧ್ಯವಿಲ್ಲ ಎಂದು ಅದು ಹೇಳುತ್ತದೆ.

ಭಾರತವನ್ನು ಹೀಯಾಳಿಸಿ ಘೋಷಣೆ ಕೂಗುವುದು, 'ರಾಮ ಸುಳ್ಳು, ರಾಮಾಯಣ ಸುಳ್ಳು; ಭಗವದ್ಗೀತೆಯನ್ನು ಸುಡಬೇಕು' ಎನ್ನುವುದು, ಮೂರ್ತಿಪೂಜೆಯನ್ನು ವಿರೋಧಿಸುವ ಭರದಲ್ಲಿ ವಿಗ್ರಹಗಳನ್ನು ಒಡೆದುಹಾಕುವುದು, ಗೋವನ್ನು ಪೂಜಿಸುವವರೆದುರು ಗೋಮಾಂಸ ತಿನ್ನುವುದು ಇವೆಲ್ಲ ನಮ್ಮ ಬುದ್ಧಿಜೀವಿಗಳ ದೃಷ್ಟಿಯಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ!'. ಬ್ರಾಹ್ಮಣರ ಹೀಯಾಳಿಕೆಯೊಂದೇ ಅಲ್ಲ, ಇನ್ನೂ ಅನೇಕ ಪ್ರಕರಣಗಳು ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಚೌಕಟ್ಟಿನಲ್ಲಿ ಚಿತ್ರಿತಗೊಂಡಿವೆ. ಎಂ.ಎಫ್.ಹುಸೇನ್ ಎಂಬ ಚಿತ್ರಕಲಾವಿದ ಹಿಂದೂ ದೇವರುಗಳನ್ನು ನಗ್ನವಾಗಿ ಚಿತ್ರಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯ ಎನಿಸಿಕೊಳ್ಳುತ್ತದೆ; ಆದರೆ ತಸ್ಲಿಮಾ ನಸ್ರೀನ್ ಎಂಬ ಹೆಣ್ಣು ಮಗಳು ಮುಸ್ಲಿಂ ಸಮುದಾಯದ ಹುಳುಕುಗಳ ಬಗ್ಗೆ ಬರೆದರೆ ಅದು 'ಧರ್ಮನಿಂದನೆ' ಆಗುತ್ತದೆ ಮತ್ತು ಅದನ್ನು ಪ್ರಶ್ನಿಸಬೇಕಾದ ಇದೇ ಬುದ್ಧಿಜೀವಿಗಳು ಗಾಢಮೌನವನ್ನು ತಳೆಯುತ್ತಾರೆ. ಹಾಗಾದರೆ, ಇದ್ಯಾವ ಹೋರಾಟ? ಈ ಬುದ್ಧಿಜೀವಿಗಳಿಗೆ ಹಿಂದೂ ಧರ್ಮದಲ್ಲಿನ ಹುಳುಕು ತೋರಿಸುವಾಗ ಇರುವ ಆಸಕ್ತಿಯು ಅನ್ಯಧರ್ಮಗಳಲ್ಲಿನ ಮೂಢನಂಬಿಕೆಗಳನ್ನು ಹೊರಹಾಕುವಾಗ ಇರುವುದಿಲ್ಲವೇಕೆ?

ನಮ್ಮ ಸಮಾಜ ವೈವಿಧ್ಯಮಯ, ಒಬ್ಬನಂತೆ ಇನ್ನೊಬ್ಬನಿಲ್ಲ. ಅಭಿಪ್ರಾಯಭೇದ, ವೈರುಧ್ಯಗಳು, ಪ್ರತ್ಯೇಕ ಯೋಚನೆ-ಯೋಜನೆ-ಪರಿಕಲ್ಪನೆಗಳ ಮಧ್ಯದಲ್ಲಿ ಎಲ್ಲ ಗೊಂದಲಗಳನ್ನು ಸರಿದೂಗಿಸಿಕೊಂಡು ಬಾಳಬಲ್ಲವನೇ ಜಾಣ; ತಪ್ಪಿದರೆ ಅಪಾಯ ಶತಸ್ಸಿದ್ಧ. ಆದ್ದರಿಂದ, ಅಭಿವ್ಯಕ್ತಿಗೂ ಮೊದಲು ಅದರ ಪರಿಣಾಮವನ್ನು ಊಹಿಸುವ ಪ್ರೌಢಿಮೆಯನ್ನು ಕರ್ತೃವು ಬೆಳೆಸಿಕೊಳ್ಳಲೇಬೇಕು. ಮತ್ತೆ, ಹೊಣೆಯಿಂದ ನುಣುಚಿಕೊಳ್ಳುವುದು ಸುಲಭವಲ್ಲ. ತಪ್ಪಿದರೆ, ನಿಂದನೆ, ಟೀಕೆ, ಮುಜುಗರಕ್ಕೆ ಒಳಗಾಗುವುದರೊಂದಿಗೆ, ಸಾರ್ವಜನಿಕ ಸ್ವತ್ತುಗಳಿಗೆ ಹಾನಿಯಾಗುವ ಗಂಭೀರ ಸನ್ನಿವೇಶಗಳೂ ಸೃಷ್ಟಿಯಾಗಬಹುದು. ಇದನ್ನು ಸೃಷ್ಟಿಸಲು ಒಂದು ಹೇಳಿಕೆ/ಕಿರುಬರಹ/ಟ್ವೀಟ್ ಸಾಕು. ಪೈಂಟಿಂಗ್, ಚಲನಚಿತ್ರ, ಕಾದಂಬರಿ, ಕಾವ್ಯವಿಮರ್ಶೆ ಮುಂತಾದವು ತಮ್ಮ ಚೌಕಟ್ಟು ಮೀರಿದರೆ ಅಶಾಂತಿಗೆ ಆಹ್ವಾನ ನೀಡಬಲ್ಲವು. ಕೆಲವೊಮ್ಮೆ ಇದಕ್ಕೆಂದೇ ಬಹಳಷ್ಟು ಸಮಯಸಾಧಕರು ಕಾಯುತ್ತಲೂ ಇರುತ್ತಾರೆ. 'ತಣ್ಣೀರಾದರೂ ತಣಿಸಿ ಕುಡಿಯಬೇಕು; ಸತ್ಯವನ್ನೇ ಹೇಳು, ಪ್ರಿಯವಾದುದನ್ನೇ ಹೇಳು, ಅಪ್ರಿಯ ಸತ್ಯವನ್ನು ಹೇಳದಿರು, ಪ್ರಿಯವೆಂದು ಸುಳ್ಳು ಹೇಳದಿರು'– ಇದುವೇ ಸನಾತನ ಧರ್ಮ.

ಅಭಿವ್ಯಕ್ತಿಯ ಹಪಹಪಿಗೆ ಬಿದ್ದು, ಇತರರೆಡೆಗಿನ ಅವಜ್ಞೆಯಿಂದ ಅಥವಾ ತನ್ನದೇ ಸರಿಯೆಂಬ ಪೂರ್ವಗ್ರಹದಿಂದ ಹೇಳಹೊರಟರೂ, ಸಮಾಜದ ಒರೆಗಲ್ಲಿನಲ್ಲಿ ಸರಿಯೆನ್ನಿಸಿಕೊಂಡೇ ಬರಬೇಕು. ಇಲ್ಲವಾದರೆ ಅನರ್ಥ ಕಾದಿದೆ ಎಂದರ್ಥ. ಒಂದೊಮ್ಮೆ ತಾವು ಹೇಳಹೊರಟಿರುವುದು ಕಠೋರಸತ್ಯವಾಗಿದ್ದರೆ, ಸಾಕ್ರೆಟಿಸ್, ಟಾಲ್‌ಸ್ಟಾಯ್‌ರಂತೆ ಎದುರಿಸುವ ಎದೆಗಾರಿಕೆ ಅಂಥವರಿಗೆ ಇರಬೇಕು. ವ್ಯಕ್ತಿ ಮತ್ತು ಇತರ ಘಟಕಗಳಿಗೆ (ಕುಟುಂಬ, ಸಮಾಜ, ದೇಶ) ನೋವಾಗದಂತೆ ಸಂವಹಿಸಲು ಸಮಾಧಾನ ಬೇಕು. ಚಿಂತನಶಕ್ತಿ, ವಿಚಾರವನ್ನು ವಿವಿಧ ಕೋನಗಳಿಂದ ಅವಲೋಕಿಸುವ ಜಾಣ್ಮೆ ಬೇಕು. ಯಾವುದೇ ಧರ್ಮವನ್ನು ಹೀಯಾಳಿಸುವ ಕೆಲಸ ಸಲ್ಲ; ಏಕೆಂದರೆ ಅದು ನಂಬಿಕೆಯ ವಿಷಯ, ಭಾವನೆಯ ಬಾಬತ್ತು. ಗಣಪತಿ, ರಾಮ ಮತ್ತು ಕೃಷ್ಣರ ಬಗ್ಗೆ ನಮಗೆ ಗೌರವ-ವಿಶ್ವಾಸ ಇಲ್ಲದಿದ್ದರೆ ನಷ್ಟವೇನಿಲ್ಲ; ಆದರೆ ಅವರನ್ನು ದೇವರು/ಮಹಾತ್ಮರು ಎಂದು ನಂಬಿ ಆರಾಧಿಸುವ ಕೋಟ್ಯಂತರ ಜನ ಈ ಭೂಮಿಯಲ್ಲಿದ್ದಾರೆ ಎಂಬ ಸತ್ಯವನ್ನು ನಾವು ಮರೆಯಬಾರದು. ಅವರ ನಂಬಿಕೆಗಳನ್ನು ಘಾಸಿಗೊಳಿಸುವುದಕ್ಕೆ ಮುಂದಾಗಬಾರದು. ಅವರ ಭಾವನೆಗಳನ್ನು ಕೆರಳಿಸುವಂಥದ್ದನ್ನು ನಾವು ಬರೆಯಬಾರದು, ಆಡಬಾರದು, ಚಿತ್ರಿಸಬಾರದು. ಕಲೆ ಅಥವಾ ಸಾಹಿತ್ಯವು ಅಂಥ ಅಧಿಕಾರವನ್ನು ನಮಗೆ ಕೊಡುವುದಿಲ್ಲ ಎಂಬ ಪ್ರಜ್ಞೆ ನಮಗಿರಬೇಕು. ಇನ್ನೊಬ್ಬರ ಭಾವನೆಗಳನ್ನು ನೋಯಿಸದೆಯೇ ಮಠಾಧಿಪತಿ, 'ಮಹಾಗುರು', ಮಹಾನ್ ಸಾಹಿತಿ, ಚಿತ್ರಕಾರರಾಗುವ ಹೇರಳ ಅವಕಾಶಗಳು ನಮಗಿವೆ. ಹೀಗೆ ಬದುಕಬಾರದೇಕೆ? ಇತಿಹಾಸವನ್ನು ತಿರುಚಿ ತಮ್ಮ ಕಲ್ಪನೆಗೆ ಬಂದಂತೆ ಹೇಳಿಕೆ ಕೊಟ್ಟು, ಅದರಿಂದ ವ್ಯತಿರಿಕ್ತ ಪರಿಣಾಮಗಳಾದರೆ ಅಥವಾ ಟೀಕೆಗಳು ಹೊಮ್ಮಿದರೆ, 'ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಯಿತು' ಎನ್ನುವ ಬದಲು, ನೈಜ ಇತಿಹಾಸವನ್ನು ಓದಿಕೊಂಡು ಅದನ್ನೇ ನಮ್ಮ ಮುಂದಿನ ಪೀಳಿಗೆಗೂ ತಿಳಿಸುವ ಕೆಲಸ ಮಾಡಬೇಕು. ಜನನಾಯಕರೆನಿಸಿಕೊಂಡವರು ಈಗೀಗ ಕೊಡುತ್ತಿರುವ ಹೇಳಿಕೆಗಳು, ಎದುರಾಳಿಗೆ ಪ್ರಯೋಗಿಸುವ ಏಕವಚನ, ಪ್ರಜಾಪ್ರಭುತ್ವದ ದೇಗುಲದಲ್ಲಿ ವಿಷಯವನ್ನು ಮಂಡಿಸುವ-ಖಂಡಿಸುವ ಪರಿ ಇವುಗಳು ಮೌಲ್ಯಗಳನ್ನೂ ಪ್ರಶ್ನಾರ್ಹವಾಗಿಸುತ್ತಿವೆ. ಇದು ಸಾಲದೆಂಬಂತೆ, ದೃಶ್ಯಮಾಧ್ಯಮಗಳೂ ಈ ವಿಷಯಗಳನ್ನು ಇನ್ನಷ್ಟು 'ಹೈಪ್' ಮಾಡಿ ಕ್ಲೀಷೆಯುಂಟುಮಾಡುತ್ತಿವೆ. ಇವೆಲ್ಲವೂ ಸಾಮಾಜಿಕರಲ್ಲಿ ಪ್ರತಿಫಲನಗೊಂಡಾಗ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಳಿ ತಪ್ಪುತ್ತಿರುವಿಕೆ ಅನುಭವವಾಗದೇ ಇರದು.

ಯಾವುದೇ ಪ್ರಕಾರದಿಂದ ಯಾರಿಗಾದರೂ ಸರಿ ಸಂತೋಷವನ್ನುಂಟುಮಾಡುವುದು ಪ್ರಾಜ್ಞನ ಲಕ್ಷಣ. ಅದುವೇ ದೇವಪೂಜೆ. ರಕ್ಷಣೆಗಾಗಿ ಇರುವ ಬಂದೂಕು ದುಷ್ಟನ ಕೈಗೆ ಸಿಕ್ಕಿ ಅಮಾಯಕರ ಸಾವಿಗೆ ಕಾರಣವಾಗಬಾರದಲ್ಲವೇ? ಅದೇ ರೀತಿಯಲ್ಲಿ, ಅಭಿವ್ಯಕ್ತಿ ಸ್ವಾತಂತ್ರ್ಯವು ಮನುಷ್ಯನ ಸ್ವಾತಂತ್ರ್ಯದ, ನಾಗರಿಕತೆಯ ವಿಕಸನಕ್ಕೆ ಕಾರಣವಾಗಬೇಕೇ ಹೊರತು ಅವನ ವಿನಾಶಕ್ಕೆ ಆಯುಧವಾಗಬಾರದು.

(ಲೇಖಕರು ಸಿವಿಲ್ ಎಂಜಿನಿಯರ್)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೆಣ್ ಮಕ್ಳೇ ಸ್ಟ್ರಾಂಗು!

ರಂಗಸ್ವಾಮಿ ಮೂಕನಹಳ್ಳಿ ಅವರು ಬರೆದ 'ಮನಿ-ಮ್ಯಾಟರ್: ಹೆಣ್ಮಕ್ಳೇ ಸ್ಟ್ರಾಂಗು ಗುರು' ಅಂಕಣ ಬರಹ (ವಿಶ್ವವಾಣಿ ಸೆ.10) ಚೆನ್ನಾಗಿ ಮೂಡಿಬಂದಿದೆ. ಶೀರ್ಷಿಕೆಯಲ್ಲಿನ ಗ್ರಹಿಕೆಯನ್ನು ಯಥೋಚಿತ ಅಂಕಿ-ಅಂಶಗಳಿಂದ ಸಾಬೀತುಮಾಡಲು ಅವರು ಪ್ರಯತ್ನಿಸಿದ್ದಾರೆ. ಹಳ್ಳಿಗಳಲ್ಲಿ 10–20 ಮಹಿಳೆಯರು ಸೇರಿ ನಡೆಸುವ ಸ್ವಸಹಾಯ ಸಂಘಗಳು ಚೆನ್ನಾಗಿ ನಡೆಯುತ್ತವೆ. ಸಂಘದ ಹೆಸರಿನಲ್ಲಿ ಬ್ಯಾಂಕಿನಲ್ಲಿ ತೆಗೆದುಕೊಳ್ಳುವ ಸಾಲಗಳ ಮರುಪಾವತಿಯನ್ನು ಇಂಥ ಬಹುತೇಕ ಸಂಘಗಳು ಸಕಾಲಿಕವಾಗಿ ಮಾಡುತ್ತವೆ. ಸಂಘದಲ್ಲಿ ಕೆಲವೊಮ್ಮೆ ಅವಿದ್ಯಾವಂತರಿದ್ದರೂ, ಹಣಕಾಸಿನ ವಿಷಯದಲ್ಲಿ ಅವರು ಶಿಸ್ತನ್ನು ಪಾಲಿಸುತ್ತಾರೆ ಎಂಬುದು ಗಮನಿಸಬೇಕಾದ ಸಂಗತಿ. ಇದೇ ರೀತಿಯಲ್ಲಿ, ಸರಕಾರದಿಂದ ಸಿಗುವ ಅನೇಕ ಸಬ್ಸಿಡಿ ಸಾಲಗಳಲ್ಲೂ ಮಹಿಳೆಯರ ಮರುಪಾವತಿ ಪರಿಪಾಠ ಸರಿಯಾಗಿರುತ್ತದೆ. ಮನೆಯನ್ನು ಚೊಕ್ಕವಾಗಿ ಇಡುವುದ ರಲ್ಲೂ ಹೆಣ್ಣು ಮಕ್ಕಳೇ ಸ್ಟ್ರಾಂಗು. ಉದ್ಯೋಗ, ಉದ್ಯಮ, ಮನೆವಾರ್ತೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಹೆಣ್ಣು ಮಕ್ಕಳು ಮುಂಚೂಣಿಯಲ್ಲಿದ್ದು ಸಶಕ್ತರಾಗಿದ್ದರೂ, 'ಹೆಣ್ಣು ಮಕ್ಕಳಿಗೆ ಈ ದುಡ್ಡುಕಾಸಿನ ವ್ಯವಹಾರ, ಉದ್ಯೋಗ ಎಲ್ಲಾ ಏಕೆ ಬೇಕು? ಅಡುಗೆ ಮಾಡಿಕೊಂಡು, ಬಟ್ಟೆ ಒಗೆದುಕೊಂಡು ಮನೆಯಲ್ಲಿದ್ದರಾಯಿತು' ಎಂದು ಹಿಂಜರಿಯುತ್ತಾ ತಮ್ಮ ಸಾಮರ್ಥ್ಯವನ್ನು ತೋರಿಸದೇ ಉಳಿದುಬಿಡುವ ಹೆಣ್ಣು ಮಕ್ಕಳೂ ಗಣನೀಯ ಸಂಖ್ಯೆಯಲ್ಲಿದ್ದಾರೆ. ಇಂಥವರು ಸ್ವಲ್ಪ 'ಸ್ಟ್ರಾಂಗ್' ಆಗಬೇಕಿದೆ!

– ರಾಘವೇಂದ್ರ ಜೋಯಿಸ್, ಮೈಸೂರು

ಸಮರ್ಥ ನಿರೂಪಣೆ

ಬಸವಣ್ಣನವರ ಮೂಲದ ಕುರಿತಾಗಿ 'ಬಸವ ಮಂಟಪ' ಅಂಕಣದಲ್ಲಿ (ವಿಶ್ವವಾಣಿ ಸೆ.10) ಮೂಡಿಬಂದ ರವಿ ಹಂಜ್ ಅವರ ಬರಹ ಮಾಹಿತಿಪೂರ್ಣವಾಗಿತ್ತು ಮತ್ತು ವಿಷಯದ ಪ್ರಸ್ತುತಿ ಸೊಗಸಾಗಿತ್ತು. ಈ ಬರಹದ ಹಿಂದಿರುವ ಅಧ್ಯಯನ ಮತ್ತು ಸಂಶೋಧನೆಗೆ ಅವರಿಗೆ ಒಂದು ನಮಸ್ಕಾರ!

– ಉಮಾ ರಾಮರಾವ್, ಮುಂಬೈ

ದೇಶಾಭಿಮಾನ ಇಲ್ಲವೇ?

ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು' ಎಂದಿದ್ದಾನೆ ಮರ್ಯಾದಾ ಪುರುಷೋತ್ತಮ ಶ್ರೀರಾಮಚಂದ್ರ. ಆದರೆ ಕಾಂಗ್ರೆಸ್ಸಿಗ ರಾಹುಲ್ ಗಾಂಧಿಯವರು ವಿದೇಶ ಪ್ರಯಾಣ ಕೈಗೊಂಡಾಗ, ಅದರಲ್ಲೂ ವಿಶೇಷವಾಗಿ ಶತ್ರುರಾಷ್ಟ್ರಗಳಿಗೆ ಭೇಟಿಯಿತ್ತಾಗ, ಅಲ್ಲಿ ಭಾರತವನ್ನು ತೆಗಳುವುದು ಅವರಿಗೆ ರೂಢಿಯಾಗಿಬಿಟ್ಟಿದೆ. ನಮ್ಮ ದೇಶದಲ್ಲಿರುವಾಗ ಅವರು ಯಾವುದೇ ರಾಜಕಾರಣಿಗಳನ್ನಾಗಲೀ ರಾಜಕೀಯ ಪಕ್ಷಗಳನ್ನಾಗಲೀ ವಿಷಯಾಧಾರಿತವಾಗಿ ಮತ್ತು ಆರೋಗ್ಯಕರವಾಗಿ ಟೀಕಿಸಲಿ, ಅದಕ್ಕೆ ಯಾರೂ ಆಕ್ಷೇಪಿಸುವುದಿಲ್ಲ. ಅದನ್ನು ಬಿಟ್ಟು, ವಿದೇಶಗಳಲ್ಲಿ ಜನ್ಮಭೂಮಿ ಭಾರತವನ್ನು ತೆಗಳುವುದು ಎಷ್ಟು ಸರಿ? ನಮ್ಮ ದೇಶದ ಮರ್ಯಾದೆಯನ್ನು ನಾವೇ ಮಣ್ಣುಪಾಲು ಮಾಡಬಾರದು ಎಂಬ ಸರಳ-ಸಾಮಾನ್ಯ ಜ್ಞಾನವೂ ಅವರಲ್ಲಿ ಇಲ್ಲವಾಯಿತೇ? ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕನಂಥ ಜವಾಬ್ದಾರಿಯುತ ಕೆಲಸವನ್ನು ನಿರ್ವಹಿಸುತ್ತಿರುವ ರಾಹುಲ್ ಗಾಂಧಿಯವರ ಈ ನಡವಳಿಕೆಯನ್ನು ಒಪ್ಪಲು ಸಾಧ್ಯವಿಲ್ಲ.

– ಎಂ. ಪರಮೇಶ್ವರ, ಮದ್ದಿಹಳ್ಳಿ

ಭಟ್ಟರ್ ಸ್ಕಾಚ್

• **ಪ್ರದೀಪ ಸಾಲಕೇರಿ, ಕುಂದಾಪುರ**
ಭಟ್ರೇ, ಕೆಲವು ಸ್ನೇಹಿತರನ್ನಾದರೂ ಬೆನ್ನಿಗೆ ಇಟ್ಟುಕೊಳ್ಳಬೇಕು ಅಂತಾರಲ್ಲ?
- ಹೂಂ.. ಬೆನ್ನಿಗೆ ಇರಿಯಲು ಕೆಲವರಾದರೂ ಬೇಕಲ್ಲ?!

• **ಸುರೇಶ ಮಾಲ್ದಾಡಿ, ಬೆಂಗಳೂರು**
ಭಟ್ರೇ, ದರ್ಶನ್ ಮಾಡಿದ್ದು ಸರಿ ಅಂತ ಅವನ ಅಭಿಮಾನಿಗಳು ವಾದಿಸುತ್ತಾರಲ್ಲ?
- ಅವರು ಹಾಗೆ ವಾದಿಸದಿದ್ದರೆ ದರ್ಶನ್ ಅಭಿಮಾನಿ ಹೇಗೆ ಆಗ್ತಾ ಇದ್ರು!

• **ಭಾವನಾ ಹೆಗಡೆ, ಸಿದ್ದಾಪುರ**
ಭಟ್ರೇ, ನೀವು ನಿಮ್ಮ ಪತ್ನಿ ಜತೆ ಯಾವಾಗ ಸ್ಟೆಪ್ ಹಾಕ್ತೀರಾ?
- ಇಪ್ಪತ್ತು ವರ್ಷ ನಾನು ಮಾಡಿದ್ದು ಮತ್ತೇನು?

• **ರಾಗಿಣಿ, (ಇಮೇಲ್ ಮೂಲಕ)**
ಭಟ್ರೇ, ಹರಿದ ಜೀನ್ಸ್ ಹಳೆ ಫ್ಯಾಷನ್ ಆಯ್ತಾ?
- ಹರಿದ ಸೀರೆ ಯಾವಾಗ ಫ್ಯಾಷನ್ ಆಗುತ್ತೋ?!

• **ಶಂಕರ ಕಂಚಿ, ಬೆಂಗಳೂರು**
ಭಟ್ರೇ, ಸ್ವರ್ಗಕ್ಕೆ ಹೋಗುವ ದಾರಿ ಯಾವುದು?
- ರಸ್ತೆಗುಂಡಿಗಳು ತುಂಬಿರುವ ಬೆಂಗಳೂರಿನಲ್ಲಿ ಎಲ್ಲಿಂದ ಬೇಕಾದರೂ ಅಲ್ಲಿಗೆ ಹೋಗಬಹುದು!

• **ನೇತ್ರಾವತಿ ಸಿ.ಶರ್ಮ, ಮೈಸೂರು**
ಭಟ್ರೇ, ಯಾರಿಗೂ ಗೊತ್ತಾಗದಂತೆ ಫಾರಿನ್‌ಗೆ ಹೋಗೋದು ಹೇಗೆ?
- ಫೇಸ್‌ಬುಕ್ ಮತ್ತು ವಾಟ್ಸಾಪ್ ಸ್ಟೇಟಸ್‌ನಲ್ಲಿ ಫೋಟೋ ಹಾಕದಿದ್ದರೆ ಆಯ್ತಪ್ಪ!

• **ಬನ್ನೂರು ಸಂದೇಶ್, ಬನ್ನೂರು**
ಭಟ್ರೇ, ನಿಮ್ಮನ್ನು ಎಷ್ಟು ಪರ್ಸೆಂಟ್ ನಂಬಬಹುದು?
- ಹಂಡ್ರೆಡ್ ಪರ್ಸೆಂಟ್. ನಂಬಿಕೆ ಅಂದ್ರೆ, ಯಾವತ್ತೂ ಹಂಡ್ರೆಡ್ ಪರ್ಸೆಂಟೇ!

• **ಜಯಾ ಬಾಗಲವಾಡಿ, ತಲಘಟ್ಟಪುರ**
ಭಟ್ರೇ, ಬೆಂಗಳೂರಿನಲ್ಲಿ ಜೀವಿಸಲು ತಲೆ ಇರಲೇಬೇಕೇ?
- ಬೆಂಗಳೂರನ್ನು ಆಳುವವರಿಗೇ ಅದು ಬೇಕಿಲ್ಲದಿರುವಾಗ, ಜೀವಿಸುವವರಿಗೇಕೆ ಬೇಕು?!

• **ಕೆ.ಎಲ್.ಮೋಹನ, ಬಸವೇಶ್ವರನಗರ**
ಭಟ್ರೇ, ಮೊಯಿಲಿ ಅವರು ಸದ್ಯದಲ್ಲೇ ಹೊಸ ಬಾಂಬ್ ಹಾಕಲಿದ್ದಾರಂತೆ?
- ಅದು ಅವರ ಹೊಸ ಮಹಾಕಾವ್ಯ ಆಗದಿರಲಿ ಎಂಬುದಷ್ಟೇ ಪ್ರಾರ್ಥನೆ!

• **ಪಿ.ಕುಮಾರ, ಅವಲಹಳ್ಳಿ**
ಭಟ್ರೇ, ಐಫೋನ್ 16 ಕೊಡಿಸದಿದ್ದರೆ ಮದುವೆ ಆಗಲ್ವಂತೆ ಅಂತಾಳಲ್ಲ?
- ಐಫೋನ್ 16ಗೆ ಮೊದಲ ಬಲಿ ಅಂತ ಹೆಡ್‌ಲೈನ್ ಹಾಕಿದರಾಯಿತು ಬಿಡು!

ಯಾವ ದೇಶದಲ್ಲೂ ನಮ್ಮಲ್ಲಿರುವಷ್ಟು ಹಬ್ಬಗಳಿಲ್ಲ!

ಹಬ್ಬಗಳು ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳೇ ಇರಬಹುದು. ಆದರೆ ಭಾರತದಲ್ಲಿ ಆಚರಿಸಲ್ಪಡುವ ಪ್ರತಿಯೊಂದು ಹಬ್ಬದ ಹಿನ್ನೆಲೆಯಲ್ಲೂ ವೈಜ್ಞಾನಿಕ ಕಾರಣಗಳಿವೆ ಮತ್ತು ಅವೆಲ್ಲವೂ ಅತ್ಯಂತ ಪ್ರಸ್ತುತವಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಅವು ಭಾರತೀಯರನ್ನು ಇನ್ನಷ್ಟು ಹತ್ತಿರಕ್ಕೆ ತರುತ್ತವೆ.

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಇತ್ತೀಚೆಗಷ್ಟೇ ನಾನು ಪರ್ಯೂಷಣ ಪರ್ವ ಆಚರಿಸಿದೆ. ಈಗ ಗಣೇಶೋತ್ಸವ ಆಚರಿಸಿದ್ದೇನೆ. ಹಬ್ಬಗಳನ್ನು ಆಚರಿಸುವುದು ನನಗೆ ಬಹಳ ಖುಷಿ. ಬೇರೆ ಯಾವುದಾದರೂ ದೇಶದಲ್ಲಿ ಜನಿಸಿದ್ದರೆ ಈ ಖುಷಿ ನನಗೆ ಸಿಗುತ್ತಿತ್ತೇ? ಯಾವಾಗಲೂ ಇದೊಂದು ಪ್ರಶ್ನೆ ನನ್ನ ಮನಸ್ಸಿನಲ್ಲಿ ಏಳುತ್ತಿರುತ್ತದೆ. ಇದಕ್ಕೆ ನನಗೆ ನಾನೇ ಉತ್ತರ ಕೊಟ್ಟುಕೊಂಡಾಗ ಮನಸ್ಸು ಹೆಮ್ಮೆಯಿಂದ ಬೀಗುತ್ತದೆ. ಭಾರತದಲ್ಲಿ ಹುಟ್ಟಿರುವುದಕ್ಕೆ ನಾನೆಷ್ಟು ಪುಣ್ಯ ಮಾಡಿದ್ದೇನೆ, ನಾವೆಲ್ಲಾ ಎಷ್ಟು ಅದೃಷ್ಟವಂತರು ಎಂದು ಯೋಚಿಸುತ್ತೇನೆ. ಭಾರತೀಯ ಸಂಸ್ಕೃತಿ ಯಾವಾಗಲೂ ನನ್ನಲ್ಲಿ ಹೆಮ್ಮೆಯನ್ನು ಮೂಡಿಸುತ್ತದೆ.

ನನಗೆ ಜಗತ್ತಿನ ಸಾಕಷ್ಟು ದೇಶಗಳಿಗೆ ಭೇಟಿ ನೀಡುವ ಅವಕಾಶ ಲಭಿಸಿದೆ. ಬಹಳಷ್ಟು ದೇಶಗಳಲ್ಲಿ ನನಗೆ ಸ್ನೇಹಿತರಿದ್ದಾರೆ. ಅವರೆಲ್ಲರೂ ನಾನಾ ಸಂಸ್ಕೃತಿ, ವಿಭಿನ್ನ ಧರ್ಮ ಹಾಗೂ ಬೇರೆ ಬೇರೆ ನಂಬಿಕೆಗಳಿಗೆ ಸೇರಿದವರು. ಅವರಲ್ಲಿ ಅನೇಕರು ನನ್ನಲ್ಲೊಂದು ಪ್ರಶ್ನೆ ಕೇಳುವುದುಂಟು: 'ಭಾರತದಲ್ಲಿ ಎಷ್ಟು ಹಬ್ಬಗಳಿವೆ? ಯಾಕೆ ಭಾರತೀಯರು ಅಷ್ಟೊಂದು ಹಬ್ಬಗಳನ್ನು ಆ ಪರಿ ಪ್ರೀತಿಯಿಂದ, ಅಷ್ಟೇ ಉತ್ಸಾಹದಿಂದ ಆಚರಿಸುತ್ತಾರೆ?' ಈ ಪ್ರಶ್ನೆಗೆ ನಾನು ನೀಡುವ ಉತ್ತರ ಸಾಮಾನ್ಯವಾಗಿ ಯಾವಾಗಲೂ ಒಂದೇ ಆಗಿರುತ್ತದೆ. 'ನೋಡಿ, ನಮ್ಮ ದೇಶದಲ್ಲಿರುವ ಹಬ್ಬಗಳನ್ನು ಲೆಕ್ಕ ಹಾಕುವುದು ಬಹಳ ಕಷ್ಟ. ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳನ್ನೆಲ್ಲ ಎಣಿಸುವುದು ಅಸಾಧ್ಯವೇ ಸರಿ. ಹೀಗಾಗಿ ನಾವು ಇಲ್ಲಿಯವರೆಗೂ ಭಾರತದಲ್ಲಿ ಆಚರಿಸುವ ಹಬ್ಬಗಳನ್ನು ಲೆಕ್ಕಹಾಕಲು ಹೋಗಿಲ್ಲ. ಕೆಲ ಹಬ್ಬಗಳನ್ನು ರಾಷ್ಟ್ರ ಮಟ್ಟದಲ್ಲಿ, ಎಲ್ಲಾ ರಾಜ್ಯಗಳಲ್ಲೂ ಆಚರಿಸುತ್ತಾರೆ. ಇನ್ನು ಕೆಲ ಹಬ್ಬಗಳು ಪಕ್ಕಾ ಲೋಕಲ್. ಅವುಗಳನ್ನು ಆಯಾ ರಾಜ್ಯಗಳಲ್ಲಿ, ಕೆಲವೊಮ್ಮೆ ರಾಜ್ಯದೊಳಗೂ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿ ಆಚರಿಸುತ್ತಾರೆ' ಎಂದು ಅವರಿಗೆ ಹೇಳುತ್ತೇನೆ.

ಹಬ್ಬಗಳು ಎಲ್ಲಿಯೇ ಆಚರಿಸಲ್ಪಡಲಿ ಅಥವಾ ಯಾವ ಮಟ್ಟದಲ್ಲೇ ಆಚರಣೆಯಾಗಲಿ, ನಮ್ಮ ದೇಶದ ಪ್ರತಿಯೊಂದು ಹಬ್ಬವೂ ಪ್ರಕೃತಿಯೊಂದಿಗೆ ಬೆರೆತುಕೊಂಡಿದೆ ಎಂಬುದು ಮಾತ್ರ ಸತ್ಯ. ಪರಿಸರಕ್ಕೆ ಪೂರಕವಾಗಿ ಹಬ್ಬಗಳು ಆಚರಿಸಲ್ಪಡುವುದು ಒಂದೆಡೆಯಾದರೆ, ಇನ್ನೊಂದೆಡೆ ನಮ್ಮ ಹಬ್ಬಗಳೆಲ್ಲವೂ ವೈಜ್ಞಾನಿಕ ಹಿನ್ನೆಲೆ ಕೂಡ ಹೊಂದಿವೆ. ಉತ್ತರ ಭಾರತದಲ್ಲಿ ಪರ್ಯೂಷಣ ಪರ್ವ ಆಚರಿಸುತ್ತಾರಲ್ಲವೇ? ಅದರ ಕೊನೆಯ ದಿನ ಸಂವತ್ಸರಿ ಎಂಬ ಆಚರಣೆಯಿರುತ್ತದೆ. ಆ ದಿನ ನಾನು 'ಪ್ರತಿಕ್ರಮಣ್' ಎಂಬ ಬಹಳ ಅರ್ಥಪೂರ್ಣವಾದ ವಿಧಿಯೊಂದನ್ನು ಆಚರಿಸುತ್ತೇನೆ. ಆ ವಿಧಿ ಆಚರಿಸುವಾಗ ನಾವು 84 ಲಕ್ಷ ಜೀವಕೋಟಿಗಳ ಕ್ಷಮೆ ಕೇಳಬೇಕು. ಏಕೆ ಕ್ಷಮೆ ಕೇಳಬೇಕು ಅಂದರೆ, ನಾವು ಗೊತ್ತಿದ್ದೋ ಗೊತ್ತಿಲ್ಲದೆಯೋ ಅವುಗಳಿಗೆ ಯಾವತ್ತಾದರೂ ಹಾನಿ ಉಂಟುಮಾಡಿರಬಹುದು. ಅವುಗಳಿಗೆ ನೋವು ನೀಡಿರಬಹುದು. ಅವುಗಳಿಗೆ ಬೇಸರವಾಗುವಂತೆ ಕಠೋರವಾಗಿ ಮಾತನಾಡಿರಬಹುದು ಅಥವಾ ಅವುಗಳಿಗೆ ನಮ್ಮ ಸ್ವಾರ್ಥಕ್ಕಾಗಿ ಶಿಕ್ಷೆ ನೀಡಿರಬಹುದು. ಈ ಎಲ್ಲ ತಪ್ಪುಗಳಿಗೆ ನಾನು ಅವುಗಳನ್ನು ಮನಸಾರೆ ಸ್ಮರಿಸಿಕೊಂಡು, ಕೈಮುಗಿದು, ಕ್ಷಮಾಪಣೆ ಕೇಳುತ್ತೇನೆ. ಹೀಗೆ ಕ್ಷಮೆ ಕೇಳುವುದು ಕೇವಲ ಪ್ರಾಣಿ, ಪಕ್ಷಿಗಳು ಹಾಗೂ ಜೀವಜಂತುಗಳ ಬಳಿ ಮಾತ್ರವಲ್ಲ, ಮನುಷ್ಯರ ಬಳಿ ಕೂಡ. ಅದರಲ್ಲೂ ಕೇವಲ ಹಿರಿಯರ ಬಳಿ ಮಾತ್ರ ಕ್ಷಮೆ ಕೇಳುವುದಲ್ಲ, ಕಿರಿಯರಲ್ಲೂ ಕೇಳುತ್ತೇವೆ. ಹೀಗೆ ಕ್ಷಮೆ ಯಾಚಿಸುವ ನಮ್ಮ ಪಟ್ಟಿಯಲ್ಲಿ ನಮ್ಮ ಮನೆಮಂದಿ, ಮಕ್ಕಳು, ಹಿರಿಯರು, ಸಹೋದ್ಯೋಗಿಗಳು, ನಮ್ಮ ಮನೆಯ ಕೆಲಸಗಾರರು, ಮನೆಯ ಮುಂದಿನ ರಸ್ತೆ ಗುಡಿಸುವವರು, ನಮ್ಮ ಕಾರು ಓಡಿಸುವವರು, ಕಾರು ಒರೆಸುವವರು ಹೀಗೆ ಎಲ್ಲರೂ ಸೇರಿರುತ್ತಾರೆ! ಆಹಾ, ಎಷ್ಟೊಂದು ಉದಾತ್ತ ಆಚರಣೆಯಿದು. ಜಗತ್ತಿನಲ್ಲಿ ಕ್ಷಮೆಗಿಂತ ದೊಡ್ಡ ಮೌಲ್ಯಯುತ ವಸ್ತು ಯಾವುದೂ ಇಲ್ಲ. ಕ್ಷಮೆಗಿರುವಷ್ಟು ಶಕ್ತಿ ಬೇರಾವುದಕ್ಕೂ ಇಲ್ಲ. ಕ್ಷಮೆ ಕೇಳುವುದಕ್ಕೂ ಶಕ್ತಿ ಬೇಕು, ಕ್ಷಮಿಸುವುದಕ್ಕೂ ಶಕ್ತಿ ಬೇಕು. ಭಗವಾನ್ ಮಹಾವೀರರು ನಮಗೆ ಕ್ಷಮೆ, ಅಹಿಂಸೆ, ಅಪರಿಗ್ರಹ ಹಾಗೂ ಸತ್ಯದ ಮಂತ್ರವನ್ನು ನೀಡಿದರು. ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಈ ತತ್ವಗಳನ್ನು ಆಚರಿಸಿದರೆ ಎಲ್ಲೆಡೆ ಸುಖ ಸಂತೋಷಗಳು ತುಂಬಿರುತ್ತವೆ ಎಂದು ಅವರು ಹೇಳಿದರು. ಆದ್ದರಿಂದಲೇ ಅವರು

'ಅನೇಕಾಂತವಾದ' ಎಂಬ ಸಿದ್ಧಾಂತವನ್ನು ಹುಟ್ಟುಹಾಕಿದರು. ಸ್ಥೂಲವಾಗಿ ಹೇಳುವುದಾದರೆ, ಜಗತ್ತಿನಲ್ಲಿರುವ ಪ್ರತಿಯೊಂದು ಸಂಗತಿಗೂ ಬೇರೆ ಬೇರೆ ಆಯಾಮಗಳಿರುತ್ತವೆ ಎಂಬುದು ಇದರ ಅರ್ಥ. ನಿಮ್ಮ ದೃಷ್ಟಿಯಲ್ಲಿ ನೀವು ಮಾಡಿರುವುದು ಸರಿಯಿರಬಹುದು, ಆದರೆ ನನ್ನ ದೃಷ್ಟಿಯಲ್ಲಿ ನಾನು ಮಾಡಿರುವುದೇ ಸರಿ ಮತ್ತು ನೀವು ಮಾಡಿದ್ದು ತಪ್ಪಿರಬಹುದು. ಸರಿ-ತಪ್ಪುಗಳು ಸಾಪೇಕ್ಷ. ಯಾರು, ಯಾವ ದೃಷ್ಟಿಯಿಂದ ನೋಡುತ್ತಾರೋ ಅದಕ್ಕೆ ಅನುಗುಣವಾಗಿ ಸರಿ-ತಪ್ಪುಗಳು ನಿರ್ಧಾರವಾಗುತ್ತವೆ ಎಂಬುದು ಅನೇಕಾಂತವಾದದ ಸಾರ. ವೈಜ್ಞಾನಿಕವಾಗಿ ನೋಡಿದರೆ ಇದೇ '3ಡಿ' ಪರಿಕಲ್ಪನೆ. ಅಂದರೆ ಒಂದೇ ವಿಷಯವನ್ನು ನಾನಾ ದೃಷ್ಟಿಕೋನದಿಂದ ನೋಡಿ ಸಮಗ್ರವಾಗಿ ಅರಿತುಕೊಳ್ಳುವುದು. ಎಲ್ಲರೂ ಈ ರೀತಿಯ ಚಿಂತನೆಯನ್ನು ಮೈಗೂಡಿಸಿಕೊಂಡರೆ ಜಗತ್ತಿನಲ್ಲಿರುವ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ. ಏಕೆಂದರೆ ಅನೇಕಾಂತವಾದವನ್ನು ಪಾಲಿಸುವವರು ಯಾವತ್ತೂ ನಾನೇ ಸರಿ ಎಂದು ಹೇಳುವುದಿಲ್ಲ. ನಾನೂ ಸರಿ, ನೀನೂ ಸರಿ ಎಂದೇ ಅವರು ನಂಬುತ್ತಾರೆ. ಹೀಗಾಗಿ ಬೇರೆಯವರು ಏನು ಮಾಡುತ್ತಾರೋ ಅದನ್ನು ಗೌರವಿಸುತ್ತಾರೆ. ಹೀಗೆ ಬದುಕಿದರೆ ಸಂಘರ್ಷಕ್ಕೆ ಜಾಗವೆಲ್ಲಿ? ಭಗವಾನ್ ಬುದ್ಧ ನಮ್ಮ ಪ್ರಜ್ಞೆಯನ್ನು ಜಾಗೃತಗೊಳಿಸಿಕೊಳ್ಳುವ ಬಗ್ಗೆ ಹಾಗೂ ಜ್ಞಾನೋದಯದ ಬಗ್ಗೆ ಹೇಳಿದರು. ನಾವೆಲ್ಲರೂ ಹೆಚ್ಚೆಚ್ಚು ಪ್ರಜ್ಞಾವಂತರಾದೆವು ಎಂದಿಟ್ಟುಕೊಳ್ಳೋಣ, ಆಗ ನಮ್ಮ ಸಮಾಜ ಎಷ್ಟು ಪ್ರೌಢವಾಗಿ ಹಾಗೂ ತರ್ಕಬದ್ಧವಾಗಿ ವರ್ತಿಸುತ್ತದೆಯಲ್ಲವೇ? ಆಗ ಯಾರೂ ಇನ್ನೊಬ್ಬರ ಮೇಲೆ ಜಿದ್ದು ಸಾಧಿಸುವುದಿಲ್ಲ. ಅಂಥ ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಅಥವಾ ಅಪರಾಧಗಳನ್ನು ನಿಯಂತ್ರಿಸುವ ಪ್ರಶ್ನೆಯೇ ಬರುವುದಿಲ್ಲ.

ಈಗಷ್ಟೇ ನಾವು ಗಣೇಶೋತ್ಸವವನ್ನು ಆಚರಿಸಿದ್ದೇವೆ. ಈ ಹಬ್ಬದಲ್ಲಿ ಒಂದು ಪ್ರಾರ್ಥನೆ ನನ್ನ ಗಮನ ಸೆಳೆಯಿತು: 'ಹೇ ಸಿದ್ಧಿಬುದ್ಧಿ ಪ್ರದಾಯಕನೇ, ನನಗೆ ಪ್ರೀತಿಯಿಂದ ತುಂಬಿದ ಕಣ್ಣುಗಳನ್ನು ನೀಡು, ಶ್ರದ್ಧೆಯಿಂದ ತುಂಬಿದ ಮನಸ್ಸನ್ನು ನೀಡು, ಸಹಯೋಗದ ಹಸ್ತಗಳನ್ನು ನೀಡು, ಸನ್ಮಾರ್ಗದಲ್ಲಿ ನಡೆಯುವ ಪಾದಗಳನ್ನು ನೀಡು, ಧ್ಯಾನದಲ್ಲಿ ಮುಳುಗಿರುವ ಮನಸ್ಸು ನೀಡು, ಸತ್ಯವನ್ನೇ ಆಡುವ ನಾಲಗೆಯನ್ನು ನೀಡು, ಹೇ ಪರಮೇಶ್ವರ, ನಿನ್ನೆಲ್ಲಾ ಭಕ್ತರನ್ನೂ ಕೃಪಾದೃಷ್ಟಿಯಿಂದ ನೋಡು'. ಎಷ್ಟೊಂದು ಸುಂದರ ಪ್ರಾರ್ಥನೆಯಿದು. ಇಲ್ಲಿ ಯಾರೂ ಕೇವಲ ತಮಗಾಗಿ ಪ್ರಾರ್ಥಿಸುತ್ತಿಲ್ಲ, ಬದಲಿಗೆ ಜಗತ್ತಿನ ಸಮಸ್ತ ಜನರ ಒಳಿತಿಗಾಗಿ ಪ್ರಾರ್ಥಿಸುತ್ತಿದ್ದಾರೆ. ಮೇಲ್ನೋಟಕ್ಕೆ 'ನನಗೆ ನೀಡು' ಎಂದು ಕೇಳುತ್ತಿದ್ದರೂ, ದೇವರು 'ನನಗೆ' ಈ ಒಳ್ಳೆಯ ಸಂಗತಿಗಳನ್ನೆಲ್ಲಾ ನೀಡಿದರೆ ಅದರಿಂದ ಒಳಿತಾಗುವುದು 'ನನಗೆ' ಮಾತ್ರವಲ್ಲ, ಜಗತ್ತಿನ 'ಎಲ್ಲರಿಗೂ'. ಇಂಥ ಉದಾರ ಚಿಂತನೆಯೇ ನಮ್ಮ ಸಂಸ್ಕೃತಿಯು ನಮಗೆ ನೀಡಿರುವ ವರ. ಈ ಪರಂಪರೆಯು ನಮಗೆ ಎಲ್ಲಾ ಚರಾಚರ ಸಂಗತಿಗಳನ್ನೂ ಗೌರವಿಸಲು ಹೇಳಿಕೊಡುತ್ತದೆ. ಹಬ್ಬಗಳಲ್ಲಿ ನಾವು ಕೇವಲ ಪ್ರಾಣಿ, ಪಕ್ಷಿಗಳನ್ನು ಮಾತ್ರ ಪೂಜಿಸುವುದಿಲ್ಲ, ಅವುಗಳ ಜತೆಗೆ ಕಲ್ಲು, ಬಂಡೆಗಳನ್ನೂ ಪೂಜಿಸುತ್ತೇವೆ. ಏಕೆಂದರೆ ಈ ವಿಶ್ವದಲ್ಲಿರುವ ಪ್ರತಿಯೊಂದು ವಸ್ತುವೂ ಗೌರವಕ್ಕೆ ಯೋಗ್ಯವಾಗಿದೆ ಎಂದು ನಾವು ನಂಬುತ್ತೇವೆ. ಈ ಭೂಮಂಡಲದಲ್ಲಿರುವ ಪಂಚಭೂತಗಳು ನಮಗೆ ಪೂಜ್ಯ. ಭೂಮಿ, ಆಕಾಶ, ಗಾಳಿ, ನೀರು ಮತ್ತು ಅಗ್ನಿ ಇವುಗಳನ್ನು ನಾವು ಪೂಜ್ಯ ಭಾವನೆಯಿಂದ ನೋಡುತ್ತೇವೆ. ಏಕೆಂದರೆ ಎಲ್ಲಾ ವಸ್ತುಗಳೂ ಇವುಗಳಿಂದಲೇ ಆಗಿವೆ ಮತ್ತು ಇವುಗಳಲ್ಲೇ ಲೀನವಾಗುತ್ತವೆ.

ಇಲ್ಲಿ ನನಗೊಂದು ಸಂಗತಿ ನೆನಪಾಗುತ್ತಿದೆ. ನನ್ನ ವಿದೇಶಿ ಸ್ನೇಹಿತನೊಬ್ಬ ಒಮ್ಮೆ ಗಣೇಶ ಚತುರ್ಥಿ ವೇಳೆ ಮುಂಬೈಗೆ ಬಂದಿದ್ದ. ಇಲ್ಲಿ ಈ ಹಬ್ಬವನ್ನು ಆಚರಿಸುವ ಅದ್ಭುತ ರೀತಿ ಹಾಗೂ ಉತ್ಸಾಹವನ್ನು ನೋಡಿ ಅವನು ಬೆರಗಾಗಿದ್ದ. ನಂತರ ಗಣೇಶನ ಮೂರ್ತಿಯನ್ನು ನೋಡಿ, ಅದಕ್ಕೆ ಆನೆಯ ಮುಖ ಮತ್ತು ಮನುಷ್ಯನ ದೇಹ ಏಕಿದೆ ಎಂದು ಚಕಿತಗೊಂಡ. ಯಾರಾದರೂ ಆನೆಯ ಮುಖ ಮತ್ತು ಮನುಷ್ಯನ ದೇಹವಿರುವುದು ಸಾಧ್ಯವೇ ಎಂದು ಕೇಳಿದ. ಆಗ ನಾನು ಇದರ ಹಿಂದಿನ ಪೌರಾಣಿಕ ಕಥೆಯನ್ನು ಹೇಳಿ, ನಮ್ಮ ಸಂಸ್ಕೃತಿಯಲ್ಲಿ ಅದಕ್ಕಿರುವ ಮಹತ್ವವನ್ನು ವಿವರಿಸಿದೆ. ಹೇಗೆ ನಾವು ಎಲ್ಲಾ ಚರಾಚರ ವಸ್ತುಗಳಿಗೂ ಸಮಾನ ಗೌರವ ನೀಡುತ್ತೇವೆ ಎಂಬುದನ್ನು ತಿಳಿಸಿದೆ. ಆದ್ದರಿಂದಲೇ ಗಣೇಶನ ವಾಹನವಾದ ಇಲಿಯನ್ನೂ ಕೂಡ ನಾವು ಪೂಜಿಸುತ್ತೇವೆ ಎಂದು ಹೇಳಿದೆ! ನಂತರ ಹೋಳಿಹಬ್ಬದ ಹಿಂದಿನ ಕತೆ, ದಸರಾ ಕತೆ, ದೀಪಾವಳಿಯ ಕತೆ ಹೀಗೆ ಬೇರೆ ಬೇರೆ ಹಬ್ಬಗಳ ಹಿನ್ನೆಲೆಯನ್ನು ವರ್ಣಿಸಿದೆ. ರಾವಣ ಎಷ್ಟೊಂದು ಶಕ್ತಿಶಾಲಿಯೂ, ಜ್ಞಾನವಂತನೂ ಆಗಿದ್ದ. ಅವನನ್ನು ಕಂಡರೆ ದೇವತೆಗಳೂ ಹೆದರುತ್ತಿದ್ದರು. ಆದರೂ ತನ್ನದೇ ದುರಹಂಕಾರದಿಂದಾಗಿ ಅವನು ದುಷ್ಟಶಕ್ತಿಯಾಗಿ ರೂಪಾಂತರಗೊಂಡ. ಭಾರತೀಯ ಸಂಸ್ಕೃತಿಯಲ್ಲಿ, ರಾವಣ ದಹನವು ನಮ್ಮೊಳಗಿರುವ ದುಷ್ಟ ಯೋಚನೆಗಳನ್ನು ಸುಟ್ಟುಹಾಕುವುದರ ಪ್ರತೀಕ ಎಂದು ವಿವರಿಸಿದೆ. ಅದೇ ರೀತಿ, ಪೋಲಾ, ಲೋರಿ, ಬಿಹು ಮುಂತಾದ ಹಬ್ಬಗಳ ಬಗ್ಗೆ ಹೇಳಿದೆ. ಇದನ್ನೆಲ್ಲ ಕೇಳಿ ನನ್ನ ವಿದೇಶಿ ಗೆಳೆಯ ಎಷ್ಟು ಪ್ರಭಾವಿತನಾಗಿದ್ದ ಅಂದರೆ, ಭಕ್ತಿಯಿಂದ ನನ್ನ ಮುಂದೆಯೇ ಕೈಮುಗಿದುಕೊಂಡು ನಿಂತುಬಿಟ್ಟಿದ್ದ! ಭಾರತೀಯ ಹಬ್ಬಗಳು ಪ್ರಕೃತಿಯನ್ನು, ಮಾನವತೆಯನ್ನು ಹಾಗೂ ಸಮಸ್ತ ವಿಶ್ವವನ್ನು ಗೌರವಿಸುವ ಸಂದೇಶ ಹೊಂದಿವೆ ಎಂದು ಅವನು ಹೇಳಿದ.

ಭಾರತೀಯ ಸಮಾಜದಲ್ಲಿ ಮಾನವೀಯತೆ ಹಾಗೂ ಸಹಬಾಳ್ವೆಯ ಪ್ರವಾಹವೊಂದು ಸದಾ ಮುಕ್ತವಾಗಿ ಹರಿಯುತ್ತಿರುತ್ತದೆ. ಚಿಕ್ಕವನಿದ್ದಾಗ ನಾನು ಮೊಹರಂ ಹಬ್ಬದಲ್ಲಿ ಸಿಂಹದ ವೇಷ ಹಾಕಿಕೊಂಡು ತಾಜಿಯಾ ಎದುರು ಕುಣಿಯುತ್ತಿದ್ದೆ. ಅದೇ ರೀತಿ, ಕ್ರಿಸ್‌ಮಸ್ ಹಬ್ಬ ಬಂದಾಗ ನಮ್ಮ ಮನೆಯಲ್ಲಿ ಸಂಭ್ರಮಾಚರಣೆ ನಡೆಯುತ್ತಿತ್ತು. ಇವತ್ತಿಗೂ ನಮ್ಮ ಮನೆಯಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಹಿಂದೂ ಹಬ್ಬಗಳನ್ನು ಆಚರಿಸಿದಷ್ಟೇ ಭಕ್ತಿಯಿಂದ ಆಚರಿಸುತ್ತೇವೆ. ಇದು ನಮ್ಮ ಸಂಸ್ಕೃತಿ ಕಲಿಸಿಕೊಟ್ಟ ಪಾಠ.

ನಮ್ಮ ಸಂಸ್ಕೃತಿಯ ಹಿರಿಮೆಯನ್ನು ವಿದೇಶಿಗರು ಗುರುತಿಸಿ ಗೌರವಿಸಿದಾಗ ನನಗೆ ಬಹಳ ಹೆಮ್ಮೆಯೆನಿಸುತ್ತದೆ. ಆದರೆ, ಭಾರತೀಯರೇ ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗಿ ನಮ್ಮ ಸಂಸ್ಕೃತಿಯನ್ನು ಮರೆಯುವುದನ್ನು ನೋಡಿ ಬೇಸರವಾಗುತ್ತದೆ. ನಮ್ಮದು ಹಿಂದುಳಿದ ಸಂಸ್ಕೃತಿ ಎಂದು ಇವರೆಲ್ಲ ಯಾಕಾಗಿ ಭಾವಿಸುತ್ತಾರೆ? ಇವರು ತಮ್ಮ ಮಕ್ಕಳಿಗೆ ಭಾರತೀಯ ಸಂಸ್ಕೃತಿಯನ್ನು ಸರಿಯಾಗಿ ಕಲಿಸಿಕೊಡುತ್ತಿಲ್ಲ. ಯಾವುದೇ ಸಮಾಜ ತನ್ನ ಸಂಸ್ಕೃತಿಯನ್ನು ಮರೆತರೆ ಆ ಸಮಾಜದ ತಳಪಾಯವೇ ದುರ್ಬಲವಾಗುತ್ತದೆ ಎಂಬುದನ್ನು ಇವರೆಲ್ಲ ಅರಿಯಬೇಕು. ಈಗ ಹಬ್ಬದ ಋತು ಶುರುವಾಗಿದೆ. ಭಾರತೀಯರೆಲ್ಲರೂ ನಮ್ಮ ಸಂಸ್ಕೃತಿಯಲ್ಲಿ ಪರಂಪರಾಗತವಾಗಿ ಬೆಳೆದುಬಂದ ಹಬ್ಬಗಳನ್ನು ಸಂಭ್ರಮದಿಂದ ಆಚರಿಸೋಣ. ಈ ಸಂಭ್ರಮದಲ್ಲಿ ನಮ್ಮ ಮಕ್ಕಳನ್ನೂ ಸೇರಿಸಿಕೊಳ್ಳೋಣ. ಅವರಿಗೆ ನಮ್ಮ ಹಬ್ಬಗಳ ಮಹತ್ವದ ಬಗ್ಗೆ ತಿಳಿಸೋಣ. ನಮ್ಮ ಧಾರ್ಮಿಕ ನಂಬಿಕೆಗಳಲ್ಲಿ ಹಾಸುಹೊಕ್ಕಾಗಿರುವ ಹಬ್ಬಗಳಿಗೆ ಸಂಬಂಧಿಸಿದ ಕತೆಗಳನ್ನು ಮಕ್ಕಳಿಗೆ ಹೇಳೋಣ. ಏಕೆಂದರೆ ಹಬ್ಬಗಳು ನಮ್ಮಲ್ಲಿ ಸಾಮರಸ್ಯವನ್ನು ಮೂಡಿಸುತ್ತವೆ. ಹಬ್ಬಗಳು ನಮ್ಮನ್ನು ಹತ್ತಿರ ತರುತ್ತವೆ. ಹಬ್ಬಗಳಲ್ಲಿ ಆರ್ಥಿಕ ಪ್ರಗತಿಯ ಅವಕಾಶಗಳೂ ಇವೆ. ಹಬ್ಬಗಳ ಆಚರಣೆಯನ್ನು ಜೀವನದ ಸಂಭ್ರಮಾಚರಣೆಯನ್ನಾಗಿ ನೋಡೋಣ. ಆಗ ಹಬ್ಬಗಳು ನಮ್ಮಲ್ಲಿ ಹೊಸ ಚೈತನ್ಯವನ್ನು ಮೂಡಿಸುತ್ತವೆ! ಇಷ್ಟಕ್ಕೂ ಹಬ್ಬಗಳ ಆಚರಣೆಯ ಉದ್ದೇಶವೇ ಇದಾಗಿದೆ.

ನಾರದ ಸಂಚಾರ
ಕಲಹಪ್ರಿಯ
naadigru@gmail.com

ಟವೆಲ್ ಮಾರಾಟ ಸೂಪರ್!

ಕರ್ನಾಟಕದಲ್ಲಿ ಮುಖ್ಯಮಂತ್ರಿಗಳ ಬದಲಾವಣೆ ಆಗಲಿದೆ ಎಂಬ ಗ್ರಹಿಕೆಗೆ ಅಥವಾ ನಿರೀಕ್ಷೆಗೆ ಅದು ಹೇಗೆ ರೆಕ್ಕೆ-ಪುಕ್ಕಗಳು ಸೇರಿಕೊಂಡವೋ ಗೊತ್ತಿಲ್ಲ; ಹೀಗಾಗಿ ಆ 'ಸ್ಥಾನಕ್ಕೆ' ಹಕ್ಕು ಸಾಧಿಸುವವರ, ತನ್ಮೂಲಕ 'ಆಸ್ಥಾನಕ್ಕೆ' ತೂರಿಕೊಳ್ಳಲು ಹವಣಿಸುತ್ತಿರುವವರ ಸಂಖ್ಯೆಗೆ ದಿನಗಳೆದಂತೆ ಸೇರ್ಪಡೆಯಾಗುತ್ತಲೇ ಇದೆ. ಸಿದ್ದರಾಮಯ್ಯನವರ ನಂತರ ಸಿಎಂ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ಅವರೇ ಹಕ್ಕುದಾರರು ಎಂಬ ಮಾತುಗಳು ಕಳೆದ ಕೆಲ ತಿಂಗಳಿಂದ ಕೇಳಿಬರುತ್ತಿದ್ದವಾದರೂ, ರಾಜ್ಯ ರಾಜಕಾರಣದಲ್ಲಿ ದಿಢೀರ್ ಎಂದು ತಲೆದೋರಿದ ವಿಲಕ್ಷಣ ಬೆಳವಣಿಗೆಯಿಂದಾಗಿ ಈ ಪಟ್ಟಿಯೊಳಗೆ ಮತ್ತಷ್ಟು ಹೆಸರುಗಳು ತೂರಿಕೊಳ್ಳುತ್ತಿರುವುದು ಅಚ್ಚರಿ ಮೂಡಿಸಿದೆ.

ನಿನ್ನೆ ಮೊನ್ನೆಯ ತನಕ ಇಂಥ ಆಕಾಂಕ್ಷಿಗಳ ಪಟ್ಟಿಯಲ್ಲಿ ಸತೀಶ್ ಜಾರಕಿಹೊಳಿ, ಎಂ.ಬಿ. ಪಾಟೀಲ್, ಆರ್.ವಿ. ದೇಶಪಾಂಡೆ, ಶರಣಬಸಪ್ಪ ದರ್ಶನಾಪುರ, ಬಸವರಾಜ ರಾಯರಡ್ಡಿ ಮುಂತಾದವರ ಹೆಸರುಗಳು ಕೇಳಿಬರುತ್ತಿದ್ದವು. ಈಗ ಈ ಯಾದಿಗೆ ಹೊಸದಾಗಿ ಸೇರ್ಪಡೆಯಾಗಿರುವವರು 'ದಾವಣಗೆರೆ ಧಣಿ' ಶಾಮನೂರು ಶಿವಶಂಕರಪ್ಪನವರು. ಅವರು ಮಾಧ್ಯಮ ಮಿತ್ರರೊಂದಿಗೆ ಮಾತನಾಡುತ್ತಾ, 'ಮುಖ್ಯಮಂತ್ರಿಗಳ ಬದಲಾವಣೆಯ ಪ್ರಸಂಗ ಎದುರಾದದ್ದೇ ಆದಲ್ಲಿ, ನಾನು ಕೂಡ ಸ್ಪರ್ಧಿಸಲು ತಯಾರಿದ್ದೇನೆ. ಇದರಲ್ಲಿ ಜೂನಿಯರ್-ಸೀನಿಯರ್ ಎಂಬ ಪ್ರಶ್ನೆಯೇ ಬರುವುದಿಲ್ಲ. ಅಂಥ ಪರಿಸ್ಥಿತಿ ಬಂದರೆ ಸಿಎಂ ಗದ್ದುಗೆಗೆ ಸ್ಪರ್ಧೆ ಮಾಡದೆ ಬಿಡುವುದಿಲ್ಲ' ಎಂದು ಅಬ್ಬರಿಸಿದ್ದಾರೆ. 'ಹೀಗೆ ಸಿಎಂ ಗದ್ದುಗೆಯ ಮೇಲೆ ಟವೆಲ್ ಹಾಕಲು ಮುಂದಾಗುತ್ತಿರುವವರ ಸಂಖ್ಯೆ ದಿನಗಳೆದಂತೆ ಹೆಚ್ಚುತ್ತಿರುವುದರಿಂದ, ಸಹಜವಾಗಿಯೇ ಟವೆಲ್ ಮಾರಾಟದಲ್ಲೂ ಏರಿಕೆಯಾಗಿದೆ' ಎಂಬುದಾಗಿ ಕಲಹಪ್ರಿಯ ನಾರದರು ಆಣಿಮುತ್ತು ಉದುರಿಸಿದರೆ, ಅದು ನಿಮಗೆ 'ಕುಹಕದ ಕಮೆಂಟ್' ಆಗಿ ಕೇಳಿಸಬಹುದು!!

ವಿವಿಧ ವಿನೋದಾ(ಹಾ)ವಳಿ!

ವಿಜಯಪುರ ಜಿಲ್ಲೆಯ ಶಿರನಾಳ ಗ್ರಾಮದ ಆಸ್ಪತ್ರೆಯ ವೈದ್ಯರೊಬ್ಬರು ಪಾನಮತ್ತರಾಗಿ ಬಂದು ಗಲಾಟೆ ಮಾಡಿ, ಕೈಗೆ ಸಿಕ್ಕ ವಸ್ತುಗಳನ್ನೆಲ್ಲಾ ಒಡೆದುಹಾಕಿ, ರೋಗಿಗಳೆಡೆಗೆ ರೇಗುತ್ತಾ ಕೂಗಾಡುತ್ತಾ ಒಂದಿಡೀ ವಾತಾವರಣವನ್ನು ಗಬ್ಬೆಬ್ಬಿಸಿದ ಸುದ್ದಿ ವರದಿಯಾಗಿದೆ. ವೈದ್ಯರಲ್ಲಿ 'ಹತ್ತು ಅವತಾರದ' ದೇವರನ್ನು ಕಾಣುವ ರೋಗಿಗಳು, ಅವರ ಈ 'ಹನ್ನೊಂದನೇ' ಅವತಾರವನ್ನು ಕಂಡು ದಿಗಿಲುಗೊಂಡಿದ್ದರೆ ಅಚ್ಚರಿಯೇನಿಲ್ಲ ಬಿಡಿ. ಅದೃಷ್ಟವಶಾತ್, ಇಷ್ಟೂ ಅವಧಿಯಲ್ಲಿ ಈ ವೈದ್ಯರು ಯಾವುದೇ ರೋಗಿಯ ತಪಾಸಣೆಗಾಗಲೀ, ರೋಗನಿರ್ಣಯಕ್ಕಾಗಲೀ ಅಥವಾ ಔಷಧಿ ನೀಡಿಕೆಗಾಗಲೀ ಮುಂದಾಗಿಲ್ಲ. ಇಲ್ಲವಾದರೆ, ರೋಗಿಗೆ 'ಬೇಧಿ ನಿಲ್ಲೋಕೆ' ಔಷಧಿ ಕೊಡೋ ಬದಲು 'ಬೇಧಿ ಆಗೋಕೆ' ಔಷಧಿ ಕೊಟ್ಟು, ಅದರ ವ್ಯತಿರಿಕ್ತ ಪರಿಣಾಮವಾಗಿ 'ಸಂತ್ರಸ್ತ' ರೋಗಿಯನ್ನು ಟಾಯ್ಲೆಟ್‌ನಿಂದ ಕ್ರೇನ್ ಮೂಲಕ ಮೇಲೆತ್ತಬೇಕಾದ ಪರಿಸ್ಥಿತಿ ಬರುತ್ತಿತ್ತೇನೋ? ಎಂಬುದು ನಾರದರ ಅತಿರೇಕದ ಊಹೆಯಷ್ಟೇ!!

ನಾರಾಯಣ ನಾರಾಯಣ!

ಕಾಂಗ್ರೆಸ್ಸಿಗ ಹಾಗೂ ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರು ಅಮೆರಿಕದ ಟೆಕ್ಸಾಸ್ ಮತ್ತು ಡಲ್ಲಾಸ್ ಪ್ರದೇಶಗಳಲ್ಲಿ ಅನಿವಾಸಿ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡುವಾಗ, ಭಾರತದ ಬಗ್ಗೆ ಮತ್ತು ಇಲ್ಲಿನ ಪರಿಸ್ಥಿತಿಯ ಬಗ್ಗೆ ಟೀಕಿಸಿದ್ದರ ವರದಿಯನ್ನು ಓದಿದ ಕೆಲ ಬಿಜೆಪಿ ಕಾರ್ಯಕರ್ತರು, ''ಇಲ್ಲಿದ್ದಾಗ 'ಭಾರತ್ ಜೋಡೋ' ಮಂತ್ರ ಜಪಿಸೋ ರಾಹುಲ್ ಮಹಾಶಯರು, ವಿದೇಶಕ್ಕೆ ಹೋದಾಗ 'ಭಾರತ್ ತೋಡೋ' ಅನ್ನೋ ರೀತಿಯಲ್ಲಿ ವರ್ತಿಸೋದ್ಯಾಕೆ?'' ಎಂದು ಗೊಂದಲಕ್ಕೊಳಗಾದರಂತೆ!

ಗೋಶಾಲೆಗಳನ್ನು, ಗೋಮಾಳ ಭೂಮಿಯನ್ನು ನುಂಗಿದವರ ಕಥೆ!

ರಾಜ್ಯದಲ್ಲಿ ಒಟ್ಟು 1,32,109 ಎಕರೆ ಗೋಮಾಳ ಜಮೀನು ಇದೆ ಎಂದು ಹೇಳಲಾಗಿದೆ. ಇದರಲ್ಲಿ, ಗಣನೀಯ ಭಾಗದ ಒತ್ತುವರಿಯಾಗಿದ್ದು ಇದರ ದಾಖಲಾತಿಯು ಆಳುವ ಸರಕಾರದ ಬಳಿಯಿಲ್ಲವೆಂಬುದು ಶೋಚನೀಯ ಸ್ಥಿತಿ. ಅಕ್ರಮವಾಗಿ ಸಾಗುವಳಿ ಚೀಟಿ ಮಾಡಿಸಿಕೊಂಡು ಸ್ವಂತಕ್ಕೆ ಬಳಕೆ ಮಾಡಿಕೊಂಡಿರುವ ಘಟನೆಗಳು ರಾಜ್ಯಾದ್ಯಂತ ನಡೆದಿವೆ. ಇದು ರೈತರ ಬಗ್ಗೆ, ಗೋಮಾಳ ಮತ್ತು ಗೋವುಗಳ ಬಗ್ಗೆ ತೋರಲಾಗುತ್ತಿರುವ ನಿರ್ಲಕ್ಷ್ಯಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದಲ್ಲಿ, ಭೂಮಿಯನ್ನು ಅದರ ಬಳಕೆ ಮತ್ತು ಮಾಲೀಕತ್ವದ ಆಧಾರದ ಮೇಲೆ ವಿವಿಧ ವರ್ಗಗಳಾಗಿ ವರ್ಗೀಕರಿಸಲಾಗಿದೆ, ಉದಾಹರಣೆಗೆ ಅರಣ್ಯ, ಕೃಷಿ, ವಸತಿ, ವಾಣಿಜ್ಯ ಇತ್ಯಾದಿ. ಇವುಗಳಲ್ಲಿ ಗೋಮಾಳ ಭೂಮಿಯೂ ಒಂದಾಗಿದ್ದು, ಇದು ಪ್ರಾಣಿಗಳ ಮೇಯಿಸುವಿಕೆಗೆ ಮೀಸಲಾಗಿಟ್ಟ ಭೂಮಿಯಾಗಿದೆ. ಈ ಭೂಮಿ ಅನೇಕ ಗ್ರಾಮೀಣ ಸಮುದಾಯಗಳ ಜೀವನೋಪಾಯಕ್ಕೂ ಆಧಾರವಾಗುವ ಮೂಲಕ ತನ್ನದೇ ಆದ ಪ್ರಾಮುಖ್ಯವನ್ನು ಹೊಂದಿದೆ.

'ಗೋಮಾಳ' ಎಂಬ ಪದವನ್ನು ಮೊದಲು ವಿಶ್ಲೇಷಿಸೋಣ. 'ಗೋ' ಎಂದರೆ ಹಸು ಮತ್ತು 'ಮಾಳ' ಎಂದರೆ ಭೂಮಿ ಅಥವಾ ಪ್ರದೇಶ. ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವಾಗ, ಜಾನುವಾರುಗಳನ್ನು ಮೇಯಿಸಲು ಸರಕಾರವು ಗ್ರಾಮೀಣ ಸಮುದಾಯಗಳಿಗೆ ಈ ಭೂಮಿಯನ್ನು ನಿಯೋಜಿಸಿತು. ಗೋಮಾಳ ಭೂಮಿ ಎಂಬುದು ಸಾಮಾನ್ಯ ಹುಲ್ಲುಗಾವಲು ಬೆಳೆಯಲು ಗೊತ್ತುಪಡಿಸಿದ ಪ್ರದೇಶವಾಗಿದೆ ಎನ್ನಬಹುದು.

ಗೋಮಾಳ ಭೂಮಿಯು ಸರಕಾರಿ ಸ್ವಾಮ್ಯದ ಮತ್ತು ಜಾನುವಾರುಗಳ ಮೇಯಿಸುವಿಕೆಗೆ ಗೊತ್ತುಪಡಿಸಿದ ಪ್ರದೇಶವಾಗಿದ್ದು, ಇದನ್ನು ಮಾರಾಟ ಮಾಡಲಾಗುವುದಿಲ್ಲ. ಗೋವು ಸಾಕಾಣಿಕೆ ಸಮುದಾಯದ ಅಗತ್ಯಗಳನ್ನು ಪೂರೈಸಲು ಇದನ್ನು ಮೀಸಲಿಟ್ಟಿದ್ದು, ವಿಶೇಷವಾಗಿ ಕೃಷಿ ಪ್ರಾಣಿಗಳ ಮೇಲೆ ಅವಲಂಬಿತರಾಗಿರುವವರ ಜೀವನೋಪಾಯಕ್ಕಾಗಿ, ಗೋಮಾಳ ಭೂಮಿಯನ್ನು ಮಾರಾಟ ಅಥವಾ ದುರುಪಯೋಗದಿಂದ ರಕ್ಷಿಸಲು ಸರಕಾರವು ಕಟ್ಟುನಿಟ್ಟಾದ ನಿಯಮಗಳು ಮತ್ತು ನಿಬಂಧನೆಗಳನ್ನು ಹೊಂದಿದೆ. ಗೋಮಾಳ ಭೂಮಿಯನ್ನು ಮಾರಾಟ ಮಾಡುವ, ಖಾಸಗೀಕರಣಗೊಳಿಸುವ ಯಾವುದೇ ಪ್ರಯತ್ನವು ಕಾನೂನು ಕ್ರಮಕ್ಕೊಳಗಾಗುತ್ತದೆ.

ಹೀಗಿದ್ದರೂ, ಸರಕಾರವು ನಿರ್ದಿಷ್ಟ ಸಾರ್ವಜನಿಕ ಉದ್ದೇಶಗಳಿಗಾಗಿ, ಅಭಿವೃದ್ಧಿ ಯೋಜನೆಗಳಿಗಾಗಿ ಗೋಮಾಳ ಭೂಮಿಯನ್ನು ಹಂಚಬಹುದು, ಆದರೆ ಅದಕ್ಕೆ ಸರಿಯಾದ ಕಾರಣಗಳನ್ನು ಕೊಡಬೇಕು. ಕೆಲವು ಸಂದರ್ಭಗಳಲ್ಲಿ, ಭೂರಹಿತ ರೈತರು ಅಥವಾ ಕೃಷಿ ಕಾರ್ಮಿಕರಿಗೆ ಕೃಷಿಗಾಗಿ ಗೋಮಾಳದ ಸಣ್ಣ ಭಾಗಗಳನ್ನು ನೀಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಅಗತ್ಯ ಹುಲ್ಲುಗಾವಲು ಪ್ರದೇಶಗಳನ್ನು ಒದಗಿಸುವ ಮೂಲಕ ಗ್ರಾಮೀಣ ಸಮುದಾಯಗಳ ಸುಸ್ಥಿರತೆಗೆ ಗೋಮಾಳ ಭೂಮಿ ಅತ್ಯಗತ್ಯ. ಈ ರೀತಿಯ ಭೂಮಿ ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ, ಜೀವನೋಪಾಯ, ಸುಸ್ಥಿರ ಬೆಳವಣಿಗೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಭೂಮಿಯನ್ನು ಮಾರಾಟ ಮಾಡದಂತೆ ಅಥವಾ ಕಾನೂನು ಬಾಹಿರವಾಗಿ ಬಳಸದಂತೆ ರಕ್ಷಿಸಲು ಸರಕಾರವು ಕಟ್ಟುನಿಟ್ಟಾದ ನೀತಿಗಳನ್ನು ಮಾಡಿದೆ. ಇದರೊಟ್ಟಿಗೆ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಯಿದೆ, 1978ರ ಪ್ರಕಾರ, ಮಂಜೂರು ಮಾಡಿದ ಭೂಮಿಯ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.

ಇಂಥ ಒಂದು ಪ್ರಾಣಿಪ್ರೀತಿ, ಹಸು ಸಾಕುವವರ ಪರವಾಗಿರುವ ಗೋಮಾಳ ಎಂಬ ಮಾನವೀಯ ಗುಣವುಳ್ಳ ಭೂ ಹಂಚಿಕೆ ಪದ್ಧತಿಯು ಪುರಾತನ ಕಾಲದಿಂದಲೂ ಇದ್ದಿತೆಂದು ತಿಳಿದುಬರುತ್ತದೆ. ಶೇರ್ ಷಾ ಸೂರಿ (1540-1545) ಉತ್ತನ್ನದ ವಿಷಯದಲ್ಲಿ ಭೂಮಿಯನ್ನು ಅಳೆದು ವರ್ಗೀಕರಿಸುವ ಮೂಲಕ ಕಾಬುಲಿಯಾತ್ ಮತ್ತು ಪಟ್ಟಾವನ್ನು ವಸಾಹತು ಸಾಧನಗಳಾಗಿ ಪರಿಚಯಿಸಿದನು. ಭೂ ಕಂದಾಯ ವಸೂಲಿಗಾಗಿ ಕನುಂಗೊ, ಅಮಿಲ್ ಮತ್ತು ಅಮೀನ್ ಹುದ್ದೆಗಳನ್ನು ಸೃಷ್ಟಿಸಿದನು.

ಅಕ್ಬರನ ಕಾಲದಲ್ಲಿ, ರಾಜಾ ತೋದರಮಲ್ಲ ಆ ವ್ಯವಸ್ಥೆಗೆ ಕೆಲವು ಸುಧಾರಣೆಗಳನ್ನು ಮಾಡುವ ಮೂಲಕ, ಇಡೀ ಸಾಮ್ರಾಜ್ಯವನ್ನು ಸುಬಾ, ಸರ್ಕಾರ್, ಪರಗಣ ಮತ್ತು ಮಹಲ್ ಎಂದು ವಿಂಗಡಿಸಿದನು.

ನಂತರದಲ್ಲಿ ಭಾರತಕ್ಕೆ ಬಂದ ಬ್ರಿಟಿಷರು ತಮ್ಮ ಆಳ್ವಿಕೆಯಲ್ಲಿ, ಕಂಪನಿ ಮತ್ತು ರಾಜಪ್ರಭುತ್ವದ ಅಡಿಯಲ್ಲಿ, ಈ ಕುರಿತಂತೆ ಎಚ್ಚರವಹಿಸಿ, ನಿಖರವಾದ ಆದಾಯದ ಮೂಲವಾಗಿದ್ದ ಈ ವ್ಯವಸ್ಥೆಗೆ ತಮ್ಮ ಸ್ಥಳೀಯ ಏಜೆಂಟರ ಮೂಲಕ ಒಂದು ವರ್ಷ, ಎರಡು ವರ್ಷಗಳು, ಐದು ವರ್ಷಗಳು ಮತ್ತು ಹತ್ತು ವರ್ಷಗಳ ವಸಾಹತುಗಳನ್ನಾಗಿ ವಿಂಗಡಿಸಿ ಜನರಿಗೆ ನೀಡುವ ಮೂಲಕ, ಅವರಿಂದ ಕರ-ಕಂದಾಯ ವಸೂಲಿ ಮಾಡಿದರು.

1793ರಲ್ಲಿ, ಲಾರ್ಡ್ ಕಾರ್ನ್‌ವಾಲಿಸ್ ಈ ಯೋಜನೆಯನ್ನು ಶಾಶ್ವತ ವಸಾಹತು ನಿಯಂತ್ರಣವನ್ನಾಗಿ ಪರಿಚಯಿಸುವ ಮುಖಾಂತರ ಭಾರತದಲ್ಲಿ ಮೊದಲ ಬಾರಿಗೆ, ಆಡಳಿತಗಾರನ ಸಹಿಯಿಂದ ಭೂಮಿಯ ಮೇಲಿನ ಮಾಲೀಕತ್ವ ಹೊಂದುವ ಪದ್ಧತಿಯು ಅಸ್ತಿತ್ವಕ್ಕೆ ಬಂದಿತು. ಈ ಮೂಲಕ, ಇಂಥ ವ್ಯತಿರಿಕ್ತ ನಿಯಂತ್ರಣವು ಗ್ರಾಮೀಣ ಬಂಗಾಳದಲ್ಲಿ ಹಲವು ಹೋರಾಟಗಾರರು-ಕ್ರಾಂತಿಕಾರರು ಜನ್ಮತಳೆದು ಹಲವಾರು ದಂಗೆಗಳು ಹುಟ್ಟಲು ಕಾರಣವಾಯಿತು. ಮುಂದೆ ಇದು 'ಬಂಗಾಳ ಟೆನೆನ್ಸಿ ಆಕ್ಟ್, 1885'ರ ಹುಟ್ಟಿಗೆ ಕಾರಣವಾಯಿತೆನ್ನಬಹುದು.

ಮುಂದೆ ಈ ಕಾಯ್ದೆಯು ಸಮೀಕ್ಷೆಯ ಘಟಕವಾದ ಮೌಜಾವನ್ನು ರಚಿಸುವ, ಸಂಪೂರ್ಣ ಪ್ರದೇಶದ ವೈಜ್ಞಾನಿಕ ಸಮೀಕ್ಷೆ ಮತ್ತು ಮ್ಯಾಪಿಂಗ್‌ಗೆ ದಾರಿ ಮಾಡಿಕೊಟ್ಟಿತು. ಈ ಪ್ರದೇಶದ ಪ್ರತಿಯೊಂದು ತುಂಡುಭೂಮಿಗೆ ಭೂ ದಾಖಲೆಗಳನ್ನು ಈ ಕಾಯ್ದೆಯ ಅಡಿಯಲ್ಲಿ ಸಿದ್ಧಪಡಿಸಲಾಗಿದೆ, ಇದನ್ನು 'ರೆಕಾರ್ಡ್ ಆಫ್ ರೈಟ್ಸ್' (1888-1940) ಎಂದು ಸಹ ಕರೆಯಲಾಗುತ್ತದೆ.

ಪ್ರವಾಹ ಆಯೋಗದ (1940) ಶಿಫಾರಸುಗಳ ಆಧಾರದ ಮೇಲೆ ಭೂಮಿಯಿಂದ ಮಧ್ಯವರ್ತಿಗಳ ಹಿತಾಸಕ್ತಿಗಳನ್ನು ಅಳಿಸಿಹಾಕಲು, ಪಶ್ಚಿಮ ಬಂಗಾಳ ಸರಕಾರವು, ಸ್ವಾತಂತ್ರ್ಯದ ನಂತರ ತಕ್ಷಣವೇ ಎಲ್ಲಾ ರೀತಿಯ ಮಧ್ಯವರ್ತಿ ಹಿತಾಸಕ್ತಿಗಳನ್ನು ರದ್ದುಗೊಳಿಸಿ, 1953ರಲ್ಲಿ ಪಶ್ಚಿಮ ಬಂಗಾಳದ ಎಸ್ಟೇಟ್ ಸ್ವಾಧೀನ ಕಾಯ್ದೆಯನ್ನು ಜಾರಿಗೊಳಿಸಿತು. ಮುಂದೆ ಇದು ಪಶ್ಚಿಮ ಬಂಗಾಳದ ಭೂಸುಧಾರಣಾ ಕಾಯ್ದೆ ಎಂದು ಪರಿಗಣಿತವಾಗಿ, ದೇಶದ ವಿವಿಧೆಡೆ ಜಾರಿಯಾಗಲು ಪ್ರೇರಣೆಯಾಯಿತೆನ್ನಬಹುದು.

ಇಂಥ ಒಂದು ಉದಾತ್ತ ವಿಚಾರವಿಟ್ಟುಕೊಂಡು ಹಲವು ಹೋರಾಟಗಾರರು ಶ್ರಮಿಸಿದ ಫಲವಾಗಿ ಗೋಮಾಳ ಎಂಬ ಭೂ ವ್ಯವಸ್ಥೆಯು ಜನ್ಮತಳೆದು, ಕರ್ನಾಟಕದಲ್ಲೂ ಈ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಹೀಗಿದ್ದರೂ, ಅಧಿಕಾರಕ್ಕೆ ಬಂದ ಸರಕಾರಗಳು ವಿವಿಧ ಉದ್ದೇಶಗಳಿಗೆ ಬಳಸಲು ಗೋಮಾಳಗಳನ್ನು ಕೊಡುವುದನ್ನು ನಾವು ಕೇಳುತ್ತಿದ್ದೇವೆ.

2018ರಲ್ಲಿ ದೇಶದ ಮಹಾಲೇಖಪಾಲರು (CAG), ಗೋಮಾಳ ಹಂಚಿಕೆಯನ್ನು ಕಟುವಾಗಿ ವಿರೋಧಿಸಿ, ಕರ್ನಾಟಕ ಭೂಕಂದಾಯ ನಿಯಮಗಳ ಪ್ರಕಾರ ಪ್ರತಿ 100 ಜಾನುವಾರುಗಳಿಗೆ 30 ಎಕರೆ ಗೋಮಾಳ ಭೂಮಿಯನ್ನು ಮೀಸಲಿಡಬೇಕು ಎಂದಿದ್ದರು. ಜತೆಗೆ, ವಿವಿಧ ಹೈಕೋರ್ಟ್‌ಗಳು ಗೋಮಾಳ ಭೂಮಿಯನ್ನು ಹಂಚಿಕೆ ಮಾಡದಂತೆ ಸರಕಾರಗಳಿಗೆ ಸೂಚಿಸಿರುವುದನ್ನು ಒತ್ತಿಹೇಳಿ ಇದಕ್ಕೆ ಸಂಬಂಧಿಸಿದ ಭೂ ಸುಧಾರಣೆಗಳನ್ನು ವಿರೋಧಿಸಿದ್ದರು.

ಇಷ್ಟೆಲ್ಲ ನೀತಿನಿಯಮಗಳು ಗೋಮಾಳಕ್ಕಿದ್ದರೂ, ಮಠಗಳು, ಟ್ರಸ್ಟ್ ಇತರೆ ಖಾಸಗಿಯವರು ನಡೆಸುವ 195ರಷ್ಟು ಖಾಸಗಿ ಗೋಶಾಲೆಗಳನ್ನು ಬಿಟ್ಟರೆ ಸರಕಾರದ ಬಳಿ ಸ್ವಂತ ಗೋಶಾಲೆಗಳೇ ಇಲ್ಲ. ಒಂದು ಹಸುವಿನ ನಿರ್ವಹಣೆಗೆ ದಿನಕ್ಕೆ 1 ರುಪಾಯಿಯನ್ನು ಸರಕಾರ ಅನುದಾನವಾಗಿ ನೀಡುತ್ತಿದೆ.

ಒಂದು ಅಂದಾಜಿನ ಪ್ರಕಾರ, 2022ರ ವರ್ಷದ ವೇಳೆಗೆ 3 ಕೋಟಿಯಷ್ಟು ಜಾನುವಾರುಗಳಿದ್ದು, ಪಾಲಿ ಕ್ಲಿನಿಕ್, ಪಶು ಆಸ್ಪತ್ರೆ, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಮತ್ತು ಸಂಚಾರಿ ಚಿಕಿತ್ಸಾಲಯಗಳ ವ್ಯವಸ್ಥೆ ಮತ್ತು ಸಂಖ್ಯೆಗಳು ಅತ್ಯಂತ ಕೆಟ್ಟದಾಗಿವೆ ಹಾಗೂ ಅವು ಅಂಕಿ-ಸಂಖ್ಯೆಗಳಿಗೆ ಅನುಗುಣವಾಗಿಲ್ಲ. ಹೀಗಾಗಿ ಪಶುಗಳು ಸೂಕ್ತ ಚಿಕಿತ್ಸೆ ಸಿಗದೆ ಸಾವನ್ನಪ್ಪುತ್ತಿರುವ ವರದಿಗಳೇ ಅತ್ಯಧಿಕವಾಗಿವೆ. ಇವುಗಳ ನಿರ್ವಹಣೆಗೆ ಪಶು ಸಂಗೋಪನೆ ಇಲಾಖೆ ಸಿಬ್ಬಂದಿಗಳು 9 ಸಾವಿರದಷ್ಟಿದ್ದು, ಇನ್ನೂ 10 ಸಾವಿರ ಹುದ್ದೆಗಳು ಖಾಲಿಯಿವೆ ಎಂಬ ಮಾಹಿತಿಯಿದೆ.

ರಾಜ್ಯದಲ್ಲಿ ಒಟ್ಟು 1,32,109 ಎಕರೆ ಗೋಮಾಳ ಜಮೀನು ಇದೆ ಎಂದು ಹೇಳಲಾಗಿದೆ. ಇದರಲ್ಲಿ, ಗಣನೀಯ ಭಾಗವು ಅನಧಿಕೃತವಾಗಿ ಒತ್ತುವರಿಯಾಗಿದೆ. ಇಂಥ ಒತ್ತುವರಿಯಾದ ಗೋಮಾಳ ಜಮೀನಿನ ದಾಖಲಾತಿಯು ಆಳುವ ಸರಕಾರದ ಬಳಿಯಿಲ್ಲವೆಂಬುದು ಅತ್ಯಂತ ಶೋಚನೀಯ ಸ್ಥಿತಿ. ಅಕ್ರಮವಾಗಿ ಸಾಗುವಳಿ ಚೀಟಿ ಮಾಡಿಸಿಕೊಂಡು ಸ್ವಂತಕ್ಕೆ ಬಳಕೆ ಮಾಡಿಕೊಂಡಿರುವ ಘಟನೆಗಳು ರಾಜ್ಯಾದ್ಯಂತ ನಡೆದಿವೆ. ಇದು ರೈತರ ಬಗ್ಗೆ, ಗೋಮಾಳ ಮತ್ತು ಗೋವುಗಳ ಬಗ್ಗೆ ಅಧಿಕಾರಿಗಳು, ಸರಕಾರಗಳು ತೋರುತ್ತಿರುವ ನಿರ್ಲಕ್ಷ್ಯಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಮಂಡ್ಯ ಜಿಲ್ಲೆ ಸೇರಿದಂತೆ ಕೆಲವೆಡೆ ಅಕ್ರಮವಾಗಿ ಚಿಕ್ಕ ಪ್ರಮಾಣದ ಗಣಿಗಾರಿಕೆ ನಡೆದರೆ, ಕೊಡಗು ಮುಂತಾದ ಕಡೆ ಟೀ ಇತ್ಯಾದಿ ವಾಣಿಜ್ಯ ಬೆಳೆಗಳಿಗಾಗಿ ಕೆಲ ಗೋಮಾಳಗಳು ಬಳಕೆಯಾಗುತ್ತಿವೆ. ಇನ್ನೂ ಕೆಲವೆಡೆ ತೋಟಗಾರಿಕೆ ಇಲಾಖೆಯು ತನ್ನ ವಿವಿಧ ಕೃಷಿ ಪ್ರಯೋಗಾಲಯಗಳನ್ನು ಈ ಗೋಮಾಳದ ಜಮೀನುಗಳಲ್ಲಿ ನಿರ್ಮಿಸಿದೆ. ಕೆಲವೆಡೆ ಅನಧಿಕೃತ ಸ್ಮಶಾನಗಳು ಹುಟ್ಟಿಕೊಂಡಿವೆ. ಇಂಥ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿದ್ದರೆ, ರಾಜ್ಯದಲ್ಲಿ ಭೂ ಕಂದಾಯ 1964ಕ್ಕೆ ತಿದ್ದುಪಡಿ ತಂದು '192 ಎ' ಅನ್ವಯ ಒತ್ತುವರಿ ತೆರವುಗೊಳಿಸುವ ಅವಕಾಶವಿದ್ದರೂ, ಕಂದಾಯ ಇಲಾಖೆ ಗಢದ್ದಾಗಿ ಹೊದ್ದು ಮಲಗಿದೆ.

ಅರಣ್ಯ ಇಲಾಖೆಯಲ್ಲಿ ಕಾಡಿನಂಚಿನ ಒತ್ತುವರಿಯಾದ ಭೂಮಿಯನ್ನು ಮರಳಿ ಪಡೆಯುವ ಕಠಿಣ ಕಾನೂನು ಇರುವಂತೆ ಗೋಮಾಳ ಭೂಮಿಗೂ ಕಾನೂನು ತರಬೇಕಿದೆ. ಒತ್ತುವರಿಯಾದ ಭೂಮಿಯನ್ನು ಖಡಕ್ಕಾಗಿ ಮರಳಿ ಪಡೆಯಬೇಕು ಅಥವಾ ಅದರಷ್ಟೇ ಅಳತೆಯ ಗೋಮಾಳಕ್ಕೆ ಅದೇ ಊರಿನ ಮತ್ತೊಂದು ಭಾಗದಲ್ಲಿ ಪರ್ಯಾಯವಾಗಿ ರೆವಿನ್ಯೂ ಜಾಗವನ್ನು ಪಡೆಯುವಂಥ ಕಾಯ್ದೆಗಳನ್ನು ಕೂಡಲೇ ಜಾರಿಗೆ ತರುವ ಅಗತ್ಯವಿದೆ. ಇನ್ನು, ದಕ್ಷಿಣ ಕನ್ನಡ ಜಿಲ್ಲೆಯು 13,218 ಎಕರೆಯಷ್ಟು ಗೋಮಾಳ ಹೊಂದಿದ್ದರೆ, ಉತ್ತರ ಕನ್ನಡ ಜಿಲ್ಲೆಯು ಸುಮಾರು 110 ಎಕರೆ ಗೋಮಾಳ ಹೊಂದಿದೆ.

ಉಡುಪಿ ಜಿಲ್ಲೆಯೊಂದರಲ್ಲೇ 155 ಗ್ರಾಮ ಪಂಚಾಯಿತಿಗಳಲ್ಲಿ 3,511 ಎಕರೆ ಗೋಮಾಳ ಜಾಗವಿದ್ದು, ಇದನ್ನು ಸರಕಾರ ಪೂರ್ಣಪ್ರಮಾಣದಲ್ಲಿ ಮೀಸಲಿಟ್ಟು ಗೋವುಗಳ ರಕ್ಷಣೆಗಾಗಿ, ಪಾಲನೆಗಾಗಿ ನೀಡಬೇಕು.

ಪ್ರಸ್ತುತ ದೇಶಿ ತಳಿಯ ಗೋವುಗಳು ತುಂಬಾ ವಿರಳ. ಕೆಲ ಗೋಶಾಲೆಯವರು ದೂರದ ಆಫ್ಘನ್, ಗುಜರಾತಿನ ಗಿರ್ ತಳಿ, ಜರ್ಸಿಯಂಥ ವಿದೇಶಿ ತಳಿಗಳನ್ನು ಸಾಕಲು ತರಿಸಿಕೊಳ್ಳುತ್ತಿದ್ದಾರೆ. ಹೀಗಾಗಿ, ಅಳಿವಿನಂಚಿನಲ್ಲಿರುವ ದೇಶಿ ಗೋವುಗಳ ಉಳಿವಿಗಾಗಿ ಪರಭಾರೆ ಆದ ಗೋಮಾಳ ಭೂಮಿಯ ರಕ್ಷಣೆಗಾಗಿ ಸ್ಥಳೀಯರ ಹೋರಾಟದ ಪ್ರಯತ್ನ ಕರಾವಳಿಯಲ್ಲಿ ಶುರುವಾಗಿದೆ. ಇದಕ್ಕೆ ಕಾರಣ, ಇತ್ತೀಚಿನ ವರ್ಷಗಳಲ್ಲಿ ದೇಸಿ ಗೋವುಗಳ ಸಂಖ್ಯೆ ವಿರಳವಾಗಿದೆ. ದೊಡ್ಡಮಟ್ಟದಲ್ಲಿ ಉದ್ಯಮವಾಗಿ ವಿದೇಶಿ ಗೋವುಗಳನ್ನು ಸಾಕಾಣಿಕೆ ಮಾಡಲಾಗುತ್ತಿದೆ. ಹಿಂದೆ ಗ್ರಾಮಗಳಲ್ಲಿ ಗೋವುಗಳಿಗೆ ಗೋಮಾಳದ ಜಾಗದಲ್ಲಿ ಹುಲ್ಲು ಯಥೇಚ್ಛ ಸಿಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಗೋಮಾಳ ಜಾಗಗಳು ಪರಭಾರೆ ಆಗುತ್ತಿವೆ. ಕೆಲ ಗ್ರಾಮಗಳಲ್ಲಿ ಗೋಮಾಳದ ಜಾಗ ಬೇರೆಬೇರೆ ಉದ್ದೇಶಕ್ಕೆ ಬಳಕೆಯಾಗುತ್ತಿದೆ. ಹೀಗಾಗಿ, ಗೋಮಾಳ ಜಾಗವನ್ನು ಊರಿನಲ್ಲಿ ಗೋ ಸಾಕಣೆ ಮಾಡುವವರಿಗೆ, ಗೋಶಾಲೆಗಳಿಗೆ ನೀಡಬೇಕು ಎಂಬುದು ಸ್ಥಳೀಯರ, ಹೋರಾಟಗಾರರ ಆಗ್ರಹವಾಗಿದೆ. ಇದಕ್ಕೆ ದನಿಗೂಡಿಸಿರುವ ಪೇಜಾವರ ಶ್ರೀಗಳು, 'ಗೋಭಕ್ಷಕರಾಗಿದ್ದ ಕ್ರೂರ ಬ್ರಿಟಿಷರ ಕಾಲದಲ್ಲೂ ಗೋಮಾಳ ಜಾಗ ಗೋಮಾಳವಾಗಿಯೇ ಉಳಿದಿತ್ತು. ಆದ್ರೆ, ಸ್ವಾತಂತ್ರ್ಯ ನಂತರದಲ್ಲಿ ನಮ್ಮವರಿಂದಲೇ ಗೋಮಾಳ ಜಮೀನುಗಳು ಬೇರೆ ಬೇರೆ ಉದ್ದೇಶಕ್ಕೆ ಬಳಕೆಯಾಗುತ್ತಿರುವುದೇಕೆ?' ಎಂದು ಸರಕಾರವನ್ನು ಪ್ರಶ್ನಿಸಿದ್ದಾರೆ.

ಕೊರೋನಾ ಸಂಕಷ್ಟದ ಕಾಲದಲ್ಲಿ, ಉದ್ಯೋಗ ಕಳೆದುಕೊಂಡು ಕಂಗಾಲಾಗಿದ್ದ ಅದೆಷ್ಟೋ ಯುವಕರು ಲಾಕ್‌ಡೌನ್ ಬಳಿಕ ಉದ್ಯೋಗ ಹುಡುಕದೇ ಸ್ವಯಂ ಗಳಿಕೆಯ ಮಾರ್ಗಕ್ಕಾಗಿ ತಮ್ಮ ತಮ್ಮ ಊರು ಸೇರಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇಂಥವರಿಗೂ ಈಗ ಮೇವಿನ ಸಮಸ್ಯೆ ದೊಡ್ಡದಾಗಿ ಕಾಡುತ್ತಿದೆ.

ಇದಕ್ಕೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಅಕ್ರಮ ಬಳಕೆಯನ್ನು ತೆರವುಗೊಳಿಸಿ, ಕನಿಷ್ಠಪಕ್ಷ ಗೋಮಾಳವನ್ನಾದರೂ ನಮ್ಮ ಯುವಕರಿಗೆ, ಗೋಪಾಲನೆ ಮಾಡಬಯಸುವವರಿಗೆ ನೀಡಿದರೆ ಅಥವಾ ಇಲಾಖಾ ವತಿಯಿಂದ ಮೇವು ಬೆಳೆಯಲು ಸೂಕ್ತ ಸೌಲಭ್ಯ, ಅನುದಾನದ ವ್ಯವಸ್ಥೆ ಮಾಡಿದರೆ ಅವರ ಜೀವನಕ್ಕೂ ಆಧಾರವಾದೀತು. ಉದ್ಯೋಗದ ಸಮಸ್ಯೆ ಕೆಲ ಮಟ್ಟಿಗಾದರೂ ನೀಗಿ, ಇತರರಿಗೆ ಉದ್ಯೋಗ ನೀಡಲು ಸಹಕಾರವೂ ಆದೀತು.

ಆತ್ಮಸಾಕ್ಷಿ ಅರಿತು, ಸರಕಾರದ ಯೋಜನೆಗಳನ್ನು ನಿಯತ್ತಾಗಿ ಜಾರಿಗೊಳಿಸುವ ಛಾತಿ ಸಂಬಂಧಿಸಿದ ಅಧಿಕಾರಿಗಳಲ್ಲಿರಬೇಕಾದುದು ಅತ್ಯಗತ್ಯವೆಂಬುದನ್ನು ಇವರೆಲ್ಲ ಅರಿತರೆ ಸಾಕು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 262

ಸಮಾಚಾರ ಸಣ್ಣದಲ್ಲ

ದೆಹಲಿಯಲ್ಲಿ ಭೂಕಂಪ, ಪಾಕ್‌ನಲ್ಲಿ 5.8 ತೀವ್ರತೆ

ದೆಹಲಿ/ಕರಾಚಿ: ಪಾಕಿಸ್ತಾನದಲ್ಲಿ ಬುಧವಾರ ಮಧ್ಯಾಹ್ನ 12.58ರ ವೇಳೆ 5.8 ತೀವ್ರತೆಯ ಭೂಕಂಪವಾಗಿದೆ. ಭೂಕಂಪನದ ಕೇಂದ್ರ ಬಿಂದು ಪಂಜಾಬ್‌ನ ಅಮೃತಸರದಿಂದ ಪಶ್ಚಿಮಕ್ಕೆ 415 ಕಿ.ಮೀ. ದೂರದಲ್ಲಿತ್ತು. ಇದೇ ವೇಳೆ, ದೆಹಲಿಯ ರಾಷ್ಟ್ರೀಯ ರಾಜಧಾನಿ ಪ್ರದೇಶ(ಎನ್‌ಸಿಆರ್) ಹಾಗೂ ಸಮೀಪದ ಇತರ ಪ್ರದೇಶಗಳಲ್ಲೂ ಭೂಮಿ ಕಂಪಿಸಿದೆ ಎಂದು ದೆಹಲಿಯಲ್ಲಿನ ಭೂಕಂಪಶಾಸ್ತ್ರ ರಾಷ್ಟ್ರೀಯ ಕೇಂದ್ರ ತಿಳಿಸಿದೆ. ಸದ್ಯ ಯಾವುದೇ ಪ್ರಾಣ ಹಾನಿ ವರದಿಯಾಗಿಲ್ಲ. ಆಸ್ತಿ ಹಾನಿ ಬಗ್ಗೆ ಇನ್ನಷ್ಟೇ ತಿಳಿಯಬೇಕಿದೆ.

ನೀರವ್ 30 ಕೋಟಿ ರು ಆಸ್ತಿ ಇ.ಡಿಯಿಂದ ಜಪ್ತಿ

ಮುಂಬೈ: ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 6,498 ಕೋಟಿ ರು. ವಂಚಿಸಿ ಲಂಡನ್‌ಗೆ ಪರಾರಿಯಾಗಿ ತಲೆ ಮರೆಸಿಕೊಂಡಿರುವ 'ಘೋಷಿತ ಅಪರಾಧಿ' ನೀರವ್ ಮೋದಿಗೆ ಸೇರಿದ 29.75 ಕೋಟಿ ರು. ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ(ಇ.ಡಿ.) ಬುಧವಾರ ಜಪ್ತಿ ಮಾಡಿದೆ. ಜಪ್ತಿ ಮಾಡಲಾದ ಆಸ್ತಿಯಲ್ಲಿ ಸ್ಥಿರ, ಚರ ಸ್ವತ್ತುಗಳು, ಬ್ಯಾಂಕ್ ಠೇವಣಿಗಳೂ ಸೇರಿವೆ.

ಇ.ಡಿ.ಯ ಮುಂಬೈ ವಲಯ ಕಚೇರಿ ಅಧಿಕಾರಿಗಳು 'ಪ್ರಿವೆನ್ಷನ್ ಆಫ್ ಮನಿ ಲಾಂಡರಿಂಗ್ ಆಕ್ಟ್-2002'(ಪಿಎಂಎಲ್‌ಎ) ಅಡಿಯಲ್ಲಿ ಜಪ್ತಿ ಪ್ರಕ್ರಿಯೆ ನಡೆಸಿದರು. ನೀರವ್ ಮೋದಿಗೆ ಸೇರಿದ 2596 ಕೋಟಿ ರು. ಮೌಲ್ಯದ ಆಸ್ತಿಗಳನ್ನು ಈವರೆಗೆ ಇ.ಡಿ ಜಪ್ತಿ ಮಾಡಿದೆ. 2018ರಲ್ಲಿ ನೀರವ್ ಮೋದಿ ಮತ್ತು ಆತನ ಸಂಬಂಧಿ ಮೆಹುಲ್ ಚೋಕ್ಸಿ ಸೇರಿ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ವಂಚಿಸಿ, ಇಬ್ಬರೂ ದೇಶಬಿಟ್ಟು ಓಡಿ ಹೋದರು.

ಅಕ್ರಮ ಮಸೀದಿ ವಿರುದ್ಧ ಹಿಂದೂ ಪ್ರತಿಭಟನೆ

ಶಿಮ್ಲಾ: ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದ ಸಂಜೌಲಿ ಪ್ರದೇಶದಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಿರುವುದನ್ನು ವಿರೋಧಿಸಿ, ತಕ್ಷಣವೇ ಮಸೀದಿ ತೆರವಿಗೆ ಆಗ್ರಹಿಸಿ ಹಿಂದೂಪರ ಸಂಘಟನೆಗಳು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದವು. ಈ ವೇಳೆ ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರವಾಗಿದೆ. ರಾಜ್ಯಕ್ಕೆ ಹೊರಗಿನಿಂದ ಬರುವವರ ಸಂಖ್ಯೆ ಅಧಿಕವಾಗಿದ್ದು, ಕಡ್ಡಾಯವಾಗಿ ಅವರ ನೋಂದಣಿ ಮಾಡಬೇಕು ಎಂದು ಹಿಂದೂ ಸಂಘಟನೆಗಳು ಆಗ್ರಹಿಸಿವೆ.

ಪ್ರತಿಭಟನೆಯಲ್ಲಿದ್ದ ಹಿಂದೂಗಳು ಕೂಡಲೇ ಮಸೀದಿ ತೆರವು ಮಾಡುವಂತೆ ಆಗ್ರಹಿಸಿದ್ದಾರೆ. ಮೆರವಣಿಗೆ ತಡೆಯಲು ಪೊಲೀಸರು ಡಲಿ ಸುರಂಗ ಮಾರ್ಗದಲ್ಲಿ ಹಾಕಿದ್ದ ಬ್ಯಾರಿಕೇಡ್ ಕಿತ್ತೆಸೆದಿದ್ದಾರೆ. ಈ ಸಂದರ್ಭ ಪೊಲೀಸರು ಲಾಠಿ ಪ್ರಹಾರ ನಡೆಸಿ, ಜಲಫಿರಂಗಿ ಬಳಸಿದ್ದಾರೆ. ಈ ವೇಳೆ ಪ್ರತಿಭಟನಾಕಾರರಲ್ಲಿ ಹಲವರಿಗೆ ಗಾಯಗಳಾಗಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಸಂಜೌಲಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಸೆ.19ರಂದು ಜನ್ಮದಿನ ಸಂಭ್ರಮ | 2012ರಲ್ಲೂ ಬಾಹ್ಯಾಕಾಶದಲ್ಲೇ ಆಚರಣೆ | 2025ರ ಫೆಬ್ರವರಿಯಲ್ಲಿ ಭೂಮಿಗೆ

ಸುನೀತಾ ವಿಲಿಯಮ್ಸ್ 59ನೇ ಜನ್ಮದಿನ ಬಾಹ್ಯಾಕಾಶದಲ್ಲೇ ಆಚರಣೆ

ವಾಷಿಂಗ್ಟನ್: ವಾಪಸ್ ಕರೆತರಲು ಬಂದಿದ್ದ ಗಗನ ನೌಕೆಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ಭೂಮಿಗೆ ಮರಳಲಾಗದೇ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ(ಐಎಸ್‌ಎಸ್) ದಲ್ಲಿಯೇ ಇನ್ನಷ್ಟು ಸಮಯ ಉಳಿಯಬೇಕಾಗಿ ಬಂದಿರುವ ಭಾರತ ಮೂಲದ ಅಮೆರಿಕ ಗಗನ ಯಾತ್ರಿ, ಸುನೀತಾ ವಿಲಿಯಮ್ಸ್ ಈ ಬಾರಿ ಸೆ.19ರಂದು ತಮ್ಮ ಜನ್ಮದಿನವನ್ನು 'ಐಎಸ್‌ಎಸ್'ನಲ್ಲಿಯೇ ಆಚರಿಸಿಕೊಳ್ಳುತ್ತಿದ್ದಾರೆ.

1965ರ ಸೆ.19ರಂದು ಓಹಿಯೋದ ಯೂಕ್ಲಿಡ್‌ನಲ್ಲಿ ಡಾ.ದೀಪಕ್ ಮತ್ತು ಬೋನಿ ಪಾಂಡ್ಯ ದಂಪತಿಗೆ ಜನಿಸಿದ ಸುನೀತಾ, ಈಗ 59ನೇ ಜನ್ಮದಿನ ಸಂಭ್ರಮದಲ್ಲಿದ್ದಾರೆ. ಬಾಹ್ಯಾಕಾಶದಲ್ಲಿ ಅವರು ಜನ್ಮದಿನ ಆಚರಿಸಿಕೊಳ್ಳುತ್ತಿರುವುದು ಇದು

2ನೇ ಬಾರಿಯಾಗಿದೆ. ಈ ಮೊದಲು 2012ರಲ್ಲಿ ಕೂಡ ಸುನೀತಾ ಬಾಹ್ಯಾಕಾಶದಲ್ಲೇ ಜನ್ಮದಿನ ಆಚರಿಸಿಕೊಂಡಿದ್ದರು. ಫ್ಲೈಟ್ ಇಂಜಿನಿಯರ್ ಆಗಿ ಡಿಸೆಂಬರ್ 2006ರಿಂದ ಜೂನ್ 2007ರವರೆಗೆ ಎಕ್ಸ್‌ಪೆಡಿಷನ್ 14/15ರಲ್ಲಿ ವಿಸ್ತೃತ ಬಾಹ್ಯಾಕಾಶ ಕಾರ್ಯಾಚರಣೆಯಲ್ಲಿ ತೊಡಗಿದ್ದರು. 2012ರ ಜುಲೈನಿಂದ ನವೆಂಬರ್‌ವರೆಗೆ ಎಕ್ಸ್‌ಪೆಡಿಷನ್ 32/33ರಲ್ಲಿ ತೆರಳಿದ್ದಾಗ ಮೊದಲ ಬಾರಿಗೆ ಬಾಹ್ಯಾಕಾಶದಲ್ಲಿ ಜನ್ಮದಿನ ಆಚರಿಸಿಕೊಂಡಿದ್ದರು.

ಹೊಸ ವಿಷಯದ ಅಧ್ಯಯನಕ್ಕೆಂದು 'ಐಎಸ್‌ಎಸ್'ಗೆ ಹೋಗಿರುವ ವಿಜ್ಞಾನಿ ಸುನೀತಾ ವಿಲಿಯಮ್ಸ್, ಜೂ.5ರಂದೇ ಭೂಮಿಗೆ ಮರಳಬೇಕಿತ್ತು. ಸುನೀತಾ ಮುಂದಿನ ವರ್ಷ ವಾಪಸಾಗುವರು ಎಂದು ಅಮೆರಿಕದ ಬಾಹ್ಯಾಕಾಶ ಸಂಸ್ಥೆ 'ನಾಸಾ' ಹೇಳಿದೆ. 2025ರ ಫೆಬ್ರವರಿಯಲ್ಲಿ ಎಲಾನ್ ಮಸ್ಕ್ ಒಡೆತನದ 'ಸ್ಪೇಸ್‌ಎಕ್ಸ್' ಕಂಪನಿಯ ಡ್ರ್ಯಾಗನ್ ಕ್ರ್ಯೂ ಸ್ಪೇಸ್ ಕ್ಯಾಪ್ಸೂಲ್‌ನಲ್ಲಿ ಭೂಮಿಗೆ ಮರಳಲಿದ್ದಾರೆ.

ಭಾರತ ಪ್ರೀತಿ!

ಸುನೀತಾ ಅಮೆರಿಕ ವಾಸಿಯಾಗಿದ್ದರೂ ಭಾರತ ದೇಶ, ಭಾರತೀಯ ಸಂಸ್ಕೃತಿಯನ್ನು ಅಪಾರವಾಗಿ ಪ್ರೀತಿಸುತ್ತಾರೆ. ಹಾಗಾಗಿಯೇ ಬಾಹ್ಯಾಕಾಶ ಯಾತ್ರೆಯ ಜತೆಗೇ ಭಗವದ್ಗೀತೆ ಪ್ರತಿ, ಗಣೇಶ ಮೂರ್ತಿ ಕೊಂಡೊಯ್ದಿದ್ದರು ಎನ್ನಲಾಗಿದೆ.

ನೊಯಿಡಾ ಸೆಮಿಕಂಡಕ್ಟರ್ 2024 ಮೇಳದಲ್ಲಿ ಎಲೆಕ್ಟ್ರಾನಿಕ್ಸ್ ಸಚಿವ ಅಶ್ವಿನಿ ವೈಷ್ಣವ್

ಸೆಮಿಕಾನ್ 2.0 ನೀತಿ ಶೀಘ್ರ ಜಾರಿ

ಗ್ರೇಟರ್ ನೊಯಿಡಾ: ಜಪಾನ್, ಅಮೆರಿಕ ಸೇರಿದಂತೆ ಕೆಲವೇ ದೇಶಗಳಲ್ಲಿ ಕೇಂದ್ರೀಕೃತವಾಗಿರುವ ಸೆಮಿಕಂಡಕ್ಟರ್ ಉದ್ಯಮವನ್ನು ಭಾರತದಲ್ಲೂ ಕಟ್ಟಿ ಬೆಳೆಸುವುದಕ್ಕಾಗಿ ಕೇಂದ್ರ ಸರಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ಈ ದಿಶೆಯಲ್ಲಿಯೇ 'ಸೆಮಿಕಾನ್ 2.0' ನೀತಿಯನ್ನು ಆದಷ್ಟೂ ಬೇಗ ಜಾರಿಗೊಳಿಸಲು ಉತ್ಸುಕವಾಗಿದೆ.

ಮುಂದಿನ 3-4 ತಿಂಗಳಲ್ಲಿ ಭಾರತದಲ್ಲಿ 'ಸೆಮಿಕಾನ್ 2.0 ನೀತಿ' ಜಾರಿಗೆ ಬರಲಿದೆ ಎಂದು ಕೇಂದ್ರದ ಎಲೆಕ್ಟ್ರಾನಿಕ್ಸ್ ಅಂಡ್ ಐಟಿ ಇಲಾಖೆ ಸಚಿವ ಅಶ್ವಿನಿ ವೈಷ್ಣವ್ ಬುಧವಾರ ಹೇಳಿದ್ದಾರೆ.

ಉತ್ತರ ಪ್ರದೇಶದ ಗ್ರೇಟರ್ ನೊಯಿಡಾದಲ್ಲಿ ಆಯೋಜಿಸಿರುವ 'ಸೆಮಿಕಾನ್' ಉದ್ಯಮ ಪ್ರದರ್ಶನ ಮೇಳದಲ್ಲಿ ಮಾತನಾಡಿದ ಸಚಿವರು, ಕೇಂದ್ರ ಸರಕಾರ ಸೆಮಿಕಂಡಕ್ಟರ್ ಉದ್ಯಮದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದೆ. ದೇಶದಲ್ಲಿ ಸೆಮಿಕಂಡಕ್ಟರ್ ಕ್ಷೇತ್ರವನ್ನು ಇನ್ನಷ್ಟು ಬಲಪಡಿಸಲೆಂದೇ ವಿಶೇಷ ನೀತಿ ಪ್ರಕಟಿಸುತ್ತಿದೆ ಎಂದರು.

ಈ ಹಿಂದೆ ಜಾರಿಗೊಳಿಸಿದ ಸೆಮಿಕಾನ್ 1.0 ನೀತಿ ಪೂರ್ಣಗೊಂಡಿದೆ. ಸೆಮಿಕಂಡಕ್ಟರ್‌ಗಳ ತಯಾರಿಕಾ ಕ್ಷೇತ್ರವೀಗ ವೇಗ ಪಡೆದುಕೊಳ್ಳುತ್ತಿದೆ. ಹಾಗಾಗಿ 2ನೇ ನೀತಿಯನ್ನು ಸದ್ಯದಲ್ಲೇ ಜಾರಿಗೊಳಿಸಲು ಸರಕಾರ ಉತ್ಸುಕವಾಗಿದೆ ಎಂದು ಹೇಳಿದರು. ಸೆಮಿಕಾನ್ 2.0 ನೀತಿ ಜಾರಿಗೊಂಡಲ್ಲಿ ಸೆಮಿಕಂಡಕ್ಟರ್ ತಯಾರಿಕೆಯಿಂದ ಆರಂಭಿಸಿ ಪೂರೈಕೆವರೆಗಿನ ಸಮಗ್ರ ಉದ್ಯಮಗಳೂ ಭಾರತದಲ್ಲಿ ಅಭಿವೃದ್ಧಿ ಕಾಣಲಿವೆ. ಇದು, ಸೆಮಿಕಂಡಕ್ಟರ್ ತಯಾರಿಕೆಗೆ ಅತ್ಯಗತ್ಯವಾದ ಉಪಕರಣಗಳು, ಕಚ್ಚಾ ಪದಾರ್ಥಗಳು, ವಿಶೇಷ ಸಾಮಗ್ರಿಗಳು, 250 ಬಗೆಯ ವಿಶೇಷ ರಾಸಾಯನಿಕಗಳು ಮತ್ತು ಅನಿಲಗಳ ತಯಾರಿಕೆ, ಪೂರೈಕೆ ಸರಪಳಿಯನ್ನೂ ಈ 2.0 ನೀತಿ ಒಳಗೊಂಡಿರಲಿದೆ. ಸೆಮಿಕಂಡಕ್ಟರ್ ತಯಾರಿಕೆ-ಪೂರೈಕೆ ಉದ್ಯಮಕ್ಕೆ ಅತ್ಯಗತ್ಯವಾದ ಎಲ್ಲವೂ ಒಂದೇ ನೆಲೆಯಲ್ಲಿ ಉದ್ಯಮಕ್ಕೆ ಲಭ್ಯವಾಗುವಂತೆ ಮಾಡಲಾಗುವುದು. ಇದುವೇ ಸೆಮಿಕಾನ್ 2.0 ನೀತಿಯ ಮುಖ್ಯ ಉದ್ದೇಶವಾಗಿರಲಿದೆ ಎಂದು ಸಚಿವರು ವಿವರಿಸಿದರು.

ಗ್ರೇಟರ್ ನೊಯಿಡಾದಲ್ಲಿ 3 ದಿನಗಳ ಸೆಮಿಕಂಡಕ್ಟರ್ ಉದ್ಯಮ ಪ್ರದರ್ಶನವನ್ನು ಪ್ರಧಾನಿ ನರೇಂದ್ರ ಮೋದಿ ಬುಧವಾರ ಉದ್ಘಾಟಿಸಿದರು. ಕೇಂದ್ರದ ಐಟಿ ಸಚಿವ ಅಶ್ವಿನಿ ವೈಷ್ಣವ್, ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಮತ್ತಿತರರಿದ್ದರು.

ಉತ್ತರ ಪ್ರದೇಶ ಬಲು ಉತ್ಸುಕ

ರಾಜ್ಯದಲ್ಲಿ ಸೆಮಿಕಂಡಕ್ಟರ್ ಘಟಕ ಸ್ಥಾಪಿಸಲು ಮುಂದಾಗುವ ಫಾರ್ಚೂನ್ 500 ಕಂಪನಿಗಳಿಗೆ ಅಗತ್ಯ ಭೂಮಿ ಮತ್ತು ನಗದು ಸಬ್ಸಿಡಿಯನ್ನೂ ಒದಗಿಸಲಾಗುವುದು. ಗರಿಷ್ಠ ವಿದೇಶಿ ನೇರ ಹೂಡಿಕೆಗೂ ಅವಕಾಶ ಮಾಡಿಕೊಡಲಾಗುವುದು ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇದೇ ವೇಳೆ ಹೇಳಿದರು. ಅಲ್ಲದೇ, ಯಮುನಾ ಎಕ್ಸ್‌ಪ್ರೆಸ್ ವೇ ವಲಯದಲ್ಲೇ ಸೆಮಿಕಂಡಕ್ಟರ್ ಉದ್ಯಮಕ್ಕಾಗಿ ಸಾವಿರ ಎಕರೆ ಭೂಮಿ ಮೀಸಲಿಡಲಾಗಿದೆ ಎಂದರು.

ವಿಶೇಷ ಅನಿಲ ಆಮದು ಸವಾಲು

ಸೆಮಿಕಂಡಕ್ಟರ್ ಉದ್ಯಮಕ್ಕೆ ಹಲವು ವಿಶೇಷ ಅನಿಲಗಳ ಅಗತ್ಯವಿದೆ. ಅವುಗಳನ್ನು ವಿಶ್ವದ ವಿವಿಧೆಡೆಯಿಂದ ಭಾರತಕ್ಕೆ ತರಿಸಿಕೊಳ್ಳುವುದೇ ಸವಾಲಿನ ಕೆಲಸ. ಅಲ್ಲದೇ, ಸೆಮಿಕಂಡಕ್ಟರ್ ತಯಾರಿಸಲು ಹತ್ತಾರು ವಿಶೇಷ ಬಗೆಯ ಮೆಟೀರಿಯಲ್ಸ್ ಬೇಕಾಗುತ್ತವೆ. ಅವುಗಳೂ ಸರಾಗವಾಗಿ ಲಭ್ಯವಾಗುವಂತೆ ಮಾಡಬೇಕಿದೆ. ಈ ದಿಶೆಯಲ್ಲಿಯೂ ಸರಕಾರ ಚಿಂತನೆ ನಡೆಸಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಸೆಮಿಕಂಡಕ್ಟರ್ ತಯಾರಿಕಾ ಉದ್ಯಮಕ್ಕೆ ಬೇಕಾದ ಎಲ್ಲಾ ಕಚ್ಚಾ ಸರಕು, ಉಪಕರಣಗಳು, ಯಂತ್ರಗಳು, ರಾಸಾಯನಿಕಗಳು, ಅನಿಲಗಳು ಎಲ್ಲವೂ ಒಂದೇ ನೆಲೆಯಲ್ಲಿ ಸಿಗುವಂತೆ ಮಾಡಲು ಯೋಜಿಸಲಾಗುತ್ತಿದೆ ಎಂದರು.

₹42 ಲಕ್ಷ ಕೋಟಿ ಉದ್ಯಮದ ಗುರಿ

ಭಾರತದಲ್ಲಿನ ಎಲೆಕ್ಟ್ರಾನಿಕ್ ಉದ್ಯಮ ಕ್ಷೇತ್ರ ಸದ್ಯ 15 ಸಾವಿರ ಕೋಟಿ ಡಾಲರ್(12.60 ಲಕ್ಷ ಕೋಟಿ ರು.) ಮೌಲ್ಯದಷ್ಟಿದೆ. ಈ ದಶಕದ ಅಂತ್ಯದ ವೇಳೆಗೆ (6 ವರ್ಷದಲ್ಲಿ) 50 ಸಾವಿರ ಕೋಟಿ ಡಾಲರ್ ಮೌಲ್ಯದ (42 ಲಕ್ಷ ಕೋಟಿ ರು.) ಗಾತ್ರಕ್ಕೆ ಎಲೆಕ್ಟ್ರಾನಿಕ್ಸ್ ಉದ್ಯಮವನ್ನು ಬೆಳೆಸುವ ಗುರಿ ಇಟ್ಟುಕೊಂಡಿದೆ. ಹಾಗಾಗಿ, ನೀವು ಸರಿಯಾದ ಕಾಲದಲ್ಲಿ ಸರಿಯಾದ ಜಾಗದಲ್ಲಿ ಇದ್ದೀರಿ ಎಂಬುದನ್ನು ಅರಿಯಿರಿ. ನೀವೀಗ ಭಾರತದಲ್ಲಿ ಉದ್ಯಮ ಸ್ಥಾಪಿಸುವ ಮೂಲಕ ದೊಡ್ಡ ಮಟ್ಟದ ಸ್ಪರ್ಧೆ ಮಾಡಬಹುದು ಎಂದೂ ಪ್ರಧಾನಿ ಉದ್ಯಮಿಗಳನ್ನು ಉತ್ತೇಜಿಸುವ ಮಾತನಾಡಿದರು.

ವಿಶ್ವದಲ್ಲಿನ ಪ್ರತಿ ಗ್ಯಾಡ್ಜೆಟ್‌ನಲ್ಲೂ ಭಾರತದ್ದೇ ಚಿಪ್: ಮೋದಿ ಕನಸು

ಭಾರತದಲ್ಲಿ ತಯಾರಾದ ಸೆಮಿಕಂಡಕ್ಟರ್ ಚಿಪ್‌ಗಳು ವಿಶ್ವದಲ್ಲಿನ ಎಲ್ಲಾ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿಯೂ ಇರುವಂತೆ ಮಾಡಬೇಕು ಎನ್ನುವುದೇ ನಮ್ಮ ಕನಸಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಉತ್ತರ ಪ್ರದೇಶದ ಗ್ರೇಟರ್ ನೊಯಿಡಾದಲ್ಲಿ 3 ದಿನಗಳ 'ಸೆಮಿಕಾನ್ 2.0' ಸಮಾವೇಶ ಉದ್ಘಾಟಿಸಿದ ಪ್ರಧಾನಿ ಮೋದಿ, ಭಾರತದಲ್ಲಿ ಸೆಮಿಕಂಡಕ್ಟರ್ ಉದ್ಯಮವನ್ನು ದೊಡ್ಡ ಮಟ್ಟದಲ್ಲಿ ಬೆಳೆಸಬೇಕೆಂಬ ತಮ್ಮ ಕನಸನ್ನು ಹಂಚಿಕೊಂಡರು. ಬಂಡವಾಳ ಹೂಡಿಕೆ ಸರಾಗಗೊಳಿಸಿರುವ, ಸುಸ್ಥಿರ ನೀತಿಗಳನ್ನು ಜಾರಿಗೊಳಿಸುತ್ತಿರುವ ಸರಕಾರ ಕೇಂದ್ರದಲ್ಲಿ ಇರುವಾಗ ಭಾರತದಲ್ಲಿ ಉದ್ಯಮ ಸ್ಥಾಪಿಸುವುದಕ್ಕೆ ಸಕಾಲವಾಗಿದೆ ಎಂದು ಉದ್ಯಮಿಗಳ ಗಮನ ಸೆಳೆದರು.

ಸೆಮಿಕಾನ್ 1.0 ಯಶಸ್ವಿ: ವೈಷ್ಣವ್

ಸೆಮಿಕಂಡಕ್ಟರ್ ಕ್ಷೇತ್ರದ ಉತ್ತೇಜನಕ್ಕಾಗಿ ಕೇಂದ್ರ ಸರಕಾರ ಜಾರಿಗೆ ತಂದ ಸೆಮಿಕಾನ್ 1.0 ನೀತಿಯಿಂದಾಗಿ 5 ಸೆಮಿಕಂಡಕ್ಟರ್ ತಯಾರಿಕಾ ಘಟಕಗಳಿಗೆ ಅನುಮೋದನೆ ಸಿಕ್ಕಿದೆ. ಇದರಲ್ಲಿ 4 ಸ್ಥಾವರಗಳು ಗುಜರಾತ್‌ನಲ್ಲಿ ನೆಲೆಗೊಂಡಿದ್ದರೆ, 1 ಘಟಕ ಅಸ್ಸಾಂನಲ್ಲಿ ಸ್ಥಾಪನೆಯಾಗಿದೆ. ಉತ್ತರ ಪ್ರದೇಶ ಸೇರಿದಂತೆ ಇನ್ನೂ 3-4 ರಾಜ್ಯ ಗಳಲ್ಲೂ ಸೆಮಿಕಂಡಕ್ಟರ್ ಘಟಕಗಳು ಸದ್ಯದಲ್ಲೇ ಸ್ಥಾಪನೆ ಯಾಗಲಿವೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ನಿಗೂಢ ಜ್ವರಕ್ಕೆ 14 ಸಾವು; ಆತಂಕದಲ್ಲಿ ಗುಜರಾತ್

ಕಚ್: ಗುಜರಾತ್‌ನಲ್ಲಿ ನಿಗೂಢ ಜ್ವರ ಕಾಣಿಸಿಕೊಂಡಿದ್ದು, ಆರು ಮಕ್ಕಳು ಸೇರಿದಂತೆ 14 ಮಂದಿ ಸಾವಿಗೀಡಾಗಿದ್ದಾರೆ.

ಕಚ್ ಜಿಲ್ಲೆಯ ಲಖಪತ್ ಮತ್ತು ಅಬ್ಡಾಸಾ ತಾಲೂಕುಗಳಲ್ಲಿನ 7 ಗ್ರಾಮಗಳಲ್ಲಿ ಸೆ.3ರಿಂದ ಕಾಡಲಾರಂಭಿಸಿ ರುವ ನಿಗೂಢ ಜ್ವರ ನೂರಾರು ಮಂದಿ ಬಳಲುವಂತೆ ಮಾಡಿದೆ. ಯಾವ ರೀತಿಯ ಜ್ವರವಿದು ಎಂಬುದನ್ನೇ ಗುರುತಿಸಲಾಗದೇ ವೈದ್ಯರ ತಂಡ ಪರದಾಡುತ್ತಿದೆ. ನಿಗೂಢ ಜ್ವರ ಸೆ.10ರವರೆಗೆ ಒಟ್ಟು 14 ಜೀವಬಲಿ ತೆಗೆದುಕೊಂಡಿದೆ.

ಬುಧವಾರ ಕೂಡ ನಿಗೂಢ ಜ್ವರದ 48 ಹೊಸ ಪ್ರಕರಣ ದಾಖಲಾಗಿವೆ. ಇದರಿಂದ ಬೆಚ್ಚಿಬಿದ್ದಿರುವ ರಾಜ್ಯದ ಆರೋಗ್ಯ ಇಲಾಖೆ, ಒಬ್ಬರು ಹೃದ್ರೋಗ ತಜ್ಞ ಮತ್ತು ಇಬ್ಬರು ನುರಿತ ಫಿಜಿಷಿಯನ್‌ಗಳನ್ನು ಕಚ್ ಜಿಲ್ಲೆಗೆ ಕಳುಹಿಸಿಕೊಟ್ಟಿದೆ. ಅಲ್ಲದೇ, ವೈದ್ಯರು, ಶುಶ್ರೂಷಕಿಯರನ್ನು ಒಳಗೊಂಡ 50 ವೈದ್ಯಕೀಯ ತಂಡಗಳ ನ್ನು ರಚಿಸಿ ಜ್ವರ ಪೀಡಿತ 7 ಗ್ರಾಮಗಳ ಸೇರಿದಂತೆ ವಿವಿಧೆಡೆಗೆ ರವಾನಿಸಿದೆ. ಅಲ್ಲದೇ, ತುರ್ತು ಸ್ಥಿತಿ ಎದುರಾದರೆ ನಿಭಾಯಿಸಲು ಸಾಧ್ಯವಾಗುವಂತೆ ಅದಾನಿ ಜಿಕೆ ಜನರಲ್ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ 100 ಹಾಸಿಗೆಗಳು, 30 ವೆಂಟಿಲೇಟರ್‌ಗಳು, ಬಿಪ್ಯಾಪ್ ಯಂತ್ರಗಳನ್ನು ಸಿದ್ಧಪಡಿಸಿಟ್ಟಿದೆ. ರಾಜ್ಯದ ಆರೋಗ್ಯ ಸಚಿವ ಋಷಿಕೇಶ್ ಪಟೇಲ್ ಬುಧವಾರ ಭುಜ್ ಜಿಲ್ಲೆಯಲ್ಲಿ ವಿಶೇಷ ಪರಾಮರ್ಶೆ ಸಭೆ ನಡೆಸಿದರು.

ರೈಲು ಹಳಿಯಲ್ಲಿ ರೀಲ್ಸ್: ಪತಿ-ಪತ್ನಿ, ಮಗು ಸಾವು

ಲಖೀಂಪುರ: ಉತ್ತರ ಪ್ರದೇಶ ಲಖೀಂಪುರ ಖೇರಿಯಲ್ಲಿ ರೈಲು ಹಳಿಗಳ ಮೇಲೆಯೇ 'ರೀಲ್' ಮಾಡುತ್ತಿದ್ದ ಪತಿ-ಪತ್ನಿ ಮತ್ತು 2 ವರ್ಷದ ಮಗು ಮೇಲೆ ರೈಲು ಹರಿದು ಮೂವರೂ ಸಾವಿಗೀಡಾಗಿದ್ದಾರೆ. ಉತ್ತರ ಪ್ರದೇಶದ ಸೀತಾಪುರ ಜಿಲ್ಲೆಯ ಲಹರ್‌ಪುರ ನಿವಾಸಿಗಳಾದ ಮೊಹಮ್ಮದ್ ಅಹ್ಮದ್(26), ನಜನೀನ್(24), ಅಕ್ರಂ(2) ಮೃತರು.

ಸಾಮಾಜಿಕ ಜಾಲತಾಣಕ್ಕಾಗಿ 'ರೀಲ್ಸ್' ಮಾಡಲು ಮುಂದಾಗಿದ್ದೇ ಮೂವರ ಜೀವಕ್ಕೆ ಕುತ್ತು ತಂದಿದೆ. ರೈಲ್ವೆ ಟ್ರ್ಯಾಕ್ ಮೇಲೆ ನಿಂತು ರೀಲ್ಸ್ ಮಾಡುತ್ತಿದ್ದಾಗಲೇ ಎಕ್ಸ್‌ಪ್ರೆಸ್ ರೈಲು ವೇಗವಾಗಿ ಸಾಗಿಬಂದಿದೆ. ರೀಲ್ಸ್ ಮಾಡುವುದರಲ್ಲಿ ಮೈಮರೆತಿದ್ದ ದಂಪತಿಗೆ ರೈಲು ಬರುತ್ತಿರುವುದು ಗಮನಕ್ಕೆ ಬಂದಿಲ್ಲ. ವೇಗವಾಗಿ ಬಂದ ರೈಲು ಮೂವರಿಗೆ ಗುದ್ದಿದೆ. ಕೆಳಕ್ಕೆ ಬಿದ್ದವರ ಮೇಲೆ ಚಕ್ರಗಳು ಹರಿದಿವೆ. ಮೂವರ ದೇಹವೂ ಛಿದ್ರವಾಗಿವೆ. ಹರಗಾಂವ್ ಗ್ರಾಮದಲ್ಲಿ ನಡೆಯುತ್ತಿದ್ದ ಜಾತ್ರೆ ಮುಗಿಸಿಕೊಂಡು ವಾಪಸಾಗುವಾಗ ಲಖೀಂಪುರ ಬಳಿ ರೈಲ್ವೆ ಸೇತುವೆ ಕೆಳಗೆ ಮೋಟಾರ್ ಬೈಕ್ ನಿಲ್ಲಿಸಿ ರೈಲು ಹಳಿ ಮೇಲೆ ರೀಲ್ಸ್ ಮಾಡಲು ಮುಂದಾಗಿದ್ದೇ ಜೀವಕ್ಕೆ ಕುತ್ತು ತಂದಿದೆ.

ಉಗ್ರ ಬೆಂಬಲಿಗ ರಶೀದ್‌ಗೆ ಜಾಮೀನು

ದೆಹಲಿ: ಉಗ್ರರಿಗೆ ಹಣಕಾಸಿನ ನೆರವು ನೀಡಿದ ಆರೋಪದಡಿ 2019ರಲ್ಲಿ ಬಂಧನಕ್ಕೊಳಗಾಗಿದ್ದ, ತಿಹಾರ್ ಜೈಲಿನಲ್ಲಿದ್ದುಕೊಂಡೇ 2024ರ ಲೋಕಸಭೆ ಚುನಾವಣೆಗೆ ಬಾರಾಮುಲ್ಲಾ ಕ್ಷೇತ್ರದಿಂದ ಸ್ಪರ್ಧಿಸಿ ಸಂಸದರಾಗಿ ಆಯ್ಕೆಯಾಗಿರುವ ಕಾಶ್ಮೀರದ ಷೇಕ್ ಅಬ್ದುಲ್ ರಶೀದ್ ಅಲಿಯಾಸ್ 'ಎಂಜಿನಿಯರ್ ರಶೀದ್'ಗೆ ಕಡೆಗೂ ದೆಹಲಿ ಹೈಕೋರ್ಟ್‌ನಿಂದ ಜಾಮೀನು ಸಿಕ್ಕಿದೆ. ಜಮ್ಮು-ಕಾಶ್ಮೀರ ಚುನಾವಣೆ ಹಿನ್ನೆಲೆಯಲ್ಲಿ ಅ.2ರವರೆಗಷ್ಟೇ ಮಧ್ಯಂತರ ಜಾಮೀನು ನೀಡಲಾಗಿದೆ. ತಿಹಾರ್ ಸೆರೆಮನೆಯಿಂದ ಬುಧವಾರ ಹೊರಬಂದ ರಶೀದ್, ಕಾಶ್ಮೀರ ಚುನಾವಣೆ ಯಲ್ಲಿ ಪ್ರಚಾರ ಕೈಗೊಳ್ಳಲು ಉತ್ಸುಕನಾಗಿದ್ದು, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾಗಿ, ಮೋದಿ ಅವರ 'ನಯಾ ಕಾಶ್ಮೀರ' ಪರಿಕಲ್ಪನೆಯನ್ನೂ 'ಸಂಪೂರ್ಣ ವಿಫಲ ಪ್ರಯೋಗ' ಎಂದು ಟೀಕಿಸಿರುವುದಾಗಿ ವರದಿಯಾಗಿದೆ.

33ನೇ ದಿನ ಸ್ವಾಸ್ಥ್ಯ ಭವನದ ಹೊರಗೆ ಧರಣಿ ಮುಂದುವರಿಕೆ

ಸರಕಾರದ ಜತೆ ಕಿರಿ ವೈದ್ಯರ ಮಾತುಕತೆ ವಿಫಲ

ಕೋಲ್ಕತ್ತ: ಪ್ರತಿಭಟನೆ ಕೊನೆಗೊಳಿಸಿ ಮಂಗಳವಾರ ಸಂಜೆ 5ರೊಳಗೆ ಕರ್ತವ್ಯಕ್ಕೆ ಹಾಜರಾಗುವಂತೆ ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶನವನ್ನೂ ಧಿಕ್ಕರಿಸಿ ಸರಕಾರಿ ಆಸ್ಪತ್ರೆಗಳ ಕಿರಿಯ ವೈದ್ಯರ ಪ್ರತಿಭಟನೆ ಬುಧವಾರವೂ ಮುಂದುವರಿದಿದ್ದು, 33ನೇ ದಿನಕ್ಕೆ ಕಾಲಿಟ್ಟಿದೆ.

ಈ ಮಧ್ಯೆ, ರಾಜ್ಯ ಸರಕಾರದ ಕರೆಯ ಮೇರೆಗೆ ಬುಧವಾರ ಸಂಜೆ 6 ಗಂಟೆಗೆ ಕಿರಿಯ ವೈದ್ಯರ ಪ್ರತಿನಿಧಿಗಳು ಸರಕಾರದ ಜತೆ ಮಾತುಕತೆಗೆ ತೆರಳಲು ಸಿದ್ಧವಾದರು. ಆದರೆ, ಸಭೆ ನಡೆಸಲಿದ್ದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್, ಕಿರಿಯ ವೈದ್ಯರ 15 ಪ್ರತಿನಿಧಿಗಳಷ್ಟೇ ರಾಜ್ಯ ಸಚಿವಾಲಯ ಭವನ 'ನಬನ್ನಾ'ಗೆ ಬರಬೇಕು ಎಂದು ಷರತ್ತು ವಿಧಿಸಿದರು. ಅದಕ್ಕೆ ಒಪ್ಪದ ಕಿರಿಯ ವೈದ್ಯರ ಪ್ರತಿನಿಧಿಗಳು, 30 ಪ್ರತಿನಿಧಿಗಳಿಗೆ ಅವಕಾಶವಿರಬೇಕು. ಮಾತುಕತೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ನೇರ ಪ್ರಸಾರಕ್ಕೆ ಟಿವಿ ಕ್ಯಾಮೆರಾಗಳಿಗೂ ಅವಕಾಶ ಕೊಡಬೇಕು ಎಂದು ಪಟ್ಟು ಹಿಡಿದರು. ಅದಕ್ಕೆ ಮುಖ್ಯ ಕಾರ್ಯದರ್ಶಿ ಒಪ್ಪದೇ ಹೋದಾಗ, ಸಿಎಂ ಜತೆಗೇ 'ಮುಖಾಮುಖಿ ಮಾತುಕತೆ' ನಡೆಸುವುದಾಗಿ ಹೇಳಿದ ನೂರಾರು ಕಿರಿಯ ವೈದ್ಯರು ಆರೋಗ್ಯ ಇಲಾಖೆಯ ಪ್ರಧಾನ ಕಚೇರಿ 'ಸ್ವಾಸ್ಥ್ಯ ಭವನ'ದಲ್ಲೇ ಪ್ರತಿಭಟನೆ ಮುಂದುವರಿಸಿದರು.

ಈ ಮಧ್ಯೆ, ಹತ್ಯಾಚಾರ ಸಂತ್ರಸ್ತೆ, ಕಿರಿಯ ವೈದ್ಯೆಯ ಪೋಷಕರೂ ಪ್ರತಿಭಟನೆಗೆ ಕೈಜೋಡಿಸಿದ್ದಾರೆ. ನಮ್ಮ ಮಕ್ಕಳು ಇಲ್ಲಿ 33 ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವಾಗ ನಾವು ಹೇಗೆ ಮನೆಯಲ್ಲಿ ಕೂರಲು ಸಾಧ್ಯ? ಎಂದು ಸಂತ್ರಸ್ತೆ ಪೋಷಕರು ಪ್ರಶ್ನಿಸಿದ್ದಾರೆ.

ಮುಖಾಮುಖಿ: ಸಿಎಂಗೆ ಇಮೇಲ್

ಸಿಎಂ ಜತೆಗೇ ಮುಖಾಮುಖಿ ಮಾತುಕತೆ. ಸಭೆಯ ನೇರ ಪ್ರಸಾರಕ್ಕೆ ಟಿವಿಗಳಿಗೆ ಅವಕಾಶ, ಹತ್ಯಾಚಾರ ಸಂತ್ರಸ್ತೆಗೆ ಶೀಘ್ರ ನ್ಯಾಯ, ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರಿಗೆ ಬೆದರಿಕೆ ಒಡ್ಡುವುದನ್ನು ಸರಕಾರ ಬಿಡಬೇಕು. ವೈದ್ಯೆಯರು, ಶುಶ್ರೂಷಕಿಯರಿಗೆ ಕೆಲಸದ ಸ್ಥಳದಲ್ಲಿ ಸುರಕ್ಷತೆ, ಭದ್ರತೆ ಖಚಿತಪಡಿಸಬೇಕು ಎಂಬ ಬೇಡಿಕೆಗಳನ್ನು ಪ್ರತಿಭಟನಾ ನಿರತ ಕಿರಿಯ ವೈದ್ಯರು, ಸಿಎಂ ಮಮತಾ ಬ್ಯಾನರ್ಜಿ ಅವರಿಗೇ ಬುಧವಾರ 'ಇ-ಮೇಲ್' ಮಾಡಿದ್ದಾರೆ. ಅಲ್ಲದೇ, ಆರ್‌ಜಿ ಕರ್ ಆಸ್ಪತ್ರೆ ಅತ್ಯಾಚಾರ-ಕೊಲೆ ಪ್ರಕರಣ ಸಂಬಂಧ ಕೋಲ್ಕತ್ತ ಪೊಲೀಸ್ ಕಮಿಷನರ್, ಆರೋಗ್ಯ ಇಲಾಖೆ ಕಾರ್ಯದರ್ಶಿ, ಆರೋಗ್ಯ ಸೇವೆಗಳ ನಿರ್ದೇಶಕ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರ ವಜಾಕ್ಕೂ ಆಗ್ರಹಿಸಿದ್ದಾರೆ.

ಮುಂಬೈನಲ್ಲಿ ಚಾಕೊಲೇಟ್‌ನಿಂದ ಶ್ರೀ ಗಣೇಶ ಮೂರ್ತಿಯನ್ನು ಬಲು ಭಿನ್ನ ರೀತಿಯಲ್ಲಿ ನಿರ್ಮಿಸಲಾಗಿದ್ದು, ಗಣೇಶ ಪೆಂಡಾಲ್ ಜನರ ಆಕರ್ಷಣೆಯ ಕೇಂದ್ರವಾಗಿದೆ. ಅದೂ ಅರ್ಧನಾರೀಶ್ವರ ಪರಿಕಲ್ಪನೆಯಲ್ಲೇ ಗಣೇಶ ಮೂರ್ತಿಯನ್ನು ರಚಿಸಲಾಗಿದೆ. ಹಸಿರು ಸೀರೆ ಧರಿಸಿದ ಸ್ತ್ರೀ ಮೂರ್ತಿ ಬಲಭಾಗದಲ್ಲಿದ್ದರೆ, ಎಡಬದಿಯಲ್ಲಿ ಮಣ್ಣಿನ ಸಹಜ ವರ್ಣದಲ್ಲಿ ಮಹಾರಾಷ್ಟ್ರ ಪೇಟ ಧರಿಸಿದ ಗಣೇಶ ಮೂರ್ತಿ ನಿರ್ಮಿಸಲಾಗಿದೆ. ಮುಂಬೈನವರೇ ಆದ ರಿತು ರಾಠೋಡ್ ಎಂಬ ಮಹಿಳೆಯೇ ಈ ಚಾಕೊಲೇಟ್ ಗಣಪತಿ ಮೂರ್ತಿ ರಚಿಸಿದವರು. ಡ್ರೈಫ್ರೂಟ್ಸ್, ಮಿಲ್ಲೆಟ್ಸ್, ಬೆಲ್ಲ ಮತ್ತು ಚಾಕೊಲೇಟ್ ಬಳಸಿ ತಯಾರಿಸಿರುವ 30 ಕಿಲೋ ತೂಕದ ಈ ಬೆನಕನನ್ನು 90 ಲೀಟರ್ ಹಾಲಿನಲ್ಲಿ ವಿಸರ್ಜಿಸಲಾಗುವುದು. ಬಳಿಕ ಪ್ರಸಾದ ರೂಪದಲ್ಲಿ ಭಕ್ತರಿಗೆ ಹಂಚಲಾಗುವುದೆಂದು ಸಂಘಟಕರು ತಿಳಿಸಿದ್ದಾರೆ.

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಕಛೇರಿ-2ನೇ ಮಹಡಿ , ಐ.ಸಿ.ಎಂ.ಸಿ.ಸಿ ಕಟ್ಟಡ, ಎಸ್.ಪಿ. ಕಛೇರಿ ಆವರಣ, ಬಿ,ಹೆಚ್,ರಸ್ತೆ, ತುಮಕೂರು-572 103
Office-2nd Floor, Integrated Command and Control Center, SP Office Premises, B.H Road, Tumkuru - 572103 Phone : 0816-2278190
E-mail : smartcitytumakuru@gmail.com. website: www.smartcitytumakuru.in. CIN:U74999KA2017PLC099774
ಸಂ:ತುಸ್ಮಾಸಿ/ಟೆಂಡರ್/ಸಿಆರ್/16/2024-25 ದಿ: 09.09.2024

ಮರು-ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಕರ್ನಾಟಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಮರು-ಟೆಂಡರ್ ಆಹ್ವಾನಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ-ಪೋರ್ಟಲ್ www.kppp.karnataka.gov.in - ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816-2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: 1. ತುಮಕೂರು ಮಹಾನಗರ ಪಾಲಿಕೆಗೆ 1.3cum ಕ್ಕಿಂತ ಹೆಚ್ಚಿನ ಸಾಮರ್ಥ್ಯದ 25 ತ್ರಿಚಕ್ರ ಟಿಪ್ಪರ್ ವಾಹನಗಳ ಸರಬರಾಜು. **ಕಾಮಗಾರಿಯ ಮೊತ್ತ ರೂ.0.85 ಕೋಟಿಗಳು. ಇಎಂಡಿ ರೂ.1,70,000.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17.09.2024.** ಟೆಂಡರ್ ತೆರೆಯುವ ದಿನಾಂಕ: **18.09.2024.** 2. ತುಮಕೂರು ಮಹಾನಗರ ಪಾಲಿಕೆಗೆ 14cum ಕ್ಕಿಂತ ಹೆಚ್ಚಿನ ಸಾಮರ್ಥ್ಯದ 1 ಕಾಂಪ್ಯಾಕ್ಟರ್ ಸರಬರಾಜು. **ಕಾಮಗಾರಿಯ ಮೊತ್ತ ರೂ.0.36 ಕೋಟಿಗಳು. ಇಎಂಡಿ ರೂ.72,00,000.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **17.09.2024.** ಟೆಂಡರ್ ತೆರೆಯುವ ದಿನಾಂಕ: **18.09.2024.**

ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.
DIPR/TUM/317/KSMCA/2024-25

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ,ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 02, ಬಾಗಲಕೋಟೆ-587102.ದೂರವಾಣಿ ಸಂಖ್ಯೆ: 08354-297054
Office of the Executive Engineer,Bagalkote Town Development Authority,Division No: 02, Bagalkote-587102.E-mail: eebtda2@gmail.com
ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂ/ಬಾ.ಪ.ಅ.ಪ್ರಾ/ವಿ-2/ಪಿಬಿ-01/ಟೆ.ಪ್ರ.ಸಂಖ್ಯೆ-03/2024-25/1618
ದಿನಾಂಕ: 03.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-02.
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇಂಡೆಂಟ್ ನಂ: 48, 64, 61, ಹಾಗೂ 56 ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: **19.09.2024** ಸಂಜೆ 05.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: **21.09.2024** ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **23.09.2024** ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: 08354-297054 ಸಂಪರ್ಕಿಸಬಹುದಾಗಿದೆ.
ಸೂಚನೆ: ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು/ ಮಾರ್ಪಾಡುಗಳನ್ನು "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ: 02, ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟ/223/ದೇಶಪಾಂಡೆಪಬ್ಲಿಸಿಟಿ/2024-25

ಚುನಾವಣೆ ಕಾಶ್ಮೀರಕ್ಕೂ ಕಾಂಗ್ರೆಸ್‌ನ 5 ಗ್ಯಾರಂಟಿ

ಶ್ರೀನಗರ: ಜಮ್ಮು-ಕಾಶ್ಮೀರ ಚುನಾವಣೆ ಗೆಲ್ಲುವುದಕ್ಕೂ ಕಾಂಗ್ರೆಸ್ ಪಂಚ ಗ್ಯಾರಂಟಿಗಳ ಮಂತ್ರ ಜಪಿಸಲಾರಂಭಿಸಿದೆ.

ಜಮ್ಮು-ಕಾಶ್ಮೀರ ಚುನಾವಣೆಗಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಅನಂತನಾಗ್ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರ ವೇಳೇ ಪ್ರಣಾಳಿಕೆ ಬಿಡುಗಡೆ ಮಾಡಿದರು. ಕರ್ನಾಟಕ, ತೆಲಂಗಾಣ ದಲ್ಲಿನ ವಿಧಾನಸಭೆ ಚುನಾವಣೆಗೆ ಮಾಡಿದಂತೆಯೇ ಕಾಶ್ಮೀರ ಮತದಾರ ರನ್ನು ಒಲಿಸಿಕೊಳ್ಳಲು ಕಾಂಗ್ರೆಸ್ ಪಕ್ಷ 5 ಗ್ಯಾರಂಟಿಗಳನ್ನು ಘೋಷಿಸಿದೆ. ಅದರಲ್ಲಿ 3 ಗ್ಯಾರಂಟಿಗಳು ಪ್ರಮುಖ ವಾಗಿವೆ. ಪ್ರತಿ ಕುಟುಂಬಕ್ಕೆ 25 ಲಕ್ಷ ರು.ಗಳ ಆರೋಗ್ಯ ವಿಮೆ, ಕುಟುಂಬದ ಒಡತಿಗೆ ಮಾಸಿಕ 3 ಸಾವಿರ ರು.(ಭಾಗ್ಯ ಲಕ್ಷ್ಮಿ ರೀತಿ), ಮಹಿಳೆಯರಿಗೆ ಬಡ್ಡಿ ರಹಿತವಾಗಿ 5 ಲಕ್ಷ ರು.ವರೆಗೂ ಸಾಲ ನೀಡುವ ಭರವಸೆ ನೀಡಲಾಗಿದೆ. ಕಾಶ್ಮೀರ ಯುವಜ ನರಿಗೆ 5 ಲಕ್ಷ ಉದ್ಯೋಗ ಸೃಷ್ಟಿಯ ಭರವಸೆಯನ್ನು ಬಿಜೆಪಿ ನೀಡಿರುವುದನ್ನು ಖರ್ಗೆ ಇದೇ ವೇಳೆ, ಟೀಕಿಸಿದರು. ಅವೆಲ್ಲಾ ಸುಳ್ಳು ಭರವಸೆಗಳು ಎಂದರು. ಜಮ್ಮು- ಕಾಶ್ಮೀರದಲ್ಲಿ ಸೆ.18, ಸೆ.25, ಅ.1ರಂದು ಮತದಾ ನವಾಗಲಿದ್ದು, ಅ.8ರಂದು ಫಲಿತಾಂಶ ಪ್ರಕಟವಾಗಲಿದೆ.

ರಾಹುಲ್ ಹೇಳಿಕೆ ಆಧರಿಸಿ ಖಲಿಸ್ತಾನ ಬೇಡಿಕೆ

ವಾಷಿಂಗ್ಟನ್: ನಿಷೇಧಿತ ಖಲಿಸ್ತಾನ್ ಪರ ಉಗ್ರ ಸಂಘಟನೆ ಸಿಖ್ಸ್ ಫಾರ್ ಜಸ್ಟಿಸ್(ಎಸ್‌ಎಫ್‌ಜೆ) ಮುಖಂಡ ಗುರುಪತ್ವಂತ್ ಸಿಂಗ್ ಪನ್ನೂನ್, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅಮೆರಿಕದಲ್ಲಿ ನೀಡಿದ ಹೇಳಿಕೆ ಆಧರಿಸಿ ಪ್ರತ್ಯೇಕ ಖಲಿಸ್ತಾನ್ ರಾಷ್ಟ್ರಕ್ಕೆ ಬೇಡಿಕೆ ಇಟ್ಟಿದ್ದಾನೆ. ಈ ಸಂಬಂಧ ಬುಧವಾರ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿದ್ದಾನೆ. ವಾಷಿಂಗ್ಟನ್ ಡಿಸಿ ನಗರದಲ್ಲಿ ಅನೇಕ ಖಲಿಸ್ತಾನ್ ಪರ ಸಿಖ್ಖರು ಹಾಜರಿದ್ದ ಸಭೆಯಲ್ಲೇ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ 'ಎಸ್‌ಎಫ್‌ಜೆ'ಯ ಜಾಗತಿಕ ಖಲಿಸ್ತಾನ್ ಜನಾಭಿಪ್ರಾಯ ಸಂಗ್ರಹ ಅಭಿಯಾನವನ್ನು ಸಮರ್ಥಿಸಿ ಹೇಳಿಕೆ ನೀಡಿದ್ದಾರೆ. ಭಾರತದಲ್ಲಿ ಸಿಖ್ಖರಿಗೆ ಪೇಟ, ಕಡ ಧರಿಸಿ ಗುರುದ್ವಾರಕ್ಕೆ ಹೋಗಲು ಅನುಮತಿ ನೀಡಲಾಗುವುದೇ ಎಂಬ ಬಗ್ಗೆ ಯೋಚಿಸಬೇಕಿದೆ ಎಂದು ರಾಹುಲ್ ಹೇಳಿದ್ದಾರೆ. ಈ ಮಾತು ದಿಟ್ಟತನದಿಂದ ಕೂಡಿದೆ. ಅಲ್ಲದೇ ಭಾರತದಲ್ಲಿನ ಸಿಖ್ಖರು 1947ರಿಂದ ಎದುರಿಸುತ್ತಿರುವ ಸಮಸ್ಯೆಯನ್ನು ತಿಳಿಸಿಕೊಟ್ಟಿದೆ. ಸಿಖ್ಖರ ಖಲಿಸ್ತಾನ ರಾಷ್ಟ್ರಕ್ಕೆ ಪಂಜಾಬ್ ಜನರ ಅಭಿಪ್ರಾಯ ಸಂಗ್ರಹವನ್ನು ದೃಢೀಕರಿಸುತ್ತದೆ ಎಂದು ಪನ್ನೂನ್ ಪ್ರತಿಪಾದಿಸಿದ್ದಾನೆ.

ಕಾಶ್ಮೀರದ ಕಥುವಾದಲ್ಲಿ 3 ಉಗ್ರರ ಅಂತ್ಯ

ಶ್ರೀನಗರ: ಜಮ್ಮು-ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಭಾರತೀಯ ಸೇನಾಪಡೆ, ಜಮ್ಮು-ಕಾಶ್ಮೀರ ಪೊಲೀಸರು ಬುಧವಾರ ಜಂಟಿ ಕಾರ್ಯಾಚರಣೆ ನಡೆಸಿ 3 ಉಗ್ರರನ್ನು ಕೊಂದಿದ್ದಾರೆ. ಈ ಪೈಕಿ ಉಗ್ರರ 2 ಮೃತದೇಹ ಪತ್ತೆಯಾಗಿವೆ ಎಂದು ಸೇನೆಯ ಮೂಲಗಳು ತಿಳಿಸಿವೆ. ಉಗ್ರರು ಭಾರೀ ಪ್ರಮಾಣದ ಶಸ್ತ್ರಾಸ್ತ್ರ ಹೊಂದಿದ್ದರು. ಉಗ್ರರ ವಿರುದ್ಧದ ಕಾರ್ಯಾಚರಣೆ ಮುಂದುವರಿದಿದೆ. ಮತ್ತೊಂದು ಘಟನೆಯಲ್ಲಿ ಬುಧವಾರ ಮುಂಜಾನೆ ಅಖ್ನೂರ್ ಸೆಕ್ಟಾರ್‌ನಲ್ಲಿ ಪಾಕಿಸ್ತಾನಿ ಪಡೆಗಳು ಅಪ್ರಚೋದಿತವಾಗಿ ಗುಂಡು ಹಾರಿಸಿದ್ದರಿಂದ ಭಾರತದ ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಯೋಧರೊಬ್ಬರು ಗಾಯಗೊಂಡರು.

ಸಮಾಚಾರ ಸಣ್ಣದಲ್ಲ

ಡಾ.ನವೀನ್ ಭಟ್ ಕಿದ್ವಾಯಿ ಆಡಳಿತಾಧಿಕಾರಿ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಸುಧಾರಣೆಗೆ ಐಎಎಸ್ ಅಧಿಕಾರಿ ಡಾ.ನವೀನ್ ಭಟ್ ವೈ ಅವರನ್ನು ಆಡಳಿತಾಧಿಕಾರಿ ಆಗಿ ನೇಮಕ ಮಾಡಲಾಗಿದೆ. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಸಮರ್ಥ ಆಡಳಿತ ವ್ಯವಸ್ಥೆ ಸರಿಪಡಿಸಲು ರಾಜ್ಯ ಸರಕಾರ ಮುಂದಾ ಗಿದೆ.

ಆದ್ದರಿಂದ ಸಾರ್ವಜನಿಕ ಮತ್ತು ಆಡಳಿತ ಹಿತದೃಷ್ಟಿಯಿಂದ ಕರ್ನಾಟಕ ಸೊಸೈಟಿ ನೋಂದಣಿ ಕಾಯ್ದೆ, 1960 ರ ಕಲಂ 27 ಎ ರಲ್ಲಿ ಸರಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಡಾ.ನವೀನ್ ಭಟ್ ವೈ, (ಐಎಎಸ್), ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಅವರನ್ನು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಆಡಳಿತಾಧಿ ಕಾರಿಯಾಗಿ ನೇಮಕ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಡಾ.ನವೀನ್ ಭಟ್ ಬುಧವಾರದಿಂದ ಕಿದ್ವಾಯಿ ಸಂಸ್ಥೆಗೆ ಸೇವೆ ಪ್ರಾರಂಭಿಸಿದ್ದಾರೆ.

ಫೋನ್ ಇನ್ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವತಿಯಿಂದ ಸೆ.13ರಂದು ಬೆಳಗ್ಗೆ 9:30ರಿಂದ 10:30ರವರೆಗೆ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ಫೋನ್ ಇನ್ ಕಾರ್ಯಕ್ರಮದಲ್ಲಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಭಾಗವಹಿಸ ಲಿದ್ದು, ಸಾರ್ವಜನಿಕರು ತಮ್ಮ ವಲಯ, ಪ್ರದೇಶಗ ಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾ ಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊ ಳ್ಳಬಹುದು. ಸಾರ್ವಜನಿಕರು 080- 22945119 ಮತ್ತು 080-22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್ ಆರ್ ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಲು ಕೋರಿದೆ.

110 ಗ್ರಾಮಕ್ಕೆ 10 ದಿನದಲ್ಲಿ ನೀರಿನ ಸೌಲಭ್ಯ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ಕಾವೇರಿ 5ನೇ ಹಂತದ ಪೈಪ್ ಲೈನ್‌ಗಳು ಮತ್ತು ಸರಬರಾಜು ವ್ಯವಸ್ಥೆಯ ಪರೀಕ್ಷೆಯನ್ನು ಪೂರ್ಣ ಗೊಳಿಸಿದ್ದು, ಯೋಜನೆಗೆ ಅನುಮೋದನೆ ಕೋರಿ ಸರಕಾರಕ್ಕೆ ಅಂತಿಮ ವರದಿ ಸಲ್ಲಿಸಿದೆ. ಕಾವೇರಿ ನೀರು ಈಗಾಗಲೇ ಗೊಟ್ಟಿಗೆರೆ ನೆಲಮಟ್ಟದ ಜಲಾಶ ಯಕ್ಕೆ (ಜಿಎಲ್‌ಆರ್) ಅಧಿಕೃತ ಕಾರ್ಯಾರಂಭಕ್ಕೆ ಮುಂಚಿತವಾಗಿ ತಲುಪಿದೆ. ಮುಂದಿನ 10 ದಿನಗಳಲ್ಲಿ 110 ಹಳ್ಳಿಗಳ ನಿವಾಸಿಗಳ ಮನೆಗಳಿಗೆ ಕಾವೇರಿ ನೀರು ತಲುಪಲು ಪ್ರಾರಂಭಿ ಸಬಹುದು. ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದೇವೆ ಮತ್ತು ಕಾರ್ಯಾರಂಭ ಪ್ರಕ್ರಿಯೆಯನ್ನು ಪ್ರಾರಂಭಿಸಲು ಅಧಿಕೃತ ದೃಢೀಕರಣಕ್ಕಾಗಿ ಕಾಯುತ್ತಿದ್ದೇವೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ ರಾಮ್ ಪ್ರಸಾತ್ ಮನೋಹರ್ ಹೇಳಿದರು.

70 ವರ್ಷ ಮೇಲ್ಪಟ್ಟ ಎಲ್ಲರಿಗೂ ಆಯುಷ್ಮಾನ್

ಬೆಂಗಳೂರು/ದೆಹಲಿ: ಪ್ರಧಾನಿ ನರೇಂದ್ರ ಮೋದಿ ಸರಕಾರ ಆಯುಷ್ಮಾನ್ ಭಾರತ್ ವ್ಯಾಪ್ತಿ ವಿಸ್ತರಿಸಿದೆ. ಇದರಿಂದ 70 ವರ್ಷವಾದವರಿಗೆ 5 ಲಕ್ಷ ರು. ವರೆಗೂ ಉಚಿತ ಚಿಕಿತ್ಸೆ ದೊರೆಯಲಿದೆ. ಸಚಿವ ಸಂಪುಟ ಸಭೆ ನಂತರ ಕೇಂದ್ರ ವಾರ್ತಾ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿ ನಡೆಸಿ, 70 ವರ್ಷ ಮೇಲ್ಪಟ್ಟ ಹಿರಿಯರನ್ನು ಆಯುಷ್ಮಾನ್ ಭಾರತ್ ಪಿಎಂ ಜನ ಆರೋಗ್ಯ ಯೋಜನೆಗೆ ಸೇರಿಸಲು ಸರಕಾರ ನಿರ್ಧರಿ ಸಿದೆ ಎಂದರು. 70 ಮತ್ತು ಅದಕ್ಕಿಂತ ಹೆಚ್ಚಿನ ವಯ ಸ್ಸಿನ ಎಲ್ಲಾ ಹಿರಿಯ ನಾಗರಿಕರಿಗೆ ಅವರ ಆದಾಯ ವನ್ನು ಲೆಕ್ಕಿಸದೆ 5 ಲಕ್ಷ ರೂ. ಆರೋಗ್ಯ ರಕ್ಷಣೆಯನ್ನು ಕೇಂದ್ರ ಸಚಿವ ಸಂಪುಟ ಅನುಮೋ ದಿಸಿದೆ. ಈ ಉಚಿತ ಚಿಕಿತ್ಸಾ ಸೌಲಭ್ಯಕ್ಕೆ 4.5 ಕೋಟಿ ಕುಟುಂಬ ಗಳ 6 ಕೋಟಿ ವೃದ್ಧರು ಸೇರಲಿದ್ದಾರೆ **'ಪಿಎಂಜಿಎಸ್ ವೈ'ಗೆ** 70,125 **ಕೋಟಿ:** 2024-29ರ ಅವಧಿ ಯಲ್ಲಿನ 5 ಹಣಕಾಸು ವರ್ಷಗಳಲ್ಲಿ ದೇಶದ ವಿವಿ ಧೆಡೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ) ಅನುಷ್ಠಾನಕ್ಕಾಗಿ 75,125 ಕೋಟಿ ರು. ಮೊತ್ತದ ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದರು.

21 ಹಗರಣಗಳ ಬಗ್ಗೆ ತನಿಖೆ, ಕ್ರಮಕ್ಕೆ ಸಂಬಂಧಿಸಿ ವರದಿ ನೀಡಲು ಸಂಪುಟ ಉಪಸಮಿತಿ | ಸಮಿತಿ ವರದಿಗಳನ್ನು ಪರಿಶೀಲಿಸಿದ ಬಳಿಕ ಸೂಕ್ತ ಕ್ರಮ: ಸಿದ್ದರಾಮಯ್ಯ

ದ್ವೇಷದ ರಾಜಕಾರಣವಿಲ್ಲ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ಸರಕಾರ ಯಾರ ವಿರುದ್ಧವೂ ದ್ವೇಷ ರಾಜಕೀಯ ಮಾಡುತ್ತಿಲ್ಲ. ಅವರೇ ನನ್ನ ವಿರುದ್ಧ ದ್ವೇಷದ ರಾಜಕೀಯ ಮಾಡುತ್ತಿದೆ. ನಮ್ಮ ಸರಕಾರ ತಪ್ಪು ಮಾಡಿರುವವರಿಗೆ ಮಾತ್ರ ಶಿಕ್ಷೆ ಕೊಡುವ ಕೆಲಸ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಬಿಜೆಪಿ ಸರಕಾರದಲ್ಲಿ ಸುಮಾರು 21 ಹಗರಣಗಳು ನಡೆದಿದ್ದು, ಈ ಎಲ್ಲ ಹಗರಣಗಳ ತನಿಖೆಗೆ ತ್ವರಿತವಾಗಿ ಚಾಲನೆ ನೀಡಲು ಹಾಗೂ ಈ ಬಗ್ಗೆ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಸಲಹೆ ನೀಡಲು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಈ ಸಮಿತಿಯಲ್ಲಿ ಸಚಿವ ಕೃಷ್ಣಬೈರೇಗೌಡ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್ ಹಾಗೂ ಎಚ್.ಕೆ.ಪಾಟೀಲ್ ರವರು ಸದಸ್ಯರಾಗಿದ್ದಾರೆ. ಸಮಿತಿಯು ವರದಿಯನ್ನು ನೀಡಲು ಒಂದರಿಂದ ಎರಡು ತಿಂಗಳ ಅವಧಿಯನ್ನು ನೀಡಲಾಗಿದೆ. ಪಿಎಸ್‌ಐ ಹಗರಣ, 40 ಪರ್ಸೆಂಟ್ ಕಮಿಷನ್, ಕೋವಿಡ್ 19, ಬಿಟ್ ಕಾಯಿನ್ ಹಗರಣಗಳಿಗೆ ಮಾತ್ರ ತನಿಖಾ ಆಯೋಗಗಳನ್ನು ರಚಿಸಲಾಗಿದೆ. ಅದರಲ್ಲಿ ಕೋವಿಡ್ 19 ಬಗ್ಗೆ ತನಿಖಾ ಆಯೋಗ ಪೂರ್ವಭಾವಿ ವರದಿಯನ್ನು ನೀಡಿದ್ದು, ಅಧಿಕಾರಿಗಳ ಪರಿಶೀಲನೆಯ ನಂತರ ಈ ಬಗ್ಗೆ ಸಚಿವ ಸಂಪುಟದಲ್ಲಿ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು ಎಂದರು.

ಬಿಜೆಪಿಯವರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ಸರಕಾರವನ್ನು ಅಸ್ಥಿರಗೊಳಿಸಲು, ಸರ್ಕಾರದ ಕಾರ್ಯಕ್ರಮಗಳು ಅನುಷ್ಠಾನ ಆಗಬಾರದು ಎಂಬ ಉದ್ದೇಶದಿಂದ ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಇದೆಲ್ಲವನ್ನು ಬದಿಗೊತ್ತಿ ನಾವು ಕೆಲಸ ಮಾಡಬೇಕಿದೆ. ಮುಖ್ಯಮಂತ್ರಿ ಸ್ಥಾನದ ಚರ್ಚೆಯ ಬಗ್ಗೆ ಶಿಸ್ತಿನ ಕ್ರಮದ ಕುರಿತು ಪಕ್ಷದ ಅಧ್ಯಕ್ಷರು ಕಡಿವಾಣ ಹಾಕುತ್ತಾರೆ. ಅಧ್ಯಕ್ಷರು ಅಮೆರಿಕ ಪ್ರವಾಸದಲ್ಲಿದ್ದು, ಬಂದನಂತರ ಈ ಬಗ್ಗೆ ಗಮನ ಹರಿಸುತ್ತಾರೆ.

- ಡಾ.ಜಿ ಪರಮೇಶ್ವರ್, ಗೃಹ ಸಚಿವ

ವಾರದೊಳಗೆ ಸಮಿತಿ ಸಭೆ : ಪರಂ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಾತನಾಡಿ, ತನಿಖಾ ಸಂಸ್ಥೆಗಳ ಹಂತದಲ್ಲಿ ವಿವಿಧ ಹಗರಣಗಳ ತನಿಖೆ ಬಾಕಿಯಿರುವ ಪ್ರಕರಣಗಳ ಪ್ರಗತಿ ಪರಿಶೀಲನೆಗೆ ವಾರದೊಳಗೆ ಸಮಿತಿ ಸಭೆ ನಡೆಸುತ್ತೇನೆ. ಎಲ್ಲ ಹಗರಣಗಳ ಪ್ರಕರಣಗಳನ್ನು ಗುರುತಿಸಿದ್ದೇವೆ. ಅವುಗಳ ತನಿಖೆ ಯಾವ ಹಂತದಲ್ಲಿವೆ ಎಂಬುದನ್ನು ಪರಿಶೀಲಿಸಿ, ವರದಿಯನ್ನು ಸಚಿವಸಂಪುಟಕ್ಕೆ ಸಲ್ಲಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ತ್ವರಿತಗತಿಯಲ್ಲಿ ತನಿಖೆ ನಡೆಯಬೇಕು ಎಂಬ ಉದ್ದೇಶದಿಂದ ಸಮಿತಿ ರಚನೆ ಮಾಡಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಬಾಕಿಯಿರುವ ಪ್ರಕರಣಗಳನ್ನು ಪ್ರಗತಿ ಪರಿಶೀಲನೆ ವೇಳೆ ಗಮನಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ವಿಚಾರ ಕ್ಯಾಬಿನೆಟ್ ಗಮನಕ್ಕೆ ಬಂದ ಬಳಿಕ ತ್ವರಿತಗತಿಯಲ್ಲಿ ಮಾಡಲು ಸಮಿತಿ ರಚಿಸಿದ್ದಾರೆ ಎಂದು ಹೇಳಿದರು. ಬಿಜೆಪಿ ಅವರು ಏನಾದರು ಹೇಳಿಕೊಳ್ಳಲಿ. ನಮ್ಮನ್ನು ಟೀಕೆ ಮಾಡುವುದಕ್ಕೆ, ಸಲಹೆ ನೀಡಲು, ತಪ್ಪು ಮಾಡಿದಾಗ ಹೇಳುವುದಕ್ಕೆ ಅವರಿಗೆ ಜವಾಬ್ದಾರಿಗಳಿರುತ್ತವೆ. ಆಡಳಿತ ನಡೆಸುವರಿಗೂ ಅವರಿಗೆ ಆದಂತಹ ಜವಾಬ್ದಾರಿಗಳಿರುತ್ತವೆ ಎಂದರು.

ತಪ್ಪಿತಸ್ಥರ ವಿರುದ್ಧ ಕ್ರಮ ಖಂಡಿತ

ಸರಕಾರ ತನಿಖೆಗೆ ಸೂಚಿಸುವ ಮೂಲಕ ದ್ವೇಷದ ರಾಜಕೀಯ ಮಾಡುತ್ತಿದೆ ಎಂದು ಬಿಜೆಪಿ ಆರೋಪಿಸುತ್ತಿದೆ. ಆದರೆ ನೈಜವಾಗಿ ಹೇಳಬೇಕೆಂದರೆ, ಬಿಜೆಪಿಯವರು ನನ್ನ ಮೇಲೆ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ನಮ್ಮ ಸರಕಾರ ದ್ವೇಷದ ರಾಜಕಾರಣ ಮಾಡುವುದಿಲ್ಲ. ಆದರೆ ತಪ್ಪು ಮಾಡಿದವರ ಮೇಲೆ ಖಂಡಿತ ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ತಿಳಿಸಿದರು.

ವೈಟ್ ಟಾಪಿಂಗ್ ಕಾಮಗಾರಿ

ಗೋವಿಂದರಾಜನಗರ ಕ್ಷೇತ್ರದಲ್ಲಿ ವೈಟ್‌ಟಾಪಿಂಗ್ ಕಾಮಗಾರಿಗೆ ಚಾಲನೆ ನೀಡಿದ ಶಾಸಕ ಪ್ರಿಯಕೃಷ್ಣ, ಸ್ಥಳೀಯ ಕಾಂಗ್ರೆಸ್ ಮುಖಂಡರು ಇದ್ದರು.

ಬೆಂಗಳೂರು: ರಸ್ತೆಗಳ ಅಭಿವೃದ್ಧಿಗೆ ನೂರು ಕೋಟಿ ಅನುದಾನ ದೊರೆಯಲಿದ್ದು, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರವನ್ನು ರಾಜ್ಯಕ್ಕೆ ಮಾದರಿ ಕ್ಷೇತ್ರವಾಗಿಸಲು ಪ್ರಾಮಾಣಿಕವಾಗಿ ಶ್ರಮವಹಿಸಲಾಗುವುದು ಎಂದು ಶಾಸಕ ಪ್ರಿಯಕೃಷ್ಣ ತಿಳಿಸಿದ್ದಾರೆ.

ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಒಂದು ಕಿಲೋಮೀಟರ್ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ 12 ಕೋಟಿ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ವೈಟ್ ಟಾಪಿಂಗ್ ರಸ್ತೆ ಮೂರು ತಿಂಗಳಲ್ಲಿ ಪೂರ್ಣಗೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಹಂತಹಂತವಾಗಿ ಕ್ಷೇತ್ರದ ವಿವಿಧೆಡೆ ವೈಟ್ ಟಾಪಿಂಗ್ ರಸ್ತೆ ನಿರ್ಮಿಸಲು ಯೋಜನೆ ರೂಪಿಸಲಾಗಿದೆ ಎಂದರು.

ವೈಟ್‌ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿ ನಡೆಸುವ ರಸ್ತೆಗಳ ಅಕ್ಕಪಕ್ಕದ ಕಟ್ಟಡ ಮಾಲೀಕರು ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ಸಂಪರ್ಕ ಪಡೆಯಲು ಅಥವಾ ಯಾವುದೇ ಉದ್ದೇಶಕ್ಕಾಗಿ ವೈಟ್‌ಟಾಪಿಂಗ್ ರಸ್ತೆ ನಿರ್ಮಾಣ ನಂತರ ಅಗೆಯಲು ಅವಕಾಶವಿರುವುದಿಲ್ಲ. ಸ್ಥಳೀಯ ನಿವಾಸಿಗಳಿಗೆ ಅಡಚಣೆ ಆಗಬಾರದೆಂಬ ಸದುದ್ದೇಶದಿಂದ ಈಗಾಗಲೇ ನಾಗರಿಕರಿಗೆ ಮಾಹಿತಿ ರವಾನಿಸಿದ್ದು, ಈ ಬಗ್ಗೆ ಸಾರ್ವಜನಿಕರು ಯಾವುದೇ ಕುಂದು ಕೊರತೆ, ಸಲಹೆಗಳಿದ್ದರೆ ಶಾಸಕರ ಕಚೇರಿ ಸಂಪರ್ಕಿಸಲು ಮನವಿ ಮಾಡಿದ್ದಾರೆ.

ಮೆಟ್ರೋ ಹೊಸ ಮಾರ್ಗದಲ್ಲೂ ಕೇಳಲಿರುವ ಅಪರ್ಣಾ ಧ್ವನಿ

ಬೆಂಗಳೂರು: ನಮ್ಮ ಮೆಟ್ರೋದ ಮುಂದಿನ ಎರಡು ಹೊಸ ಮೆಟ್ರೋ ಮಾರ್ಗಗಳಲ್ಲಿಯೂ ಅಪರ್ಣಾ ಅವರ ಧ್ವನಿಯಲ್ಲಿ ಉದ್ಘೋಷ ಕೇಳಲಿದೆ ಎಂದು ಮೆಟ್ರೋ ಮೂಲಗಳು ತಿಳಿಸಿದೆ.

ಕನ್ನಡತಿ ಅಪರ್ಣಾ ಅಗಲಿ ಎರಡು ತಿಂಗಳು ಕಳೆದಿದ್ದು, ಮೆಟ್ರೋದ ಹೊಸ ಮಾರ್ಗಗಳಿಗೆ ಮುಂದಿನ ಧ್ವನಿ ಯಾರು ಎನ್ನುವ ಪ್ರಶ್ನೆಗೆ ಮೂಲಗಳು ಉತ್ತರಿಸಿದ್ದು, ಲೋಕಾರ್ಪಣೆಯಾಗಲು ಸಿದ್ಧವಿರುವ ಮೆಟ್ರೋ ಮಾರ್ಗಗಳಿಗೂ ಅಪರ್ಣಾ ಅವರ ದಯವಿಟ್ಟು ಗಮನಿಸಿ ಎನ್ನುವ ಧ್ವನಿ ಕೇಳಿಬರಲಿದೆ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅಪರ್ಣಾ ಅವರು ಜುಲೈ-11ರಂದು ಕ್ಯಾನ್ಸರ್‌ನಿಂದ ವಿಧಿವಶರಾದರು. ಆದರೆ ಈ ನೋವಿನ ನಡುವೆಯೇ ಏಪ್ರಿಲ್, ಮೇನಲ್ಲಿಯೇ ಅಪರ್ಣಾ ಮೆಟ್ರೋಗೆ ಹಿನ್ನೆಲೆ ಧ್ವನಿಯನ್ನು ನೀಡಿದ್ದು, ಮುಂದಿನ ಎರಡು ಹೊಸ ಮೆಟ್ರೋ ಮಾರ್ಗಗಳಲ್ಲಿ ಅಪರ್ಣಾ ಅವರ ಪ್ರಯಾಣಿಕರೇ ದಯವಿಟ್ಟು ಗಮನಿಸಿ ಎನ್ನುವ ಧ್ವನಿ ಕೇಳಿಸಲಿದೆ. ಈ ಹಿಂದೆ ಮೆಟ್ರೋ ಪ್ರಯಾಣಿಕರು ಈಗಿರುವ ಹಸಿರು ಮತ್ತು ನೇರಳೆ ಮಾರ್ಗದಲ್ಲಿ ಅಪರ್ಣಾ ಧ್ವನಿ ಮುಂದುವರಿಸಬೇಕು ಮತ್ತು ಹೊಸ ಮಾರ್ಗಗಳಿಗೂ ಅವರ ಧ್ವನಿಯೇ ಹಾಕಬೇಕು ಎಂದು ಒತ್ತಾಯ ಮಾಡಿದ್ದರು. ಆದರೆ, ಮೆಟ್ರೋ ಅಧಿಕಾರಿಗಳು ಹಳೆಯ ಮಾರ್ಗದಲ್ಲಿ ಅಪರ್ಣಾ ಧ್ವನಿ ಮುಂದುವರಿಸಲಾಗುವುದು ಆದರೆ ಹೊಸ ಮಾರ್ಗಗಳಿಗೆ ಆ ಧ್ವನಿಯನ್ನು ಮುಂದುವರಿಸುವುದು ಕಷ್ಟ. ಅವರ ಧ್ವನಿ ನಮ್ಮ ಬಳಿ ಇಲ್ಲ ಎಂದು ಹೇಳಿದ್ದರು. ಆದರೆ, ಏಪ್ರಿಲ್- ಮೇ ನಲ್ಲೇ ತಾಂತ್ರಿಕ ತಂಡವು ಅಪರ್ಣಾ ಅವರ ಧ್ವನಿಯನ್ನು ರೆಕಾರ್ಡಿಂಗ್ ಮಾಡಿಕೊಂಡಿದ್ದು, ಅದನ್ನೇ ಹಾಕಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹಸಿರು ಮಾರ್ಗದಲ್ಲಿ ಬರುವ ನಾಗಸಂದ್ರ ಟು ಮಾದಾವರದ ಮೂರು ಸ್ಟೇಷನ್ ಗಳು, ಹಳದಿಮಾರ್ಗದ ಆರ್‌ವಿ ರೋಡ್ ಟು ಬೊಮ್ಮಸಂದ್ರದ 16 ಮೆಟ್ರೋ ಸ್ಟೇಷನ್ ಗಳಲ್ಲೂ ಅಪರ್ಣಾ ಧ್ವನಿಯನ್ನು ಹಾಕಲು ಮೆಟ್ರೋ ಅಧಿಕಾರಿಗಳು ತೀರ್ಮಾನಿಸಿದ್ದಾರೆ.

ಇನ್ನೆರಡು ದಿನ ಹಲವೆಡೆ ಮಳೆಯ ಮುನ್ಸೂಚನೆ

ಬೆಂಗಳೂರು: ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆಗಳಲ್ಲಿ ಮುಂದಿನ 48 ಗಂಟೆಯಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ರಾಜ್ಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಲಿದ್ದು, ಗಂಟೆಗೆ 30-40 ಕಿ.ಮೀ. ವೇಗದಲ್ಲಿ ಗಾಳಿ ಜತೆ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಮಳೆಯಾಗುವ ಸಂಭವವಿದೆ. ಇನ್ನು ತಾಪಮಾನ ಗರಿಷ್ಠ 30 ಡಿಗ್ರಿ, ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ಇರಲಿದೆ. ಕರ್ನಾಟಕದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಸೆ.14ರವರೆಗೆ ಹೆಚ್ಚಿನ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೋಲಾರ, ಮಂಡ್ಯ, ಮೈಸೂರು, ರಾಮನಗರದಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡಕವಿದ ವಾತಾವರಣವಿದ್ದು, ತುಂತುರು ಮಳೆಯಾಗುತ್ತಿದೆ. ಎಚ್‌ಎಎಲ್‌ನಲ್ಲಿ 29.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ, 20.0 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ, ನಗರದಲ್ಲಿ 29.6 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ, 20.8 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ, ಕೆಐಎಎಲ್‌ನಲ್ಲಿ 29.6ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ, ಜಿಕೆವಿಕೆಯಲ್ಲಿ 29.2ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ, 20.0 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ ದಾಖಲಾಗಿದೆ.

ಎಸ್‌ಸಿಡಿಸಿಸಿ ಬ್ಯಾಂಕ್‌ಗೆ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿ

ಬೆಂಗಳೂರು: ಸಹಕಾರಿ ರಂಗದಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಬ್ಯಾಂಕಿಂಗ್ ಸೇವೆಯನ್ನು ನೀಡುತ್ತಾ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿ ರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನ ಪ್ರಥಮ ಪ್ರಶಸ್ತಿ ಲಭಿಸಿದೆ.

ಅಪೆಕ್ಸ್ ಬ್ಯಾಂಕ್ ರಾಜ್ಯದ ಅತ್ಯುತ್ತಮ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಪ್ರಥಮ ಪ್ರಶಸ್ತಿಯನ್ನು ನೀಡುತ್ತಿದ್ದು ಈ ಪ್ರತಿಷ್ಠಿತ ಪ್ರಶಸ್ತಿಗೆ ಎಸ್‌ಸಿಡಿಸಿಸಿ ಬ್ಯಾಂಕ್ ಭಾಜನವಾಗಿದೆ. ನಿರಂತರ ಸಮಾಜಮುಖಿ ಸೇವೆಗಳೊಂದಿಗೆ ತನ್ನ ಗ್ರಾಹಕರಿಗೆ ಸಂತೃಪ್ತ ಸೇವೆಯನ್ನು ನೀಡುತ್ತಿರುವ ಎಸ್‌ಸಿಡಿಸಿಸಿ ಬ್ಯಾಂಕ್ 2022-23ನೇ ಸಾಲಿನಲ್ಲಿ ತೋರಿದ ಸರ್ವಾಂಗೀಣ ಪ್ರಗತಿಯೊಂದಿಗೆ ಲೆಕ್ಕ ಪರಿಶೋಧನೆಯಲ್ಲಿ 'ಎ 'ವರ್ಗವನ್ನು ಪಡೆದು ಪ್ರಥಮ ಪ್ರಶಸ್ತಿಗೆ ಆಯ್ಕೆಗೊಂಡಿದೆ. ಬ್ಯಾಂಕ್ ವರದಿ ವರ್ಷದಲ್ಲಿ ನೀಡಿದ ಎಲ್ಲ ಕೃಷಿ ಸಾಲಗಳು ಶೇಕಡಾ ನೂರರಷ್ಟು ಮರುಪಾವತಿಯನ್ನು ಕಂಡಿದ್ದು, ಇಂತಹ ಸಾಧನೆಯನ್ನು ಬ್ಯಾಂಕ್ ಕಳೆದ 29 ವರ್ಷಗಳಿಂದ ನಿರಂತರವಾಗಿ ಮಾಡಿರುವುದು ರಾಷ್ಟ್ರೀಯ ದಾಖಲೆಯಾಗಿದೆ.

ಸೇವೆಯೇ ಮುಖ್ಯ ಧ್ಯೇಯ: ಸೇವೆಯನ್ನೇ ಮುಖ್ಯಧ್ಯೇಯವನ್ನಾಗಿಟ್ಟುಕೊಂಡು ಯಶಸ್ಸಿನ ಪಥದಲ್ಲಿ ಎಸ್‌ಸಿಡಿಸಿಸಿ ಬ್ಯಾಂಕ್ ಮುನ್ನಡೆಯನ್ನು ಕಾಣುತ್ತಿದ್ದು ವರದಿ ವರ್ಷದಲ್ಲಿ ಎಸ್ ಸಿಡಿಸಿಸಿ ಬ್ಯಾಂಕಿಗೆ ಬ್ಯಾಂಕೋ ಬ್ಲೂ ರಿಬ್ಬನ್ ಪ್ರಶಸ್ತಿ ಹಾಗೂ ಕೇಂದ್ರ ಸರಕಾರದ ಅಟಲ್ ಪಿಂಚಣಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ 2 ಬಾರಿ ಎಪಿವೈ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಶುಕ್ರವಾರದಂದು ಬೆಂಗಳೂರಿನಲ್ಲಿ ನಡೆಯುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಎಸ್ ಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಅಪೆಕ್ಸ್ ಬ್ಯಾಂಕ್ ಪ್ರಶಸ್ತಿಯನ್ನು ಸ್ವೀಕರಿಸಲಿರುವರು ಎಂದು ಬ್ಯಾಂಕಿನ ಪ್ರಕಟಣೆ ತಿಳಿಸಿದೆ.

ರಾಜರಾಜೇಶ್ವರಿ ನಗರದಲ್ಲಿ ಜೆಟ್ ಪ್ಯಾಚರ್ ಯಂತ್ರ ಬಳಕೆ

ರಸ್ತೆಗುಂಡಿ ಮುಚ್ಚಲು ಬಿಬಿಎಂಪಿ ಹೊಸ ಯಂತ್ರ

ಬೆಂಗಳೂರು: ನಗರದ ರಸ್ತೆಗಳಲ್ಲಿರುವ ಗುಂಡಿಗಳಿಂದಾಗಿ ರಸ್ತೆ ಅಪಘಾತವಾಗಿ ಅನೇಕ ಮಂದಿ ಪ್ರಾಣ ಬಿಟ್ಟಿದ್ದು, ರಸ್ತೆ ಗುಂಡಿಯ ದುರಸ್ತಿಗಾಗಿ ಪಾಲಿಕೆಯು ಯಂತ್ರವನ್ನು ತರಿಸಿ ರಸ್ತೆಗುಂಡಿ ಮುಚ್ಚುವ ಕಾರ್ಯ ಆರಂಭಿಸಿದ್ದಾರೆ.

ರಸ್ತೆಗುಂಡಿ ದುರಸ್ತಿಗಾಗಿ ಪ್ರತಿ ವರ್ಷ ಕೋಟ್ಯಂತರ ರುಪಾಯಿ ವ್ಯಯಿಸುವ ಬಿಬಿಎಂಪಿ ಈ ಬಾರಿ ಯಂತ್ರವನ್ನು ನಗರಕ್ಕೆ ತಂದಿದ್ದಾರೆ. ಈ ಯಂತ್ರದ ಸಹಾಯದಿಂದಲೇ ರಸ್ತೆಗುಂಡಿ ಮುಚ್ಚುವ ಕಾರ್ಯ ಆರಂಭಿಸಿದ್ದಾರೆ. ಆರ್‌ಆರ್ ನಗರ ವಲಯ ಜಂಟಿ ಆಯುಕ್ತ ಅಜಯ್ ಮಾಹಿತಿ ನೀಡಿ, ರಸ್ತೆಗುಂಡಿ ದುರಸ್ತಿ ಮಾಡುವ 'ಜೆಟ್ ಪ್ಯಾಚರ್' ಯಂತ್ರ ತರಲಾಗಿದೆ. ಇದರ ಸಹಾಯದಿಂದ ಬಿಬಿಎಂಪಿ ವ್ಯಾಪ್ತಿಯ ಆರ್‌ಆರ್ ನಗರ ವಲಯದಲ್ಲಿ ಪ್ರಾಯೋಗಿಕವಾಗಿ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಮಾಹಿತಿ ನೀಡಿದರು.

ಯಂತ್ರದಿಂದ ರಸ್ತೆಗುಂಡಿ ಮುಚ್ಚುವ ಕಾರ್ಯಕ್ಕೆ ವೇಗ : ಆರ್ ಆರ್ ನಗರ ವಲಯ ಪಂತರಪಾಳ್ಯ-ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಬಳಿ ರಸ್ತೆ ಗುಂಡಿ ಪರಿಶೀಲನೆಯ ಬಳಿಕ ಅವರು ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದರು. ಬೆಂಗಳೂರಿನ ಆರ್ ಆರ್ ನಗರ ವಲಯ ವ್ಯಾಪ್ತಿಯಲ್ಲಿ 'ಜೆಟ್ ಪ್ಯಾಚರ್' ಯಂತ್ರದ ಮೂಲಕ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ನಡೆಯುತ್ತಿದೆ. ಇದರಿಂದ ತ್ವರಿತಗತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಅನುಕೂಲವಾಗುತ್ತಿದೆ. ಜೆಟ್ ಪ್ಯಾಚರ್ ಯಂತ್ರದ ಮೂಲಕ ಪ್ರಮುಖ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಶೀಘ್ರವಾಗಿಯಲ್ಲಿ ಮುಚ್ಚಬಹುದಾಗಿದೆ. ಈ ಯಂತ್ರದಲ್ಲಿ ಒಂದು ಬಾರಿಗೆ 150 ರಿಂದ 180 ಚ.ಮೀ ಅಗಲದ ರಸ್ತೆ ಗುಂಡಿಗಳನ್ನು ಮುಚ್ಚಬಹುದಾಗಿದೆ. ರಸ್ತೆ ಗುಂಡಿ ಮುಚ್ಚಿದ ಬೆನ್ನಲ್ಲೆ ದೊಡ್ಡ ದೊಡ್ಡ ವಾಹನಗಳು ಇದರ ಮೇಲೆ ಸರಾಗವಾಗಿ ಓಡಾಡಬಹುದಾಗಿದೆ ಎಂದರು.

ಆರ್‌ಆರ್ ನಗರ ವಲಯದಲ್ಲಿ ಸಂಪೂರ್ಣ ರಸ್ತೆ ಹಾಳಾಗಿರುವುದನ್ನು ಹೊರತುಪಡಿಸಿ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಗಲು-ರಾತ್ರಿ ರಸ್ತೆಗುಂಡಿಗಳನ್ನು ಮುಚ್ಚಲಾಗುತ್ತಿದ್ದು, ಕಾಲಮಿತಿಯೊಳಗಾಗಿ ಗುಂಡಿಗಳನ್ನು ದುರಸ್ತಿಗೊಳಿಸಲಾಗುವುದು ಎಂದು ವಿವರಿಸಿದರು.

- ವಿಧಾನಸಭಾ ಕ್ಷೇತ್ರಗಳ ಸಂಖ್ಯೆ: 02
- ವಾರ್ಡ್ ಗಳ ಸಂಖ್ಯೆ: 20
- ರಾಜರಾಜೇಶ್ವರಿ ನಗರ ವಲಯದ ಒಟ್ಟು ವಿಸ್ತೀರ್ಣ: 112.01 ಚ.ಕಿ.ಮೀ
- ವಾರ್ಡ್ ರಸ್ತೆಗಳ ಸಂಖ್ಯೆ: 11367
- ವಾರ್ಡ್ ರಸ್ತೆಗಳ ಉದ್ದ: 1829.44 ಕಿ.ಮೀ
- ಪ್ರಮುಖ ರಸ್ತೆಗಳ ಸಂಖ್ಯೆ: 44
- ಪ್ರಮುಖ ರಸ್ತೆಗಳ ಉದ್ದ: 216.45
- ವಲಯ ವ್ಯಾಪ್ತಿಯ ರಸ್ತೆಗಳ ಒಟ್ಟು ಉದ್ದ: 2045.89 ಕಿ.ಮೀ

ಒಟ್ಟು 2443 ರಸ್ತೆಗುಂಡಿ ಗುರುತಿಸಿದ್ದ ಪಾಲಿಕೆ ವಲಯ ವ್ಯಾಪ್ತಿಯಲ್ಲಿ ಬರುವ 20 ವಾರ್ಡ್‌ಗಳಲ್ಲಿ ಅಭಿಯಂತರರು 20ನೇ ಮೇ 2024 ರಿಂದ ಇದುವರೆಗೆ 2443 ರಸ್ತೆಗುಂಡಿಗಳನ್ನು ಗುರುತಿಸಿದ್ದಾರೆ. ಅದರಲ್ಲಿ 2408 ರಸ್ತೆಗುಂಡಿಗಳನ್ನು ಈಗಾಗಲೇ ಮುಚ್ಚಲಾಗಿದೆ. 35 ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ. ಇನ್ನೂ ರಸ್ತೆ ಗುಂಡಿ ಗಮನ ತಂತ್ರಾಂಶ ದಲ್ಲಿ ಸಾರ್ವಜನಿಕರಿಂದ 461 ದೂರುಗಳು ದಾಖಲಾಗಿವೆ. ಅದರಲ್ಲಿ 86 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. 302 ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ಭರವಸೆ ನೀಡಿದರು. ರಸ್ತೆ ಗುಂಡಿ ದುರಸ್ತಿ ಸ್ಥಳದಲ್ಲಿ ಮುಖ್ಯ ಅಭಿಯಂತರೆ ಸ್ವಯಂಪ್ರಭಾ, ಕಾರ್ಯಪಾಲಕ ಅಭಿಯಂತರ ಪಾಪರೆಡ್ಡಿ, ಆರಿಫ್ ಸೇರಿದಂತೆ ವಿವಿಧ ಅಧಿಕಾರಿಗಳು ಸ್ಥಳದಲ್ಲಿದ್ದರು.

ಹಿರಿಯ ಸಂಶೋಧಕ ಮತ್ತು ಸಾಹಿತಿ ಎ.ವಿ.ನಾವಡ ಅವರು ಬಿ.ಎಂ.ಶ್ರೀ ಪ್ರತಿಷ್ಠಾನವು ನೀಡುವ ಶ್ರೀಮತಿ ಸಾವಿತ್ರಮ್ಮ, ಪ್ರೊ ಎಂ.ವಿ.ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರಕ್ಕೆ ಭಾಜನರಾಗಿದ್ದು, ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಮಲ್ಲೇಪುರಂ ಜಿ. ವೆಂಕಟೇಶ್, ಶಾಂತರಾಜು, ಪಿ.ವಿ.ನಾರಾಯಣ ಮುಂತಾದವರು ಭಾಗವಹಿಸಿದ್ದರು. ಎಂ.ವಿ.ಸೀತಾರಾಮಯ್ಯ ಅವರ ನಾಲ್ವರು ಪುತ್ರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗಣೇಶ ವಿಸರ್ಜನೆ; ಮಾರ್ಗ ಬದಲು

ಬೆಂಗಳೂರು: ಬೆಂಗಳೂರು ನಗರ ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸೆ.15ರಂದು 100 ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನಾ ಮೆರವಣಿಗೆ ನಡೆಯಲಿದ್ದು, ಪರ್ಯಾಯ ಮಾರ್ಗವನ್ನು ಬಳಸುವಂತೆ ಪ್ರಕಟಣೆ ಹೊರಡಿಸಿದ್ದಾರೆ. ಯಲಹಂಕ ಉಪನಗರ, ಸಿಂಗಪುರ, ಚಿಕ್ಕಬೆಟ್ಟಹಳ್ಳಿ, ದೊಡ್ಡಬೆಟ್ಟಹಳ್ಳಿ ವಿದ್ಯಾರಣ್ಯಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಬೆ. 09 ಗಂಟೆಯಿಂದ ರಾತ್ರಿ 10 ಗಂಟೆವರೆಗೂ ನಡೆಯಲಿದ್ದು, ಬದಲಿ ರಸ್ತೆಗಳ ಮೂಲಕ ಸಂಚಾರ ಮಾರ್ಪಾಡುಗಳನ್ನು ಮಾಡಲು ಯಲಹಂಕ ಸಂಚಾರಿ ಪೊಲೀಸರು ಮುಂದಾಗಿದ್ದಾರೆ. ಮೊದಲನೇ ಮೆರವಣಿಗೆ ಸಂಭ್ರಮ್ ಕಾಲೇಜ್ ಜಂಕ್ಷನ್‌ನಿಂದ ಪ್ರಾರಂಭವಾಗಿ ಅಲ್ಲಾಳಸಂದ್ರ ಕೆರೆಯಲ್ಲಿ ಗಣೇಶ ಮೂರ್ತಿ ಗಳನ್ನು ವಿಸರ್ಜನೆ ಮಾಡುವ ಮೂಲಕ ಅಂತ್ಯಗೊಳ್ಳಲಿದೆ. ಎರಡನೇ ಮೆರವಣಿಗೆ ಸಿಂಗಪುರ ಲೇಔಟ್‌ನಿಂದ ಪ್ರಾರಂಭವಾಗಿ ದೊಡ್ಡಬೊಮ್ಮಸಂದ್ರ ಕೆರೆಯಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡುವ ಮೂಲಕ ಅಂತ್ಯಗೊಳ್ಳಲಿದೆ.

ನಯನ ಸಭಾಂಗಣದಲ್ಲಿ ಇಂದ್ರಸುಧಾ ಸಾಂಸ್ಕೃತಿಕ ಕಲಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಚಿಕ್ಕಮಗಳೂರಿನ ಕಂಬಿಹಳ್ಳಿ ಗ್ರಾಮದ ನಿವಾಸಿ ಡಿ.ಎಂ ಧನಲಕ್ಷ್ಮಿಕುಮಾರಿ ಹಾಗೂ ಕೆ ಹುಲಿಯಪ್ಪ ಗೌಡ ಅವರ ಪುತ್ರಿ ಮನಸ್ಮಿತಾರಿಗೆ ರಾಜ್ಯಮಟ್ಟದ ಕರುನಾಡ ನಿಧಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ, ಕನ್ನಡ ಹೋರಾಟಗಾರ ಸಾ.ರಾ ಗೋವಿಂದು, ನೀಲಕಂಠ ಅಡಿಗ, ಕನ್ನಡ ಹೋರಾಟಗಾರ ಮತ್ತು ಸಾಹಿತಿ ಅಮ್ಮಿ ಚಂದ್ರ ಕುಮಾರ್, ಕನ್ನಡ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಶಿವರಾಮೇಗೌಡ ಇದ್ದರು.

ಡಾ.ವಿ.ಕೆ.ಆತ್ರೆ, ಡಾ.ಎಂ.ಆರ್.ದೊರೆಸ್ವಾಮಿ, ಎಸ್.ರುದ್ರೇಗೌಡರಿಗೆ ಗೌರವ ಫೆಲೋಶಿಪ್ ಪ್ರದಾನ

2047ಕ್ಕೆ ಭಾರತ ಸೂಪರ್ ಪವರ್ ಆಗುವತ್ತ ದೃಢ ಹೆಜ್ಜೆ

ಬೆಂಗಳೂರು: 2047ಕ್ಕೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾ ಗುವ ಗುರಿಯತ್ತ ಭಾರತ ಹೆಜ್ಜೆ ಹಾಕುತ್ತಿದ್ದು, ಗುರಿ ಸಾಧನೆಗೆ ಭಾರತ ಆರ್ಥಿಕ ಸದೃಢತೆ, ಸ್ವಾವಲಂಬಿ ರಾಷ್ಟ್ರ, ಜ್ಞಾನ ಕೇಂದ್ರವಾಗಬೇಕು ಎಂದು ಪದ್ಮವಿಭೂಷಣ ಡಾ.ವಿ.ಕೆ.ಆತ್ರೆ ಅಭಿಪ್ರಾಯಪಟ್ಟರು.

ಕರ್ನಾಟಕ ಅಸೋಸಿಯೇಷನ್ ಫಾರ್ ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ ಮತ್ತು ಬೆಂಗಳೂರು ವಿವಿ ವಿಜ್ಞಾನ ವೇದಿಕೆ ಸಹಯೋಗದಲ್ಲಿ ವಿಜ್ಞಾನ, ತಂತ್ರಜ್ಞಾನ,ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಾಗಿ ಪದ್ಮವಿಭೂಷಣ ಡಾ.ವಿ.ಕೆ ಆತ್ರೆ, ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್.ದೊರೆಸ್ವಾಮಿ ಮತ್ತು ಕೈಗಾರಿಕೋದ್ಯಮಿ ಎಸ್.ರುದ್ರೇಗೌಡರವರಿಗೆ ಗೌರವ ಫೆಲೋಶಿಪ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಗೌರವ ಫೆಲೋಶಿಪ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅತ್ರೆ, ಭಾರತ ಜ್ಞಾನದ ವಿಶ್ವಗುರುವಾಗಲು ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಿಂದ ಮಾತ್ರ ಸಾಧ್ಯ. ಭಾರತ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದರೆ ಸೂಪರ್ ಪವರ್ ರಾಷ್ಟ್ರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಸಾಧಾರಣ ವ್ಯಕ್ತಿಗಳು ಅಸಾಧಾರಣ ಕಾರ್ಯಗಳನ್ನು ಸಾಧಿಸಬಹುದು. ವಿಶ್ವೇಶರಯ್ಯ, ಸಿ.ವಿ.ರಾಮನ್‌ರಂತ ಅಸಾಮಾನ್ಯ ವ್ಯಕ್ತಿಗಳಿಂದ ಮಾತ್ರ ಸದೃಢ ರಾಷ್ಟ್ರ ನಿರ್ಮಾ ಣವಾಗುವುದಿಲ್ಲ. ಸಣ್ಣ ಕಾಲೇಜೊಂದರ ಅತಿ ಸಾಮಾನ್ಯ ವಿದ್ಯಾರ್ಥಿ ತನ್ನ ಕರ್ತವ್ಯ, ಗುರಿಗಳನ್ನು ಅರಿತು ಕಾರ್ಯ ನಿರ್ವಹಿಸಿದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ಸತತ ಪರಿಶ್ರಮ, ಸಮಸ್ಯೆ ಬಗೆಹರಿಸುವ ಬುದ್ದಿವಂತಿಕೆ, ಚಾಕಚಕ್ಯತೆ, ಕೊಟ್ಟ ಕೆಲಸ ಯಶಸ್ವಿಯಾಗಿಸುವ ತಂತ್ರ ಅರಿತು ಬಿಟ್ಟರೆ ಸಾಮಾನ್ಯರು ಅಸಮಾನ್ಯರಾಗಬಹುದು ಎಂದರು. ಭಾರತದ ಮುಂದಿನ 2 ದಶಕಗಳು ಅತಿ ನಿರ್ಣಾಯಕವಾಗಿದೆ. ಶಿಕ್ಷಣ, ವಿಜ್ಞಾನ, ತಂತ್ರಜ್ಞಾನಗಳತ್ತ ಗಮನಹರಿಸಲು ಸಾಧ್ಯವಾಗದೇ ಅನ್ನಕ್ಕಾಗಿ ನೆರೆರಾಷ್ಟ್ರಗಳತ್ತ ಅವಲಂಬಿಸುವ ಸ್ಥಿತಿ ಇತ್ತು. ಆದರೆ ಇಂದು ಭಾರತ ಬದಲಾಗಿದ್ದು, ಸಾವಿರಾರು ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದೆ. ಸಂಶೋಧನೆ ,ಆವಿಷ್ಕಾರಗಳಲ್ಲಿ ನಿರತವಾಗಿದೆ. ಭಾರತ ಚಂದ್ರನ ಅಂಗಳದಲ್ಲಿ ಕಾಲೂರಿ ಸಾಧನೆ ಮೆರೆದಿದೆ ಎಂದರು.

ಕುಲಪತಿ ಡಾ.ಜಯಕರ ಎಸ್ ಎಂ, ಕೆಎಎಎಸ್ ಅಧ್ಯಕ್ಷ ಡಾ.ಕೆ.ಸಿದ್ದಪ್ಪ, ಡಾ.ಅಶೋಕ್ ಡಿ ಹಂಜಗಿ, ಪ್ರೊ.ಬಿ.ಸಿ.ಪ್ರಭಾಕರ್, ಪ್ರೊ.ಎನ್.ನಾಗಯ್ಯ ಇದ್ದರು.

ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಾಗಿ ಡಾ.ವಿ.ಕೆ ಆತ್ರೆ, ಪಿಇಎಸ್ ವಿವಿ ಕುಲಾಧಿಪತಿ ಡಾ.ಎಂ. ಆರ್.ದೊರೆಸ್ವಾಮಿ ಮತ್ತು ಕೈಗಾರಿಕೋದ್ಯಮಿ ಎಸ್.ರುದ್ರೇಗೌಡರಿಗೆ ಗೌರವ ಫೆಲೋಶಿಪ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಜವಾಬ್ದಾರಿ ಹೆಚ್ಚಿಸಿದೆ

ಗೌರವ ಫೆಲೋಶಿಪ್ ಸ್ವೀಕರಿಸಿದ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಡಾ.ಎಂ.ಆರ್.ದೊರೆಸ್ವಾಮಿ ಮಾತನಾಡಿ, ಈ ಗೌರವ, ಹೆಮ್ಮೆ ತಂದಿದೆ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ. ಅನೇಕ ದಶಕಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿದ್ದು,ಶಿಕ್ಷಣ ಕ್ಷೇತ್ರದಲ್ಲಿನ ಬದಲಾವಣೆಗೆ ಶ್ರಮಿಸಿರುವೆ. ಪಿಇಎಸ್ ವಿವಿ ವತಿಯಿಂದ 1600 ಸರಕಾರಿ ಶಾಲೆಗಳ ಮೂಲಸೌಕರ್ಯ ಸೇರಿದಂತೆ ಸಂಪೂರ್ಣ ಅಭಿವೃದ್ಧಿ ಮಾಡಿದ್ದೇವೆ. ಕುಲಪತಿಗಳ ಹುದ್ದೆ ಮಾರಾಟಕ್ಕಲ್ಲ, ಕುಲಪತಿಗಳ ಆಯ್ಕೆ ಮೆರಿಟ್ ಆಧಾರವಾಗಿರಬೇಕು ಎಂದು ಸರಕಾರಕ್ಕೆ ಪ್ರಸ್ತಾಪ ಸಲ್ಲಿಸಿದೆ. ಕುಲಪತಿ ಸಮರ್ಪಕವಾಗಿದ್ದರೆ ವಿಶ್ವವಿದ್ಯಾಲಯ ಗಟ್ಟಿಯಾಗಿರಲಿದೆ ಎಂದು ಪ್ರತಿಪಾದಿಸಿದೆ. ಈಗಲೂ ಪಿಇಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ,ಕೌಶಲ್ಯ ತರಬೇತಿ,ವಿದ್ಯಾರ್ಥಿ-ಶಿಕ್ಷಕರ ಸಂಬಂಧ ಸುಧಾರಣೆಗಳಿಗೆ ಆದ್ಯತೆ ನೀಡಿದ್ದೇವೆ ಎಂದರು.

ಚಿತ್ತ ವಿಹಾರ

ಕನಸುಗಳು ನನಸಾಗಲಿ

ಈ ಬದುಕು ನಮಗೆ ದೇವರು ಕೊಟ್ಟ ದೊಡ್ಡ ವರ. ಬದುಕಿನ ಅಖಾಡದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಕನಸುಗಳು ಇರಲೇಬೇಕು. ಅಕಸ್ಮಾತ್ ಇರದೇ ಹೋದರೆ ಇಡೀ ಬದುಕೇ ಕತ್ತಲಮಯ. ಕನಸುಗಳೊಂದಿಗಿನ ಸಾಂಗತ್ಯವೇ ನಮ್ಮ ನಿರೀಕ್ಷೆಗೂ ಮೀರಿದ ಇನ್ನೊಂದು ಮಟ್ಟಕ್ಕೆ ನಮ್ಮನ್ನು ಕರೆದೊಯ್ಯುತ್ತವೆ. ಕನಸೆಂದರೆ ಒಬ್ಬ ವ್ಯಕ್ತಿಯು ನಿದ್ರೆಯಲ್ಲಿ ಅನುಭವಿಸುವ ಕಥೆ. ಅದೊಂದು ಕಲ್ಪನೆಯ ಅರಮನೆ. ಕನಸುಗಳನ್ನು ಕಾಣಬೇಕು. ಅವು ಸಣ್ಣದಿರಲಿ, ದೊಡ್ಡದಾಗಿರಲಿ ಕನಸುಗಳನ್ನು ಕಾಣದಿರುವುದೇ ದೊಡ್ಡ ಅಪರಾಧ. ಕೆಲವು ಕನಸುಗಳು ಮುದವನ್ನು ನೀಡಿದರೆ, ಇನ್ನೂ ಕೆಲವು ಕನಸುಗಳು ಕಹಿ ಅನುಭವಗಳನ್ನು ಕೊಡುತ್ತವೆ. ಕೆಲವು ಕನಸುಗಳು ನನಸಾದರೆ, ಮತ್ತೆ ಕೆಲವು ಕನಸುಗಳು ಕನಸುಗಳಾಗಿಯೇ ಉಳಿಯುತ್ತವೆ. ಕನಸುಗಳ ನನಸಾಗಿಸಲು ಹಗಲಿರುಳು ಸತತ ಪ್ರಯತ್ನ ಬೇಕು. ಕನಸುಗಳಿದ್ದರೆ ಪ್ರಯತ್ನ ತಾನೇ ತಾನಾಗಿ ನಮ್ಮೊಳಗೆ ಜನ್ಮ ಪಡೆಯುತ್ತದೆ. ಕಂಡ ಕನಸುಗಳು ನನಸಾದಾಗಲೇ ಬದುಕಿಗೊಂದು ಅರ್ಥ,ಬೆಲೆ.

ಬದುಕು ಹಾಗೂ ಕನಸುಗಳು ಪರಸ್ಪರ ಪೂರಕ. ಬದುಕು ಎನ್ನುವುದು ಅನೇಕ ಕನಸುಗಳ ಸಮಾಗಮ. ನಮ್ಮ ಬರಿದಾದ ಬದುಕಿಗೆ ಬಣ್ಣಗಳನ್ನು ತುಂಬುವುದೇ ನಾವು ಕಾಣುವ ಕನಸುಗಳು. ಕನಸುಗಳೇ ನಮ್ಮ ಬದುಕನ್ನು ಸುಂದರಗೊಳಿಸುವ ಸುಗಂಧಿತ ಪುಷ್ಪಗಳು. ಬದುಕೆಂದರೆ ನಮ್ಮನ್ನು ನಾವು ಕಂಡುಕೊಳ್ಳುವುದಲ್ಲ, ನಮ್ಮನ್ನು ನಾವು ರೂಪಿಸಿಕೊಳ್ಳುವುದು. ಕನಸುಗಳಿಗೆ ಲೇಪನ ನೀಡಿದಾಗಲೇ ಬದುಕು ರೂಪಗೊಳ್ಳುವುದು. ಕನಸುಗಳೇ ನಮ್ಮ ಕತ್ತಲ ಬದುಕಿನ ದಾರಿಯ ದೀವಟಿಗೆ. ಒಮ್ಮೊಮ್ಮೆ ಬೆಳಕೇ ಇಲ್ಲದ ದಾರಿಯಲ್ಲಿ ನಾವು ನಡೆಯಬಹುದು. ಆದರೆ ಕನಸೇ ಇಲ್ಲದ ದಾರಿಯಲ್ಲಿ ನಡೆಯುವುದಾದರೂ ಹೇಗೆ? ಅದೆಂದೂ ಅಸಾಧ್ಯದ ಕೆಲಸ. ಕನಸುಗಳೇ ತುಂಬಿರುವ ಕಣ್ಣಿಗೆ ಬದುಕು ಹಾಗೂ ಪ್ರಪಂಚ ಯಾವಾಗಲೂ ಸುಂದರವಾಗಿಯೇ ಕಾಣಿಸುತ್ತದೆ. ಎ.ಪಿ.ಜೆ ಅಬ್ದುಲ್ ಕಲಾಂ ಅವರು 'ಕನಸೆಂದರೆ ನಾವು ನಿದ್ರಿಸಿದಾಗ ಕಾಣುವ ಸಂಗತಿಗಳಲ್ಲ. ಕನಸುಗಳೆಂದರೆ ನಮಗೆ ಯಾವುದು ಸರಿಯಾಗಿ ನಿದ್ರೆ ಮಾಡಲು ಬಿಡದೇ ಕಾಡುತ್ತದೆಯೋ ಅದುವೇ ನಿಜವಾದ ಕನಸು'ಎಂದು ಹೇಳಿದ್ದಾರೆ. ನಾವೆಲ್ಲರೂ ಕನಸು ಕಾಣಬೇಕು, ಆ ಕನಸನ್ನು ನನಸಾಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅದೇ ಈ ಬದುಕಿನ ತಿರುಳು.

• ರಂಗನಾಥ್ ಗುಡಿಮನಿ

ಮಡದಿಯ ತೂಕ ಇಳಿಸುವುದು ಹೇಗೆ?

• ಕರ್ನಲ್ ಮಹೇಶ್ ಹೊಸಮನಿ (ವಿಶ್ರಾಂತ)

ನಾವು 1988 ಆಗಸ್ಟ್‌ನಲ್ಲಿ ಮದುವೆಯಾದಾಗ ನನ್ನವಳ ತೂಕ ಕೇವಲ 38 ಕೆ.ಜಿ. ನಾನಾಗ ಹೊಸದಾಗಿ ಸೇನೆ ಸೇರಿದ್ದೆ. ಉತ್ತರ ಭಾರತದವರನ್ನು ಹೋಲಿಸಿದರೆ ನಮ್ಮ ಮೈಕಟ್ಟು ಬಹಳ ಚಿಕ್ಕದು. ನಾನು ಸೇನಾ ದೃಷ್ಟಿಯಿಂದ ತಕ್ಕ ಎತ್ತರವಿದ್ದರೂ ಬೇರೆಯ ಸಹೋದ್ಯೋಗಿಗಳಿಗೆ ಹೋಲಿಸಿದರೆ ಸ್ವಲ್ಪ ಕಡಿಮೆಯೇ. ನನ್ನ ತೂಕ 58 ಕೆ.ಜಿ. ಇತ್ತು. ನನಗಿಂತ ನನ್ನವಳು ನಾಲ್ಕೈದು ಅಂಗುಲ ಕಡಿಮೆ. ಹಾಗಾಗಿ ನಾನು ಮದುವೆಯಾಗಿ ಯೂನಿಟ್ಟಿಗೆ ಹೋದಾಗ ಎಲ್ಲರೂ 'ಏನಪ್ಪ, ಬಾಲ್ಯವಿವಾಹ ಮಾಡಿಕೊಂಡಿದಿಯೇನೋ' ಅಂತ ಕೇಳಿದ್ದುಂಟು!

ನಂತರ ನಾನು 1989 ನಲ್ಲಿ ಮಹಾರಾಷ್ಟ್ರದ ಅಹ್ಮದ್ ನಗರಕ್ಕೆ ಒಂದು ತರಬೇತಿ ಶಿಬಿರಕ್ಕೆ ಹೋದಾಗ ನನ್ನವಳನ್ನು ಕರೆದುಕೊಂಡು ಹೋದೆ. ಅದು ನಮ್ಮ ಪಾಲಿಗೆ ವಿಸ್ತರಿತ ಮಧುಚಂದ್ರದ ಹಾಗಿತ್ತು. ಆಗ ಇವಳ ತೂಕ ಏರಲಾರಂಭಿಸಿತು. ಆದರೆ ಮೊದಲ ಬಸಿರು ಧರಿಸಿದಾಗ ಮತ್ತೆ ತೂಕ ಇಳಿಯಿತು. ಮನೆಯವರೆಲ್ಲ ಹೊಟ್ಟೆಯಲ್ಲಿ ಮಗು ಇದೆಯೋ ಇಲ್ಲವೋ ಎನ್ನುವ ರೀತಿಯಲ್ಲಿ ತೆಳ್ಳಗೆ ಕಂಡಳು. ಆ ಸಮಯದಲ್ಲಿ ಎರಡು ವರ್ಷಗಳ ಹಿಂದೆ ಹ್ಯಾಂಗ್ ಗ್ಲೈಡಿಂಗ್ ನಲ್ಲಿ ಕಾಲುಮುರಿದುಕೊಂಡು ಕಾಲಿನಲ್ಲಿ ಸ್ಟೀಲ್ ರಾಡ್ ಹಾಕಿಸಿಕೊಂಡದ್ದನ್ನು ತೆಗೆಸಿಕೊಳ್ಳುವ ಸಲುವಾಗಿ ನಾನು ಲಕ್ನೋದ ಸೇನಾ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ನನ್ನವಳ ಹೆರಿಗೆಯ ದಿನಗಳು ಹತ್ತಿರವಾಗುತ್ತಿದ್ದುದರಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಬಂದೆ. 1990 ಆಗಸ್ಟ್ ನಲ್ಲಿ ರಾಯಚೂರಿನ ಸರಕಾರಿ ಆಸ್ಪತ್ರೆಯಲ್ಲಿ ನಮ್ಮ ಜ್ಯೇಷ್ಠಪುತ್ರಿಯ ಆಗಮನವಾಯಿತು.

ನನಗೆ ಲೇಹ್ ಲಡಾಖ್ ಪ್ರದೇಶಕ್ಕೆ ವರ್ಗವಾಯಿತು. ಬಹಳ ಚಳಿಯ ಪ್ರದೇಶ. ಚಿಕ್ಕ ಸಂಸಾರದೊಂದಿಗೆ 1992 ರಿಂದ 1994 ರವರೆಗೆ ಸುಮಾರು ಎರಡು ವರ್ಷಗಳ ಕಾಲವಿದ್ದೆವು. ದೈಹಿಕ ಶ್ರಮ ಕಡಿಮೆ; ಮನೆಗೆಲಸಕ್ಕೆ ಆಳುಕಾಳು; ನಮ್ಮ ತೂಕ ಏರಲಾರಂಭಿಸಿತು. ರಜಕ್ಕೆ ನಾವು ಊರಿಗೆ ಬಂದಾಗ ಎಲ್ಲರೂ 'ಬಾವು ಬೆಕ್ಕುಗಳ ಹಾಗೆ ಆಗಿದ್ದೇವೆ' ಎಂದರು! ಮುಂದಿನ ದಿನಗಳಲ್ಲಿ ವ್ಯಾಯಾಮ ಶಾಲೆಗಳಿಗೆ ಹೋಗಿ ಕಸರತ್ತುಗಳ ಮಾಡುತ್ತ ನಮ್ಮ ತೂಕಗಳನ್ನು ಹಿಡಿದಲ್ಲಿಟ್ಟುಕೊಂಡೆವು. ಆದರೂ ನನ್ನವಳ ಮನಸ್ಸಿನಲ್ಲಿ ತೆಳ್ಳಗಾಗಬೇಕೆಂದು ಆಸೆ ಅಂಕುರಿಸಿತು. ಆಗ ಡಯಟ್ಟುಗಳ ಮೊರೆಹೋದದ್ದಾಯಿತು. ಆದರೂ ಹೆಚ್ಚಿನ ಬದಲಾವಣೆ ಕಾಣಲಿಲ್ಲ.

ನಾನು ಸೇನೆಯಿಂದ 2019 ರಲ್ಲಿ ನಿವೃತ್ತಿಹೊಂದಿದ ಮೇಲೆ ನನ್ನವಳು ತನ್ನ ಮಹಿಳಾ ಮಂಡಳಿಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ತನ್ನ ತೂಕದ ಬಗ್ಗೆ ಹೆಚ್ಚು ಗಮನಕೊಡತೊಡಗಿದಳು. ಪ್ರತಿ ಕಿಟ್ಟಿ ಪಾರ್ಟಿಗೆ ಹೋಗುವ ಮುನ್ನ 'ನೋಡಿ ನನ್ನ ಉಡುಪು ಬಿಗಿಯಾಗುತ್ತಿದೆ' ಅನ್ನುವುದು, ಅಲ್ಲಿಂದ ಬಂದ ಮೇಲೆ ತನಗಿಂತ ಸಣ್ಣ ಆಗಿರುವ ಹೆಂಗಸುಗಳ ವಿಚಾರ ಹೇಳುವುದು - ಹೀಗೆ ದೇಹ ಕರಗಿಸುವ ಯೋಚನೆಯಲ್ಲೇ ಇರಲಾರಂಭಿಸಿದಳು.

ಇದರ ಮಧ್ಯೆ, ಈಕೆಯ ಗೆಳತಿಯೊಬ್ಬಳು ಪರದೇಶಕ್ಕೆ ಮಗಳ ಹೆರಿಗೆಯ ಸಲುವಾಗಿ ಮೂರು ತಿಂಗಳ ಕಾಲ ಹೋಗಿ ಬಂದವಳು ಬಹಳ ತೆಳ್ಳಗಾಗಿದ್ದು ಎಲ್ಲರಿಗೂ ಆಶ್ಚರ್ಯವಾಯಿತಲ್ಲದೆ ಆಕೆಯಿಂದ ತೆಳ್ಳಗಾಗುವ ಟಿಪ್ಸ್ ಕೇಳಲಾರಂಭಿಸಿದರು. ಒಂದೆರಡೇ ತಿಂಗಳಿನಲ್ಲಿ ವಾಕಿಂಗ್ ಹೆಚ್ಚು ಮಾಡುತ್ತಿದ್ದರೂ ಆಕೆ ಪೂರಿ ಉಬ್ಬುವ ರೀತಿಯಲ್ಲಿ ಉಬ್ಬಿಹೋದಳು.

ಸ್ವಲ್ಪ ದಿನಗಳ ನಂತರ ಈಕೆಯೇ ಸಂಜೆಯ ಮೀಟಿಂಗುಗಳ ಕಡಿಮೆ ಮಾಡಿ ನಿಯಮಿತವಾಗಿ ಯೋಗ ತರಗತಿಗೆ ಹೋಗಲಾರಂಭಿಸಿದಳು. ಆಶ್ಚರ್ಯಕರವಾಗಿ ನನ್ನವಳು ತೆಳ್ಳಗಾಗಲಾರಂಭಿಸಿದಳು. ಈಗ ಕಿಟ್ಟಿಪಾರ್ಟಿಗಳಲ್ಲಿ 'ನೀನು ಯಾವ ರೀತಿ ಡಯಟ್ ಮಾಡುತ್ತೀಯ ನನಗೂ ಹೇಳು' ಅಂತ ಆಕೆಯನ್ನು ಕೇಳುತ್ತಿರುತ್ತಾರಂತೆ! ಈಕೆ ಏನೂ ಇಲ್ಲ ನಿಯಮಿತವಾಗಿ ಯೋಗಕ್ಕೆ ಹೋಗುತ್ತಿರುತ್ತೇನೆ ಅನ್ನುತ್ತಾಳಂತೆ. ಈ ರೀತಿ ತೆಳ್ಳಗಾಗಿರುವುದಕ್ಕೆ ಈಕೆಗೆ ಖುಷಿಯೇನೋ ಇದೆ! ಆದರೆ ಬೇಗನೆ ತೆಳ್ಳಗಾಗಿರುವುದರಿಂದ, ಬೇರೇನಾದರೂ ಆರೋಗ್ಯ ಸಮಸ್ಯೆ ಇದೆಯೇ ಎನ್ನುವ ಚಿಂತೆ ಆಕೆಯನ್ನು ಕಾಡಲಾರಂಭಿಸಿದೆ.

ನನ್ನ ಪ್ರಕಾರ ಮನಸ್ಸಿನಲ್ಲಿ ನಕಾರಾತ್ಮಕ ವಿಚಾರಗಳನ್ನು ಬಿಟ್ಟು, ಕೆಲವು ದೈಹಿಕ ವ್ಯಾಯಾಮಗಳ ಜೊತೆಗೆ ಹಸಿವಾದರೆ ಮಾತ್ರ ಊಟ ಮಾಡಿ, ಆಗಾಗ ನೀರು ಕುಡಿಯುತ್ತ, ನಿದ್ದೆ ಬಂದಾಗ ಚಿಂತೆಯಿಲ್ಲದೆ ಕಣ್ಣ ತುಂಬ ನಿದ್ದೆ ಮಾಡುತ್ತಿದ್ದರೆ ಯಾವುದೇ ಡಯಟ್ ಮಾಡುವ ಅವಶ್ಯಕತೆಯೇ ಇರುವುದಿಲ್ಲ; ಅಲ್ಲವೇ?

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ವಿಶ್ವವಾಣಿ @vishwavaninews
ಆರಾಮ
ಬೆಂಗಳೂರು ಗುರುವಾರ 12 | 09 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಜೀವಜಗತ್ತಿನ ಅತ್ಯಪೂರ್ವ ವಿದ್ಯಮಾನ ಎನಿಸಿರುವ 'ದೇಹದಲ್ಲಿ ಬೆಳಕನ್ನು ಉತ್ಪಾದಿಸುವ' ಕ್ರಿಯೆಯನ್ನು ತಮ್ಮ ಬದುಕಿನ ಅಂಗವಾಗಿ ರಿಸಿಕೊಂಡಿರುವ ಮಿಣುಕು ಹುಳಗಳ ಜೀವನದ ಕುರಿತಾದ ಆಕರ್ಷಕ ಛಾಯಾಚಿತ್ರಗಳ ಪ್ರದರ್ಶನವು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಸೆಪ್ಟೆಂಬರ್ 15ರ ತನಕ ನಡೆಯುತ್ತಿದೆ.

ಸಾವಿರಾರು ಮಿಣುಕುಗಳು ಪರಿಸರದ ಬೆಳಕುಗಳು!

• ಶಶಿಧರ ಹಾಲಾಡಿ

ಪೂರ್ಣಚಂದ್ರ ತೇಜಸ್ವಿಯವರ ಜನ್ಮದಿನದ ಅಂಗವಾಗಿ, ಅವರನ್ನು ನೆನಪಿಸಿಕೊಂಡು, ಒಂದು ಅಪರೂಪದ ಛಾಯಾಚಿತ್ರ ಪ್ರದರ್ಶನ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಈಗ ನಡೆಯುತ್ತಿದೆ. ಸೆಪ್ಟೆಂಬರ್ 8 ರಿಂದ 15ರ ತನಕ ಪ್ರತಿದಿನ ನಡೆಯುತ್ತಿರುವ ಈ ಪ್ರದರ್ಶನದ ಮುಖ್ಯ ಥೀಂ 'ಮಿಣುಕು ಹುಳ'ಗಳು! ಆದ್ದರಿಂದಲೇ ಈ ಪ್ರದರ್ಶನದ ಹೆಸರು 'ಮಿಣುಕು ಲೋಕ'.

ಮೂಡಿಗೆರೆಯ ಹ್ಯಾಂಡ್‌ಪೋಸ್ಟ್ ಹತ್ತಿರದ ಕಾಡು ಪ್ರದೇಶದ ಅಂಚಿನಲ್ಲಿ ಮನೆ ಮಾಡಿಕೊಂಡಿದ್ದ ತೇಜಸ್ವಿಯವರು, 1970ರ ದಶಕದಲ್ಲೇ ಅಲ್ಲಿನ ನಿಸರ್ಗ ವ್ಯಾಪಾರಗಳನ್ನು ಕಂಡು ಆಶ್ಚರ್ಯಪಟ್ಟವರು. ಸಂಜೆಯಾದ ತಕ್ಷಣ ಮನೆಯ ಸುತ್ತಲೂ ಹಾರಾಡುವ ಸಾವಿರಾರು ಮಿಣುಕು ಹುಳಗಳನ್ನು ಕಂಡು ಅವರು ಬೆರಗಾಗಿರಲೇಬೇಕು! ಮನೆ ಎದುರಿನ ನೆಲದಲ್ಲೂ ಬೆಳಕು ಬೀರುವ ಮಿಣುಕುಹುಳಗಳು (ಲಾರ್ವಾ, ಹೆಣ್ಣು ಮಿಣುಕು ಹುಳ), ಮನೆ ಸುತ್ತಲಿನ ಆಗಸದಲ್ಲೂ ಹಾರುತ್ತಾ ಬೆಳಕು ಬೀರುವ ಮಿಣುಕು ಹುಳಗಳು (ಗಂಡು)! ತಕ್ಷಣ ಅವರು ಮಾಡಿದ ಕೆಲಸವೆಂದರೆ, ಆ ಮಿಣುಕುಹುಳಗಳ ಫೋಟೋ ತೆಗೆಯುವುದು.

ಆದರೆ ಅದು ಅಷ್ಟು ಸುಲಭದ ಕೆಲಸ ಆಗಿರಲಿಲ್ಲ (ಗಮನಿಸಿ : ಇದು 1970ರ ದಶಕದಲ್ಲಿ). ಏಕೆಂದರೆ, ಫ್ಲಾಶ್ ಹಾಕಿ ಚಿತ್ರಿಸಿದರೆ, ಮಿಣುಕು ಹುಳಗಳ ಬೆಳಕು ಕಾಣಿಸುವುದಿಲ್ಲ. ಸುಮ್ಮನೆ ಕ್ಲಿಕ್ ಮಾಡಿದರೆ, ಕತ್ತಲಿನಲ್ಲಿ ಅವುಗಳ ಚಿತ್ರ ಮೂಡಿಬರುವುದಿಲ್ಲ. ಆದರೆ ತೇಜಸ್ವಿಯವರು ಈ ವಿಚಾರದಲ್ಲಿ ಸಾಹಸಿ : ಲಾಂಗ್ ಎಕ್ಸ್‌ಪೋಶರ್ ಮೊದಲಾದ ಪ್ರಯೋಗಗಳನ್ನು ಮಾಡಿ, ಹತ್ತಾರು ಚಿತ್ರಗಳನ್ನು

ಕ್ಲಿಕ್ ಮಾಡಿ, ಟ್ರಯಲ್ ಅಂಡ್ ಎರರ್ ವಿಧಾನದಲ್ಲಿ, ಕೊನೆಗೂ ಮಿಣುಕು ಹುಳಗಳ ಚಿತ್ರಗಳನ್ನು ಕ್ಲಿಕ್ಕಿಸಿದರು. ಆಗ, ಪ್ರಿಂಟ್ ಹಾಕುವ ಕಾಲ, ಡಿಜಿಟಲ್ ಕ್ಯಾಮೆರಾಗಳು ಇಲ್ಲದ, ರೋಲ್ ಫಿಲಂ ಕಾಲ. ಆ ಕಾಡಿನಲ್ಲಿ ಕುಳಿತು, ಮಿಣುಕು ಹುಳಗಳನ್ನು ಪ್ರಿಂಟ್ ಮೂಲಕ ಛಾಯಾಚಿತ್ರಕ್ಕೆ ಇಳಿಸಲು ಅವರು ಎಷ್ಟು ರೋಲ್ ಖಾಲಿ ಮಾಡಿದ್ದರೋ ಏನೊ!

ತೇಜಸ್ವಿ ಕ್ಲಿಕ್ಕಿಸಿದ ಚಿತ್ರಗಳು

ಮಿಣುಕು ಹುಳಗಳ ಕುರಿತು ತೇಜಸ್ವಿಯವರು ಒಂದು ಲೇಖನವನ್ನೂ ಬರೆದರು; ತುಷಾರ ಮಾಸಪತ್ರಿಕೆಯಲ್ಲಿ ಅದು ಪ್ರಕಟಗೊಂಡಿತು. 'ಮಿಣುಕು ಹುಳಗಳ ಲಭ್ಯ ಬೆಳಕಿನಲ್ಲಿ ಚಿತ್ರಿಸಿದ ಚಿತ್ರಗಳಿವು' ಎಂಬ ವಿವರಣೆಯೊಂದಿಗೆ, ಆ ಬರಹದ ಜತೆಯಲ್ಲಿ ನಾಲ್ಕಾರು ಫೋಟೋಗಳು ಮುದ್ರಣಗೊಂಡಿದ್ದವು. ಅದನ್ನು ಕಂಡು, ಪರಿಸರಾಸಕ್ತರು, ಛಾಯಾಚಿತ್ರಗ್ರಾಹಕರು ಅಕ್ಷರಶಃ ಬೆರಗಾದರು. ಕನ್ನಡ ಪತ್ರಿಕೆಯೊಂದರಲ್ಲಿ ಮೊದಲ ಬಾರಿ ಮಿಣುಕು ಹುಳಗಳ ಫೋಟೋಗಳು, ಅವುಗಳ ಲಭ್ಯ ಬೆಳಕಿನಲ್ಲಿ ಚಿತ್ರಣಗೊಂಡು, ಪ್ರಕಟಗೊಂಡಿದ್ದವು. ಆ ಅಪರೂಪದ ಲೇಖನವು ನಂತರ, ಅವರ 'ಮಾಯೆಯ ಮುಖಗಳು' ಸಂಕಲನದಲ್ಲೂ ಅಡಕಗೊಂಡಿದೆ.

ಆದ್ದರಿಂದಲೇ, ಈಗ ನಡೆಯುತ್ತಿರುವ ಮಿಣುಕುಹುಳಗಳ ಛಾಯಾಚಿತ್ರ ಪ್ರದರ್ಶನಕ್ಕೆ 'ಮಿಣುಕು ಲೋಕ' ಎಂದು ಹೆಸರಿಸಿ, ತೇಜಸ್ವಿಯರ ಫೋಟೋದೊಂದಿಗೆ ಪ್ರದರ್ಶಿಸಿರುವುದು ಅರ್ಥಪೂರ್ಣ. ಚಿತ್ರಕಲಾಪರಿಷತ್‌ನ ನಾಲ್ಕು ವಿಶಾಲ ಹಾಲ್‌ನಲ್ಲಿ, ದೊಡ್ಡ ಗಾತ್ರದ ನೂರಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ಪ್ರದರ್ಶಿಸಲಾಗಿದ್ದು, ಎಲ್ಲಾ ಚಿತ್ರಗಳು ಮಿಣುಕುಹುಳಗಳ ಮಾಯಾಲೋಕವನ್ನೇ ತೆರೆದಿಡುತ್ತವೆ. ಮಿಣುಕು ಹುಳಗಳ ಲಾರ್ವಾ, ಹೆಣ್ಣು ಹುಳ (ಇದು ಹಾರಲಾರದು), ಗಂಡು ಹುಳ (ಇದು ಹಾರಾಡುತ್ತಾ ತನ್ನ ಹಿಂಭಾಗದಲ್ಲಿ ಬೆಳಕು ಮಾಡುತ್ತದೆ), ಮರದ ಮೇಲೆ ಕುಳಿತ ಸಾವಿರಾರು ಮಿಣುಕು ಹುಳಗಳು ನಡೆಸುವ 'ಬೆಳಕಿನ ಪರಿಷೆ' ಇವೆಲ್ಲಾ ವಿದ್ಯಮಾನಗಳನ್ನು ಇಲ್ಲಿನ ಛಾಯಾಚಿತ್ರಗಳು ಸೆರೆಹಿಡಿದಿವೆ. ದೊಡ್ಡಗಾತ್ರದ, ಗುಣಮಟ್ಟದ ವರ್ಣಮಯ ಚಿತ್ರಗಳು, ಮಿಣುಕುಹುಳಗಳ ಜಗತ್ತನ್ನೇ ನಮ್ಮೆದುರು ತೆರೆದಿಡುತ್ತವೆ.

ಒಂದು ಅದ್ಭುತ ಅನುಭವ

ಇಲ್ಲಿನ ಛಾಯಾಚಿತ್ರಗಳನ್ನು ಗಮನವಿಟ್ಟು ನೋಡಿದ ವಿದ್ಯಾರ್ಥಿಯಾಗಲೀ, ಸಾರ್ವಜನಿಕರಾಗಲೀ, ಮಿಣುಕುಹುಳಗಳ

ಜೀವನಕ್ರಮವನ್ನು ತಿಳಿದುಕೊಳ್ಳಲು ಸಾಧ್ಯ, ಮತ್ತು ಅದೊಂದು ಅದ್ಭುತ ಎನಿಸುವ ಅನುಭವ. ಏಕೆಂದರೆ, ಈ ಜಗತ್ತಿನಲ್ಲಿ ಬೆಳಕನ್ನು ಉತ್ಪತ್ತಿ ಮಾಡುವ ಕೆಲವೇ ಕೆಲವು ಜೀವಿಗಳಲ್ಲಿ ಮಿಣುಕುಹುಳ ಸೇರಿದೆ. ಜತೆಗೆ, ಅದು ನಮ್ಮ ನಿಮ್ಮ ಮನೆಯ ಸುತ್ತಲೂ, ಮಳೆಗಾಲದ ಆರಂಭದಲ್ಲಿ ಹಾರಾಡುತ್ತಿರುತ್ತದೆ! ಆಧುನಿಕ ಮಾನವನ ಜೀವನ ಶೈಲಿಯಿಂದಾಗಿ (ಪ್ರಖರ ಬೆಳಕು, ಎಲ್‌ಇಡಿ, ಕೀಟನಾಶಕಗಳ ಬಳಕೆ, ಗಿಡಮರಗಳ ನಾಶ ಇತ್ಯಾದಿ) ಮಿಣುಕು ಹುಳಗಳ ಬದುಕು ಸ್ವಲ್ಪ ಕಷ್ಟಕ್ಕೆ ಸಿಲುಕಿದೆ; ಮಿಣುಕು ಹುಳಗಳು ಸಂತಾನೋತ್ಪತ್ತಿ ಮಾಡಲು, ಗಂಡು ಮತ್ತು ಹೆಣ್ಣು ಪರಸ್ಪರ ಗುರುತಿಸಿಕೊಳ್ಳಲು ಅವು ಬೆಳಕನ್ನು ಉತ್ಪತ್ತಿ ಮಾಡುತ್ತವೆ. ಆದರೆ ಆಧುನಿಕ ಮಾನವನು ಸುತ್ತಲೂ ಬೆಳಗುತ್ತಿರುವ ಪ್ರಖರ ಬೆಳಕಿನಿಂದಾಗಿ, ಅವುಗಳ ದಾರಿ ತಪ್ಪುತ್ತಿದೆ! ಲಕ್ಷಾಂತರ ವರ್ಷಗಳಿಂದ ಅವು ಅನುಸರಿಸಿದ್ದ ಬೆಳಕಿನ ಭಾಷೆಗೆ, ಮನುಷ್ಯನ ವಿದ್ಯುತ್ ಬೆಳಕು ಕಂಟಕ ಎನಿಸಿದೆ. ಜತೆಗೆ, ಕೀಟನಾಶಕಗಳ ಬಳಕೆಯಿಂದಾಗಿ, ಅವುಗಳ ಲಾರ್ವಾಗಳು ಅಪಾರ ಸಂಖ್ಯೆಯಲ್ಲಿ ಸಾಯುತ್ತಿವೆ. ದೇಹದಲ್ಲಿ ಬೆಳಕು ಉತ್ಪತ್ತಿ ಮಾಡುವ ಅಪೂರ್ವ ಶಕ್ತಿ ಹೊಂದಿರುವ ಮಿಣುಕು ಹುಳಗಳ ಬದುಕೇ ಒಂದು ವಿಸ್ಮಯ. ಇವುಗಳನ್ನು ರಕ್ಷಿಸಿದರೆ, ನಮ್ಮ ಪರಿಸರವನ್ನು ನಾವು ರಕ್ಷಿಸಿಕೊಂಡಂತೆ.

ಸೆಪ್ಟೆಂಬರ್ 15ರ ತನಕ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ನಡೆಯುತ್ತಿರುವ ಈ ಛಾಯಾಚಿತ್ರ ಪ್ರದರ್ಶನವು, ತೇಜಸ್ವಿಯವರನ್ನು ನೆನಪು ಮಾಡಿಕೊಳ್ಳುತ್ತಲೇ, ಜನಸಾಮಾನ್ಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಒಂದು ಅಪೂರ್ವ ಮಾಹಿತಿಯನ್ನು, ಅಪರೂಪದ ಲೋಕವನ್ನುಪರಿಚಯಿಸುತ್ತಿರುವುದು ನಿಜಕ್ಕೂ ಅಭಿನಂದನಾರ್ಹ.

ಸುಮನೋಹರ ನರ್ತನ ವರ್ಷ

• ವೈ.ಕೆ.ಸಂಧ್ಯಾ ಶರ್ಮ

ಒಂದು ಕ್ಷಣ ಕಣ್ಣೆವೆ ಚಲಿಸಿದರೆ ಎಲ್ಲಿ ಅದ್ಭುತ ಭಂಗಿಗಳು ಕಣ್ತಪ್ಪಿ ಹೋಗುತ್ತವೋ ಎಂದು ಮೈಯೆಲ್ಲಾ ಕಣ್ಣಾಗಿ ವೀಕ್ಷಿಸಿದ ಅದ್ಭುತ ನರ್ತನ, ಭರವಸೆಯ ನೃತ್ಯ ಕಲಾವಿದೆ ವರ್ಷಾಳದಾಗಿತ್ತು. ಅಂದು- ಸೇವಾಸದನದ ರಂಗಾಂಗಳದಲ್ಲಿ ಸ್ವೇಚೆಯಾಗಿ

ವಿಹರಿಸುತ್ತಿದ್ದ ನವಿಲಿನ ವಿಹಂಗಮ ನಾಟ್ಯದ ಹೆಜ್ಜೆಗಳನ್ನು ಕಣ್ಣು ತುಂಬಿಕೊಂಡ ಸಾರ್ಥಕತೆ ಕಲಾರಸಿಕರ ಕಣ್ಣುಗಳಲ್ಲಿ ಮಿನುಗುತ್ತಿತ್ತು. ಎರಡು ಗಂಟೆಗಳಿಗೂ ಮಿಕ್ಕಿ ಲವಲವಿಕೆಯಿಂದ ಲೀಲಾಜಾಲವಾಗಿ ನೃತ್ತ- ನೃತ್ಯಗಳ ರಸದೌತಣ ನೀಡಿದ ವರ್ಷಾ ಎಂ. ಉಷಸ್ ಫೌಂಡೇಶನ್ ನೃತ್ಯಸಂಸ್ಥೆಯ ಕಲಾತ್ಮಕ ನಿರ್ದೇಶಕಿ, ಗುರು, ಡಾ. ಸಂಗೀತಾ ಕಪಿಲನ್ ಅವರ ನುರಿತ ಗರಡಿಯಲ್ಲಿ ರೂಪುಗೊಂಡ ನೃತ್ಯ ಕಲಾಶಿಲ್ಪ. ಅದು ಅವಳ

ಭರತನಾಟ್ಯದ ರಂಗಪ್ರವೇಶ ಎನಿಸಲಿಲ್ಲ. ನುರಿತ ನರ್ತಕಿಯಂತೆ ವರ್ಷಾ, ತನ್ನ ಕಲಾತ್ಮಕ ಭಂಗಿಗಳಿಂದ, ಆಕರ್ಷಕ ನೃತ್ತ ವೈಭವದಿಂದ, ಪ್ರೌಢ ಸುಂದರಾಭಿನಯದಿಂದ ಕಣ್ಮನ ಸೆಳೆದಳು.

ಸುಬ್ರಮಣ್ಯಸ್ವಾಮಿಯ ಕವಿತ್ವಂ -ಪ್ರಾರ್ಥನಾರೂಪದ ಷಣ್ಮುಖಪ್ರಿಯ ರಾಗದ ಶಿವತನಯನ ನೃತ್ಯಾರಾಧನೆ ಅಂಗಶುದ್ಧಿಯ ನರ್ತನದಿಂದ, ಲಯಾತ್ಮಕ ಹೆಜ್ಜೆಗಳ ಸೊಗಸಿನಿಂದ ಸುಬ್ರಹ್ಮಣ್ಯನ ಮನೋಹರ ರೂಪವನ್ನು ಕಲಾವಿದೆ ಮಾರ್ಮಿಕವಾಗಿ ಅನಾವರಣಗೊಳಿಸಿದಳು. ಗುರು ಸಂಗೀತ ಅವರ ಸ್ಫುಟವಾದ ನಟುವಾಂಗದ ಸೊಗಡು ಕಲಾವಿದೆಯ ಅಡವುಗಳಿಗೆ-ನೃತ್ಯದೀಪಿಕೆಗೆ ಸ್ಫೂರ್ತಿ ನೀಡಿದ್ದವು. ತ್ಯಾಗರಾಜನರ ಅಪೂರ್ವ ಗಾಯನ ಮನಕಲಕುವಂತಿತ್ತು. ವರ್ಷಾ ತನ್ನ ಪ್ರತಿಭಾ ವಿಲಾಸವನ್ನು ವಿಶಿಷ್ಟ ಕಲಾವಂತಿಕೆಯಿಂದ ಪ್ರದರ್ಶಿಸಿದಳು.

ಮುಂದೆ- ಕಂಜದಳಾಯತಾಕ್ಷಿ- ಕಮಲಾ ಮನೋಹರಿ ರಾಗದ ಕೃತಿಯನ್ನು ಕಲಾವಿದೆ, ದೈವೀಕ ಆಯಾಮದಲ್ಲಿ ಭಕ್ತಿ ತಾದಾತ್ಮ್ಯತೆಯಿಂದ ಅರ್ಪಿಸಿದಳು.ಕದಂಬ ವನವಾಸಿನಿಯ ಸುಮನೋಹರ ರೂಪ-ಮಹಿಮೆಗಳನ್ನು ಅನನ್ಯವಾಗಿ ಪ್ರದರ್ಶಿಸಿದಳು. ದೇವಿಯ ಹಂಸನಡೆ ವಯ್ಯಾರದ ಸುಕೋಮಲ ಆಂಗಿಕಾಭಿನಯ, ಸ್ವರಾಭಿಷೇಕದಲ್ಲಿ ಮಿನುಗಿದ ಶಿಲ್ಪಸದೃಶ ಭಂಗಿಗಳು, ಕಮನೀಯ ನೋಟವಾಗಿ ಕಣ್ತುಂಬಿ ಮುದನೀಡಿತು.

ಪ್ರಸ್ತುತಿಯ ಹೃದಯಭಾಗ ಅಷ್ಟೇ ಹೃದ್ಯವೂ ಆದ ಭಾಗ ವರ್ಣ. ಶಿವಸಾಯುಜ್ಯ ಪಡೆಯಲು ಅನುಗಾಲ ಬಯಸಿದ ದೀನ ನಾಯಕಿಯ ಮನದಾಳದ ಪಾಡೆಲ್ಲ ಹಾಡಾಗಿ ಹರಿದ ಭಕ್ತಿಪ್ರಧಾನ ಪದವರ್ಣ- ಸ್ವಾಮಿ ನಾನುಂದನ್ ಅಡಿಮೈ.. (ರಾಗ ನಾಟ ಕುರಂಜಿ) ಮಹಾದೇವನಲ್ಲಿ ಸಂಪೂರ್ಣ ಶರಣಾದ ದುಃಖಾರ್ತ ನಾಯಕಿಯ ಮನದಾಳದ ವಿರಹದ ತೀವ್ರಭಾವನೆಗಳಿಗೆ ಸಮರ್ಥ ಅಭಿವ್ಯಕ್ತಿಯಾದಳು ಕಲಾವಿದೆ.

ಅನಂತರ- ಮುತ್ತು ತಾಂಡವರ ರಚನೆಯ ಆಡಿಕೊಂಡಾರಂದ ವೇದಿಕ್ಕೆ ಕಾಣಕನ್.. ಚಿದಂಬರಸ್ವಾಮಿಯ ವಿವಿಧ ಯೋಗ ಭಂಗಿಗಳನ್ನು ಸಾಕ್ಷಾತ್ಕರಿಸಿದ ಅಪೂರ್ವ ಕೃತಿ. ವಿಶಿಷ್ಟ ನಾಗಮುದ್ರೆಗಳು, ಲಾಸ್ಯರೂಪದ ನೃತ್ತಾವಳಿ, ಕ್ಲಿಷ್ಟ ಸಂಕೀರ್ಣ ಜತಿಗಳ ಮೋಡಿ ಶೇಷಭೂಷಣ ನಟರಾಜನನ್ನು ಮನದಲ್ಲಿ ಪ್ರತಿಷ್ಠಾಪಿಸಿದವು.

ಮುಂದೆ- ಗಂಡನ ಬಗೆಗಿನ ಶೃಂಗಾರ ಲಲಿತೆಯ ಮನದೊಳಗಿನ ಹುಸಿಮುನಿಸು- ತುಮುಲಗಳನ್ನು ನೀ ಮಾಟಲೆ ಮಾಯನುರಾ... ಎಂಬ ಜಾವಳಿಯಲ್ಲಿ ನಾಯಕಿ ಗಂಡನನ್ನು ತರಾಟೆಗೆ ತೆಗೆದುಕೊಳ್ಳುವ ಹಾಸ್ಯಲೇಪಿತ ಅಭಿನಯ ಬಹು ರಮ್ಯವಾಗಿ ಅರಳಿತು. ಹರಿಹರ ಸುತನ ಪ್ರಾರ್ಥನೆಯನ್ನು ಒಳಗೊಂಡ ಚೈತನ್ಯಪೂರ್ಣ ತಿಲ್ಲಾನದೊಂದಿಗೆ ವರ್ಷಳ ಚಿರಸ್ಮರಣೀಯ ಪ್ರಸ್ತುತಿ ಸುಸಂಪನ್ನಗೊಂಡಿತು.

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್

SPOT CASH
ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ,
ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ 12-09-2024 to 21-09-2024
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್,
ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ,
5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

ಯುವ ಕಾವ್ಯ

ಕಳೆದು ಹೋದೆ

ಚೆಲುವೆಗೊಂದು ಹೂವ ಕೊಟ್ಟು
ಒಲವ ಪಡೆವ ಹಂಬಲ
ಮೆಚ್ಚಿ ಕೊಡುವ ಮುತ್ತಿಗೊಂದು
ಇರಲಿ ನಿನ್ನ ಬೆಂಬಲ||

ಕಂಗಳಲ್ಲೆ ಕರೆದು ಕೊಡುವ
ಒಲವದೆಷ್ಟು ಸೊಗಸು
ರೆಪ್ಪೆಯೆಂಬ ಕದವ ಮುಚ್ಚಿ
ಹಾಗೆ ಒಮ್ಮೆ ರಮಿಸು||

ಹೂವಿನಷ್ಟೆ ನಿನ್ನ ಚೆಲುವು
ಸೆಳೆತವಂತು ಸಡಗರ
ಸುಮದ ಘಮದ ಮತ್ತಿನಲ್ಲೆ
ಕಳೆದು ಹೋದೆ ಹೊಸತರ||

ಬೀಸಿ ಬಂದ ತಂಪು ಗಾಳಿ
ಮಿಡಿಯಿತಲ್ಲೆ ಮನದ ವೀಣೆ
ಒಲವ ಜನನ ಹೃದಯ ಮಿಲನ
ನಲ್ಲ ನಲ್ಲೆ ಬೆರೆತು ತಾನೆ!

• ಮಂಗಳ ಎಂ ನಾಡಿಗ್

ಮುಂಜಾವಿನ ಅಸ್ಮಿತೆ

ರಾಶಿ ಶಿಖರದಂಚಿನಲ್ಲಿ ಮೊರೆವ ತೊರೆ ಕಾಡಿನಲ್ಲಿ
ಎಲ್ಲೆಯಿರದ ನದಿ ಕಡಲಿನ ಕಲರವ ನೊರೆಯುಕ್ಕುವಲ್ಲಿ
ಸುಪ್ರಭಾತ ಪಥ ಛಾಪಿಸೆ ಕುಂಚ ಹಿಡಿದು ಕಾದಿದೆ
ಮುಂಜಾವಿನ ಅಸ್ಮಿತೆ

ಹಸುಸಿಗೂಸಿನ ಉಸಿರಿನಂತೆ ಹೊಸಕಾಳಿನ ಸೊಗಡಿನಂತೆ
ಮಲ್ಲಿಗೆ ಜಾಜಿ ಸಂಪಿಗೆ ಗಂಧ ಜಾಡು ತೀಡುವಂತೆ
ನೊರೆಯುಕ್ಕುವ ಹಾಲಿನಂತೆ ಬೀಜ ಮೊಳೆತು ಇಣುಕಿದಂತೆ
ಮುಂಜಾವಿನ ಅಸ್ಮಿತೆ

ಗರಿ ಬಿಚ್ಚುವ ಬಾನಾಡಿ ಗಿರಿವರೆಗೂ ಸಾಲಾಗಿ
ಚಿಲಿಪಿಲಿ ಕಲರವ ಮಾಡಿ ಮುಗಿಲಿಗೆ ತೋರಣ ಕಟ್ಟಿ
ಬಾನಿಗುಯ್ಯಾಲೆ ಜೀಕಿ ಮೂಡಣ ಕದತಟ್ಟಿದೆ
ಮುಂಜಾವಿನ ಅಸ್ಮಿತೆ

ಹಸುರಸಿರಿಯ ಮೈಸವರಿ ಮನದುಂಬಿ ಅಭಿಸಾರಿಕೆ
ಮಂಜು ಮುತ್ತಿಕ್ಕಿದೆ ಇಬ್ಬನಿ ಜಿನುಗುತ್ತಿದೆ
ನೇಸರ ಬಿಸಿ ಚುಂಬನಕೆ ಮೊಗ್ಗು ತುಟಿ ಬಿಚ್ಚಿದೆ
ಮುಂಜಾವಿನ ಅಸ್ಮಿತೆ

ಉಚ್ಛ್ವಾಸ ನಿಶ್ವಾಸ ಪ್ರಾಸ ಪ್ರತಿ ಮುಂಜಾವು ಹೊಸಭಾಸ
ನಿಜ ಬಯಲಲೇ ತಾಯ್‌ಮಮತೆ
ಕಾಣದ ಕೈಕಾಯುವಂತೆ ಮುಂಜಾವಿನ ಮುದ ಮಕ್ಕಳಾಟ
ದಿನತಪ್ಪದೇ ಸೋರ್ರೈಗೈವ ಮಾಟ
ಮುಂಜಾವಿನ ಅಸ್ಮಿತೆ

ಗುಪ್ತ ಗಾಮಿನಿಯ ಆಂತರ್ಯ ನಿರತ ಪುಟಿವ ಸೌಂದರ್ಯ
ಯುಗಯುಗ ಜನ್ಮದಮೈತ್ರಿ ಚಿರನೂತನ ನಭಧಾತ್ರಿ
ಶಾಶ್ವತ ತನ್ಮಯ ವಿಸ್ಮಯ ಮುಗಿಯದ ಈ ಕವಿತೆ
ಮುಂಜಾವಿನ ಅಸ್ಮಿತೆ

• ಶ್ರೀವಲ್ಲಿ ಶೇಷಾದ್ರಿ

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ

12.09.2024 ಗುರುವಾರ

vishwavani.news

ದಿನ ದರ್ಶಿಕೆ

ಭಾದ್ರಪದ ಮಾಸ, ಶುಕ್ಲ ಪಕ್ಷ, ಅಷ್ಟಮಿ ತಿಥಿ, ಜ್ಯೇಷ್ಠಾ ನಕ್ಷತ್ರ, ವಿಷ್ಟಿ ಕರಣ, ಪ್ರೀತಿ ಯೋಗ, ದ್ರಿಕ್ ಋತು ಶರದ್, ದ್ರಿಕ್ ಆಯನ ದಕ್ಷಿಣಾಯನ, 1946 ಕ್ರೋಧಿ ನಾಮ ಸಂವತ್ಸರ, 2081 ವಿಕ್ರಮನಾಮ ಸಂವತ್ಸರ

ಮನೆಮದ್ದು

ಏಲಕ್ಕಿ ಮತ್ತು ಕಲ್ಲು ಸಕ್ಕರೆಯನ್ನು ತಿನ್ನುವುದರಿಂದ ಏಲಕ್ಕಿಯು ಹೊಟ್ಟೆಯು ಉತ್ತಮವಾಗಿ ಕಾರ್ಯ ನಿರ್ವಹಿಸಲು ಸಹಾಯ ಮಾಡುವ ಮಸಾಲೆಯಾಗಿದೆ. ಇದು ಜೀರ್ಣಕಾರಿ ರಸವನ್ನು ಉತ್ಪಾದಿಸಲು ನಿಮ್ಮ ದೇಹವನ್ನು ಉತ್ತೇಜಿಸುತ್ತದೆ. ಇದು ಆಹಾರವನ್ನು ಹೆಚ್ಚು ಪರಿಣಾಮಕಾರಿಯಾಗಿ ಒಡೆಯಲು ಸಹಾಯ ಮಾಡುತ್ತದೆ.

ಸೌಂದರ್ಯ ಸೂತ್ರ

1 ಟೇಬಲ್ ಚಮಚ ಮುಲ್ತಾನಿ ಮಿಟ್ಟಿಯನ್ನು 1 ಟೇಬಲ್ ಚಮಚ ಬೇವಿನ ಪುಡಿ, 1 ಟೇಬಲ್ ಚಮಚ ಜಾಯಿಕಾಯಿ ಪುಡಿ, 2 ಟೇಬಲ್ ಚಮಚ ಜೇನುತುಪ್ಪ ಮತ್ತು 1 ಅಥವಾ 2 ಹನಿ ಆಪಲ್ ಸೈಡರ್ ವಿನೆಗರ್‌ನೊಂದಿಗೆ ಮಿಶ್ರಣ ಮಾಡಿ. ಈ ದಪ್ಪ ಪೇಸ್ಟ್ ಅನ್ನು ಮುಖ ಮತ್ತು ಕುತ್ತಿಗೆಗೆ ಹಚ್ಚಿ. ಒಣಗಿದ ನಂತರ ತೊಳೆಯಿರಿ. ಈ ಫೇಸ್ ಪ್ಯಾಕ್ ಅನ್ನು ವಾರಕ್ಕೊಮ್ಮೆ ಬಳಸಬಹುದು.

ದಿನ ಭವಿಷ್ಯ

ಮೇಷ: ಜಗಳಗಂಟ ವ್ಯಕ್ತಿಯೊಂದಿಗಿನ ನಿಮ್ಮ ವಾದ ನಿಮ್ಮ ಮೂಡ್ ಹಾಳು ಮಾಡಬಹುದು. ಬುದ್ಧಿ ಬಳಸಿ- ವೈಷಮ್ಯಗಳನ್ನು ತಪ್ಪಿಸಿ.

ವೃಷಭ: ಭಾವನಾತ್ಮಕವಾಗಿ ನೀವು ತುಂಬ ಸ್ಥಿರವಾಗಿ ರುವುದಿಲ್ಲ - ಆದ್ದರಿಂದ ಇತರರ ಮುಂದೆ ಹೇಗೆ ವರ್ತಿಸುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ.

ಮಿಥುನ: ಇತರರನ್ನು ಟೀಕಿಸುವ ನಿಮ್ಮ ಅಭ್ಯಾಸದಿಂದಾಗಿ ಇಂದು ನೀವೇ ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆಗಳಿವೆ.

ಕಟಕ: ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಯೋಚಿಸದೆ ಹಣ ಖರ್ಚು ಮಾಡಬೇಡಿ.

ಸಿಂಹ: ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು, ಆದ್ದರಿಂದ ದ್ವೇಷವನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ದಿನ ಶುರುಮಾಡಿರಿ.

ಕನ್ಯಾ: ತುಂಬಾ ಚಿಂತೆ ಮತ್ತು ಒತ್ತಡ ರಕ್ತದೊತ್ತಡವನ್ನು ಉಂಟುಮಾಡಬಹುದು. ಹೊಸ ಆರ್ಥಿಕ ಒಪ್ಪಂದದಿಂದ ಹೆಚ್ಚಿನ ಹಣ ಬರುತ್ತದೆ.

ತುಲಾ: ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ಕ್ರಿಯೇಟಿವಿಟಿಯಿಂದ ಹೆಚ್ಚಿನ ಹಣ ಮಾಡಬಹುದು ಅದಕ್ಕೆ ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ.

ವೃಶ್ಚಿಕ: ತಮ್ಮ ಆಪ್ತರು ಅಥವಾ ಸಂಬಂಧಿಕರೊಂದಿಗೆ ವ್ಯಾಪಾರ ಮಾಡುತ್ತಿರುವ ಜನರು ಇಂದು ತುಂಬಾ ಯೋಚಿಸಿ ಹೆಜ್ಜೆಯನ್ನು ಹಾಕುವ ಅಗತ್ಯವಿದೆ

ಧನು: ಒತ್ತಡದ ಸಮಯವಿದ್ದರೂ ಕುಟುಂಬ ನಿಮಗೆ ಸಹಾಯ ಮಾಡುತ್ತದೆ. ಹತ್ತಿ, ಹೊಟೇಲ್ ಉದ್ಯಮಿಗಳಿಗೆ ಲಾಭವಾಗಬಹುದು.

ಮಕರ: ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ.

ಕುಂಭ: ಆದಷ್ಟು ಸುಮ್ಮನಿರಿ, ಏಕೆಂದರೆ, ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ಜಗಳವಾಗಬಹುದು.

ಮೀನ: ನಿಮ್ಮ ಆರೋಗ್ಯವು ಬೆಂಬಲಿ ಸುತ್ತದೆ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 2012: ಖ್ಯಾತ್ ಬ್ಯಾಡ್ಮಿಂಟನ್ ತಾರೆ ನೋವಾಕ್ ಜೋಕೋವಿಚ್ ತನ್ನ ಮೊದಲನೇ ಯುಎಸ್ ಓಪನ್ ಚಾಂಪಿಯನ್‌ಷಿಪ್ ಗೆಲ್ಲುತ್ತಾರೆ.
- 1948: ಭಾರತೀಯ ಸೇನೆಯು ಹೈದರಾಬಾದ್ ಮೇಲೆ ಆಕ್ರಮಣ ಮಾಡಿತು.
- 1912: ಮಾಜಿ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಗಂಡ ಫಿರೋಜ್ ಗಾಂಧಿ ಹುಟ್ಟಿದ ದಿನ

ಚಿತ್ರಸ್ಫೂರ್ತಿ

ಇದಂತೂ ಹುಲಿ ವೇಷದ ಸಮಯ, ದಕ್ಷಿಣ ಕನ್ನಡ ಕರಾವಳಿಯ ಕಡೆಗೆ ಹೋದರಂತೂ ಹುಲಿವೇಷದಾರಿಗಳದ್ದೇ ಸಡಗರ. ಆದರೆ ಈ ಚಿತ್ರ ಕರ್ನಾಟಕದಲ್ಲಿ ನಡೆಯುವ ಹುಲಿವೇಷದ್ದಂತೂ ಅಲ್ಲವೇ ಅಲ್ಲ. ಇದು, ಕೊಲಂಬಿಯಾ ಮತ್ತು ಅರ್ಜೆಂಟೈನಾ ನಡುವೆ ನಡೆಯುತ್ತಿರುವ ಫುಟ್‌ಬಾಲ್ ಆಟದಲ್ಲಿ ಒಬ್ಬ ಅಭಿಮಾನಿ ಕಂಡದ್ದು ಹೀಗೆ. ದಕ್ಷಿಣ ಕನ್ನಡದವರು ಯಾರಾದರೂ ಇದ್ದಿದ್ದರೆ, ಅವನೊಟ್ಟಿಗೆ ಹುಲಿ ಕುಣಿತ ಮಾಡುತ್ತಿದ್ದರೇನೋ!

ಚಿತ್ರಕೃಪೆ: ಜೋಆಕ್ವಿನ್ ಸಾರ್ಮೀಂಟೋ

ಯಶಸ್ಸಿನ ಗುಟ್ಟನ್ನ ತಿಳಿಸಿದ ಗುರುಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಒಂದು ಊರಿನಲ್ಲಿ ಒಬ್ಬ ಯುವಕನಿದ್ದ. ಅವನು ಜೀವನದಲ್ಲಿ ಒಬ್ಬ ಯಶಸ್ವಿ ವ್ಯಕ್ತಿಯಾಗಬೇಕು ಎಂದುಕೊಂಡಿದ್ದ. ಹೀಗಾಗಿ ಅವನು ಹಲವಾರು ರೀತಿಯ ಕೆಲಸಗಳನ್ನು ಮಾಡುತ್ತಿದ್ದ. ಆದರೆ ಯಾವುದೂ ಅವನಿಗೆ ಕೈ ಹಿಡಿಯುತ್ತಿರಲಿಲ್ಲ. ಏಕೆಂದರೆ ಇನ್ನೇನು ಕೆಲಸ ಮುಗಿಸಿದ ಲಾಭ ಬರುತ್ತದೆ ಅನ್ನುವಾಗ ಅದು ಹೇಗೋ ಕುಸಿದು ಬೀಳುತ್ತಿತ್ತು. ಹೀಗಾಗಿ ಅವನು ಮಾಡಿದ್ದ ಕೆಲಸಗಳೆಲ್ಲವೂ ಹೊಳೆಯಲ್ಲಿ ಹುಣಸೆಹಣ್ಣು ಕಿವುಚಿದಂತೆ ಆಗುತ್ತಿತ್ತು. ಇದರಿಂದ ಅವನು ತುಂಬಾ ಯೋಚನೆಗೀಡಾದ. ನನ್ನ ಜೊತೆ ಇದ್ದವರೆಲ್ಲ ಎಷ್ಟು ಎತ್ತರಕ್ಕೆ ಬೆಳೆದಿದ್ದಾರೆ ನನಗೇಕೆ ಆಗುತ್ತಿಲ್ಲ. ಯಶಸ್ಸನ್ನು ಸಾಧಿಸಲು ಏನು ಮಾಡಬೇಕು? ಯಶಸ್ಸಿನ ಗುಟ್ಟನ್ನು ತಿಳಿಯಲೇಬೇಕು ಎಂದುಕೊಂಡು ಒಬ್ಬ ಗುರುವನ್ನು ಹುಡುಕುತ್ತಾ ಹೊರಟ.

ಕೊನೆಗೂ ಅವನಿಗೊಬ್ಬ ಗುರು ಸಿಕ್ಕಿದರು. ಗುರು ಯುವಕನ ಬಾಡಿದ ಮುಖವನ್ನು ಕಂಡು, 'ಮಗು ನಿನ್ನ ಮುಖ ಏಕೆ ಇಷ್ಟೊಂದು ಚಿಂತೆಯಲ್ಲಿ ತುಂಬಿದೆ. ನಿನಗಿರುವ ಸಮಸ್ಯೆಯಾದರೂ ಏನು' ಎಂದು ಕೇಳಿದರು. ಆಗ ಯುವಕನು 'ಗುರುಗಳೇ, ನಾನು ಜೀವನದಲ್ಲಿ ಯಶಸ್ಸನ್ನು ಗಳಿಸಬೇಕೆಂದು ಹಲವು ವಿಧವಾದ ಕೆಲಸಗಳನ್ನು ಮಾಡಿದೆ ಇನ್ನೇನು ಗುರಿ ಮುಟ್ಟುತ್ತೇನೆ ಅನ್ನುವಾಗ ಅದು ಹೇಗೋ ಕುಸಿದು ಬಿಡುತ್ತದೆ. ನಾನೊಬ್ಬ ಯಶಸ್ವಿ ಮನುಷ್ಯನಾಗಲು ಏನು ಮಾಡಬೇಕು ಆ ರಹಸ್ಯವನ್ನು ನನಗೆ ತಿಳಿಸಿ ಗುರುಗಳೇ' ಎಂದು ದೈನ್ಯತೆಯಿಂದ ಕೇಳಿದ.

ಗುರುಗಳು ಯುವಕನ ಮಾತನ್ನು ಆಲಿಸಿ, 'ನೋಡು ಮಗು ಈಗ ಅನೇಕ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಎಲ್ಲರ ಮುಂದೆ ರಹಸ್ಯದ ಗುಟ್ಟನ್ನು ಹೇಳಲು ಆಗುವುದಿಲ್ಲ. ನಾನು ಸಂಜೆ ನದಿಗೆ ಸ್ನಾನಕ್ಕೆ ಹೋಗುತ್ತೇನೆ ಅಲ್ಲಿಗೆ ಬಾ ನಿನಗೆ ರಹಸ್ಯದ ಗುಟ್ಟನ್ನು ತಿಳಿಸಿಕೊಡುತ್ತೇನೆ' ಎಂದರು. ಈ ಮಾತಿನಿಂದ ಯುವಕನಿಗೆ ತುಂಬಾ ಸಂತೋಷವಾಯಿತು.

ಗುರುಗಳು ಹೇಳಿದಂತೆ ಸಾಯಂಕಾಲ ಸಮಯಕ್ಕೆ ಸರಿಯಾಗಿ ನದಿತೀರಕ್ಕೆ ಹೋದನು. ಗುರುಗಳು ಬರುವುದನ್ನು ನೋಡಿದವನೇ ಓಡಿಹೋಗಿ, 'ಗುರುಗಳೇ ಬೇರೆಯಾರಾದರೂ ಬರುವ ಮೊದಲೇ ನನಗೆ ಯಶಸ್ಸಿನ ಗುಟ್ಟನ್ನು ತಿಳಿಸಿಬಿಡಿ' ಎಂದನು. ಆಗ ಗುರುಗಳು ಅವನ ಹೆಗಲ ಮೇಲೆ ಕೈ ಹಾಕಿ, 'ನನ್ನ ಜೊತೆ ನಡೆ' ಎಂದು ಅವನನ್ನು ತಮ್ಮ ಜೊತೆಗೆ ನೀರಿನೊಳಗೆ ಕರೆದುಕೊಂಡು ಹೋದರು.

ಎಲ್ಲಿ ನೀರು ಯುವಕನ ಕುತ್ತಿಗೆಯ ತನಕ ಬರುತ್ತದೆಯೋ, ಅಲ್ಲಿ ಗುರುಗಳು ನಿಂತರು. ಆ ಯುವಕನು ಏನು ಮಾಡುತ್ತಾರೆ ಗುರುಗಳು ಎಂದು ಯೋಚಿಸುವುದರೊಳಗೆ, ಗುರುಗಳು ಯುವಕನ ತಲೆಯನ್ನು ಹಿಡಿದು ನೀರಿನಲ್ಲಿ ಮುಳುಗಿಸಿದರು. ಯುವಕನು ಗಾಬರಿಯಿಂದ ವಿಲವಿಲ ಒದ್ದಾಡ ತೊಡಗಿದ. ಆತ ಗುರುಗಳ ಕೈಯನ್ನು ತಳ್ಳಿಕೊಂಡು ಮೇಲೆ ಬರಬೇಕೆಂದು ಒದ್ದಾಡುತ್ತಿದ್ದರೆ, ಗುರುಗಳು ಅವನು ಸ್ವಲ್ಪವೂ ತಲೆಯೆತ್ತದಂತೆ ತಲೆಯನ್ನು ನೀರಿನೊಳಗೆ ಮುಳುಗಿಸುತ್ತಿದ್ದರು. ಈ ರೀತಿ ಕೆಲವು ಸಮಯದ ನಂತರ ಗುರುಗಳು ಅವನ ತಲೆಯನ್ನು ಮೇಲೆ ಎತ್ತಿದರು.

ಯುವಕನು ಉಸಿರನ್ನು ಎಳೆದುಕೊಳ್ಳುತ್ತಿದ್ದ. ಈಗ ಗುರುಗಳು ಕೇಳಿದರು. 'ಹುಡುಗ, ನಿನ್ನ ತಲೆಯನ್ನು ನೀರಿನೊಳಗೆ ಮುಳುಗಿಸಲು ಪ್ರಯತ್ನಪಟ್ಟಷ್ಟು ನೀನು ಮೇಲೆ ಬರಲು ಬಲವಾಗಿ ಪ್ರಯತ್ನಿಸುತ್ತಿದ್ದೆ ಯಾಕೆ?' ಅದಕ್ಕೆ ಯುವಕನು, 'ಗುರುಗಳೇ ನಾನು ನೀರಿನಿಂದ ಮೇಲೆ ಬರಬೇಕಿತ್ತು, ಉಸಿರು ತೆಗೆದುಕೊಳ್ಳಬೇಕಾಗಿತ್ತು ಹಾಗಾಗಿ ಮೇಲೆ ಬರಲು ಪ್ರಯತ್ನಿಸುತ್ತಿದ್ದೆ' ಎಂದನು. ಆಗ ಗುರುಗಳು ಹೇಳಿದರು. 'ಇದೇ ಯಶಸ್ಸಿನ ರಹಸ್ಯ. ನೀನು ಮಾಡುವ ಕೆಲಸವನ್ನು ನಿನ್ನ ಉಸಿರಾಷ್ಟು ಅವಶ್ಯಕ ಎನ್ನುವಂತೆ ಮಾಡಬೇಕು. ಇಲ್ಲಿ ನೀರಿನೊಳಗೆ ಉಸಿರಾಡದಿದ್ದರೆ ಸತ್ತು ಹೋಗುವೆನೆಂಬ ಭಯ ನಿನ್ನನ್ನು ಆವರಿಸಿತ್ತು. ಇದೇ ರೀತಿ ನಿನ್ನ ಕೆಲಸದಲ್ಲಿ ಭಯವಿರಬೇಕು, ಭಕ್ತಿ ಇರಬೇಕು, ಯುಕ್ತಿಯಿಂದ ಶಕ್ತಿಹಾಕಿ ಕೆಲಸ ಮಾಡಬೇಕು. ಮಾಡುವುದು ಸಣ್ಣ ಕೆಲಸವೇ ಆದರೂ ಅದರಲ್ಲಿ ನಿನ್ನ ಬುದ್ಧಿ, ಹೃದಯ ಮತ್ತು ಆತ್ಮವನ್ನು ತೊಡಗಿಸಿಕೊಳ್ಳಬೇಕು. ಅದುವೇ ''ಯಶಸ್ಸಿನ ಗುಟ್ಟು''' ಎಂದು ಹೇಳಿದರು.

ಬಹುಶಃ ಇದು ನಮ್ಮೆಲ್ಲರಿಗೂ ಅನ್ವಯಿಸುವ ಮಾತು. ಈ ರೀತಿಯ ಶ್ರದ್ಧೆ, ಭಕ್ತಿ, ಇದ್ದಾಗ ಮಾತ್ರ ಅಂದುಕೊಂಡದ್ದನ್ನು ನಾವು ಸಾಧಿಸಲು ಸಾಧ್ಯ.

ಪ ದ ಬಂ ಧ



ಎಡದಿಂದ ಬಲಕ್ಕೆ:

1. ಸ್ನೇಹ ಅಥವಾ ಒಡನಾಟ (4)
4. ಅನುದಿನವೂ ಬರುವ ಸೂರ್ಯ (4)
6. ಸಭೆಯೊಂದರ ಸದಸ್ಯ (3)
8. ರಥವನ್ನು ನಡೆಸುವವನು (3)
9. ಆಯುಧವೊಂದರ ಅಂಚು (3)
10. ಕೇಳಿದ್ದನ್ನು ಕೊಡುವ ಕಾಮಧೇನು ಅಸ್ತವ್ಯಸ್ತವಾಗಿದೆ (3)
11. ಮೀಸೆಯಲ್ಲ, ಮುಡಿಪು ಎಂದರ್ಥ (3)
13. ಜನರ ಹುಟ್ಟು (3)
15. ನಾಕ ತೋರಿಸುತ್ತೇನೆಂದ ಮುಖಂಡ (3)
17. ಹರಿತಗೊಳಿಸುವ ಸಾಧನದಿಂದ ಆರಂಭವಾದ ತಾವರೆ (4)
18. ಸಾಕ್ಷಿ ಹೇಳಲು ಬಂದು ನಿಂತ ಕಟ್ಟೆ (4)

ಎಡದಿಂದ ಬಲಕ್ಕೆ:

2. ಒಳ್ಳೆಯ ಛಲವಿರುವವನು (4)
3. ಮೋಸವಿಲ್ಲದ ಒಂದು ಬಗೆಯ ಕರಿದ ತಿಂಡಿ (3)
4. ಈ ದಿನದ ತಾರೀಖು (3)
5. ಯತಿಗಳು ಬಳಸುವ ನೀರಿನ ಪಾತ್ರೆ (4)
7. ವ್ಯಕ್ತಿಗಳ ಮಧ್ಯೆ ಇರಬಹುದಾದ ಅಭಿಪ್ರಾಯಭೇದ (5)
12. ಸರದ ಮಧ್ಯೆ ಸಿಲುಕಿದೆ ಸುದ್ದಿ (4)
14. ನರ್ತಿಸುವ ಶಿವ (4)
15. ಕ್ಷೌರಿಕನಿಗೆ ಮತ್ತೊಂದು ಹೆಸರು (3)
16. ಎರಡು ಕಡೆಯಿಂದ ನೋಡಿದರೂ ಚೆನ್ನವೇ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಓರಗಿತ್ತಿ 3. ಪಿಳ್ಳಂಗೋವಿ 5. ರಿನಾ 6. ಸಾಗರ 8. ಕರವೀರ 10. ದಕ್ಷ 11. ದಯೆ 12. ರಜನಿ 14. ಗಾಣಿಗ 17. ಮಯ 18. ರಕ್ತ 19. ತರಗತಿ 21. ಕರಡಿ 23. ರುಚಿ 24. ನರಲೋಕ 25. ಬೀಸಣಿಗೆ

ಮೇಲಿನಿಂದ ಕೆಳಕ್ಕೆ: 2. ಗಿಡುಗ 3. ಪಿನಾಕ 4. ವಿಶಾರದ 6. ಸಾಕ್ಷರ 7. ರದನಿ 9. ರಮಣಿ 13. ಜನಾಂಗ 14. ಗಾಯಕ 15. ಗರಡಿ 16. ಮತದಾನ 20. ತಿರುಕ 22. ರಭಸ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

10 ದಿನಗಳಲ್ಲಿ 5 ಅಧ್ಯಕ್ಷರು!

ಇದು ಯಾವುದೋ ಗಣಪತಿ ಹಬ್ಬದ ಸಂಘದ ಬಗ್ಗೆ, ಮಹಿಳಾ ಸಂಘದ ಬಗ್ಗೆ, ಅಥವಾ ಯಾವುದೋ ಶಾಲೆಯಲ್ಲಿ ನಡೆದದ್ದಲ್ಲ. ಬದಲಿಗೆ ಇದು ನಡೆದಿದ್ದು ಅರ್ಜೆಂಟೈನಾದಲ್ಲಿ. ಕೆಲವರ್ಷಗಳ ಹಿಂದೆ, ಅರ್ಜೆಂಟೈನಾದಲ್ಲಿ

ಯಾವುದೇ ಶಕಿ ಇರಲಿಲ್ಲ. ಅದು ಯಾವಾಗಲೂ ರಾಷ್ಯಾ ಅಥವಾ ಬ್ರೆಜಿಲ್‌ನ ಮೇಲೆ ಅವಲಂಬಿತವಾಗಿ ರಬೇಕಿತ್ತು. ಆ ಸಮಯದಲ್ಲಿ ರಷ್ಯಾ- ಬ್ರೆಜಿಲ್‌ನಲ್ಲಿ ಆರ್ಥಿಕ ಅಸ್ತವ್ಯಸ್ತದಿಂದ ಕೂಡಿತ್ತು. ಅದರಿಂದ ರಷ್ಯ-ಬ್ರೆಜಿಲ್‌ನ ಜನರಲ್ಲದೇ ಅರ್ಜೆಂಟೈನಾ ಸಹ ಆರ್ಥಿಕ ಕುಸಿತವನ್ನು ಕಂಡಿತ್ತು. 2001ರ ಸಮಯದಲ್ಲಿ ಕಂಡ ಆರ್ಥಿಕ ಕುಸಿತ, ಅಂದಿನ ಸರಕಾರವನ್ನು ಬೀಳಿಸಿತ್ತು. ಅದರ ಜೊತೆಗೆ ಹಲವಾರು ಹಿಂಸಾಯ್ತಕ ಪ್ರತಿಭಟನೆಗಳಿಂದ ಆಗಿನ ಅಧ್ಯಕ್ಷ ಫರ್ನಾಂಡೋ ಡೆ ಲಾ ರಾವುಆ ರಾಜೀನಾಮೆ ಮಾಡಿದರು. ಅದಾದ ನಂತರ ಹತ್ತು ದಿನಗಳ ಅವಧಿಯಲ್ಲಿ 4 ಜನ ಅಧ್ಯಕ್ಷರಾಗಿ, ಅವರೂ ರಾಜೀನಾಮೆ ನೀಡಿದರು.

ಪುಸ್ತಕ ಲೋಕ

ಜಗತ್ತಿನ ಭೀಕರ ಯುದ್ಧಗಳು

ಈ ಕೃತಿಯು ಎಂ. ವೆಂಕಟಸ್ವಾಮಿ ಅವರ ಇತಿಹಾಸ ಗ್ರಂಥವಾಗಿದೆ. ಇಲ್ಲಿ ಬಡವರು ಹಾಗೂ ಕಾರ್ಮಿಕ ಕುರಿತ ಕಥನಗಳಿವೆ. ಜಗತ್ತನ್ನು ಬಡವರು ಮತ್ತು ಕೂಲಿ ಕಾರ್ಮಿಕರು

ಹೇಗೆ ಕಟ್ಟಿದರು ಮತ್ತು ಕಟ್ಟುತ್ತಿದ್ದಾರೆ ಎಂಬುವುದನ್ನು ಇಲ್ಲಿ ವಿವರಿಸಲಾಗಿದೆ. ಹೊಟ್ಟೆಗೆ ಅನ್ನ, ಉಡಲು ಬಟ್ಟೆ, ಮಲಗಲು ವಸತಿ ಇಲ್ಲದೆ ದುಡಿದು ಜಗತ್ತನ್ನು ಕಟ್ಟಿದವರು ಬಡವರು ಮತ್ತು ಕಾರ್ಮಿಕರು. ಪಿರಮಿಡ್‌ಗಳಿಂದ ಹಿಡಿದು ಯಾವುದೇ ನಾಗರಿಕ ತೊಟ್ಟಿಲುಗಳನ್ನು ಕಟ್ಟಿ ಬೆಳೆಸಿದವರು ಬಡವರು, ಕಾರ್ಮಿ ಕರು, ರೈತರು ಮತ್ತು ಮಹಿಳೆಯರು, ಜೊತೆಗೆ ಕಾಡಿನಿಂದ ಹಿಡಿದು ತಂದು ಪಳಗಿಸಿದ ಮೂಕಪ್ರಾಣಿಗಳು, ಜಗತ್ತಿನಲ್ಲಿ ಮುಂದೆಯೂ ಈ ತಾರತಮ್ಯ ಹೀಗೆ ಮುಂದುವರಿಯುತ್ತದೆ. ಅಲ್ಲೊಬ್ಬರು ಇಲ್ಲೊಬ್ಬರು ಮಹನೀಯರು ಹುಟ್ಟಿ ಬಂದು ಈ ಅಸಮಾನತೆಯ ಸಮಾಜದ ವಿರುದ್ಧ ಹೋರಾಡಿ ಪ್ರಾಣ ಕಳೆದುಕೊಂಡರೆ ವಿನಹಃ ಈ ಜಗತ್ತು ಮಾತ್ರ ಬದಲಾಗಲೇ ಇಲ್ಲ ಎಂಬುವುದನ್ನು ತಿಳಿಸಿದ್ದಾರೆ.

ಟ್ವೀಟ್‌ಮೆಂಟ್

ವಾರಿಕೂ: ತುಂಬಾ ಕಟ್ಟುನಿಟ್ಟಾದ ಪೋಷಕರು ಒಳ್ಳೆಯ ಸುಳ್ಳುಗಾರರನ್ನು ಬೆಳೆಸುತ್ತಾರೆ!

ಹರವಿಂದ್: ರಾಜಕಾರಣಿಗಳ ಪೋಷಕರು ಕಟ್ಟುನಿಟ್ಟಾಗಿರುತ್ತಿದ್ದರೇ?

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

• ಕೆಳಗಿನವರಲ್ಲಿ ಯಾರು ಸಮಯವನ್ನು ಅಳೆಯಲು ನೀರಿನ ಗಡಿಯಾರದ ಪ್ರಕಾರವನ್ನು ಕಂಡುಹಿಡಿದಿದ್ದರು?

ಎ. ಅಕ್ಕಾಡಿಯನ್ನರು.
ಬಿ. ಸುಮೇರಿಯನ್ನರು.
ಸಿ. ಬ್ಯಾನಿಲೋನಿಯನ್ನರು.
ಡಿ. ಯಾರೂ ಅಲ್ಲ.

ಉತ್ತರ: ಬಿ. ಸುಮೇರಿಯನ್ನರು.

ಮಾಹಿತಿ

ಸುಮೇರಿಯನ್ನರು ಸಮಯವನ್ನು ಅಳೆಯಲು ನೀರಿನ ಗಡಿಯಾರವನ್ನು ಕಂಡುಹಿಡಿದು ಬಳಸುತ್ತಿದ್ದರು. ಚಂದ್ರನ ನೆರಳಿನ ಇಳಿಕೆ ಮತ್ತು ಹೆಚ್ಚಳವನ್ನು ಗಮನಿಸಿ ಅವರು ವರ್ಷದ ಹನ್ನೆರಡು ತಿಂಗಳುಗಳನ್ನು ಲೆಕ್ಕಹಾಕಿದ್ದರು.

ಒಂದು ಕಾಲಿರದಿದ್ದರೂ ಖಾಲಿ ಕೂರದ ಮಾನಸಿ

ಸಾಧನೆಗೆ ಅಂಗವಿಕಲತೆ ಯಾವುದೇ ಕಾರಣಕ್ಕೂ ಅಡ್ಡಿಯಾಗುವುದಿಲ್ಲ ಎಂಬುದಕ್ಕೆ ನಿದರ್ಶನಗಳು ನಮ್ಮ ಕಣ್ಣಮುಂದೆಯೇ ಇವೆ. ಅದರಂತೆ ಇಲ್ಲೂ ಒಬ್ಬರು ಅಂಗವೈಕಲ್ಯದಿಂದ ಬಳಲುತ್ತಿದ್ದರೂ ಪ್ಯಾರಾ ಅಥ್ಲೀಟ್ ಆಗಿ ಸಾಧನೆ ತೋರಿದ್ದಾರೆ ಅವರೇ ಮಾನಸಿ ಜೋಶಿ.

ಗುಜರಾತಿನ ರಾಜ್ಕೋಟ್ ಮೂಲದವರಾದ ಮಾನಸಿ ಜೋಶಿ ಹುಟ್ಟಿದ್ದು ಜೂನ್ 11, 1989ರಂದು, ಮುಂದೆ ಮುಂಬೈನ ಅನುಶಕ್ತಿನಗರದಲ್ಲಿ ಬೆಳೆದರು. ಬಾಲ್ಯದಿಂದಲೂ ಕ್ರೀಡೆಯ ಮೇಲೆ ಆಸಕ್ತಿ ಇದ್ದುದರಿಂದ ಆರು ವರ್ಷ ಇರುವಾಗಲೇ ತನ್ನ ತಂದೆಯೊಡನೆ ಬ್ಯಾಡ್ಮಿಂಟನ್ ಆಡತೊಡಗಿದ್ದರು. ಇನ್ನು 2010ರಲ್ಲಿ ಮುಂಬೈನ ಕೆ.ಜೆ.ಸೋಮಯ್ಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ ನಂತರ 2011ರವರೆಗೆ ಮುಂಬೈನ ಸಾಫ್ಟ್‌ವೇರ್ ಕಂಪನಿಯಲ್ಲಿ ಕಾರ್ಯನಿರ್ವಹಿಸಿದರು.

ಇನ್ನು 2011ರಲ್ಲಿ ಕೆಲಸದ ನಿಮಿತ್ತ ಬೈಕ್‌ನಲ್ಲಿ ತೆರಳುವಾಗ ದುರಾದೃಷ್ಟವಶಾತ್ ಬೈಕ್ ಆಕ್ಸಿಡೆಂಟ್ ಆಗಿ ತನ್ನ ಎಡಗಾಲನ್ನು ಕಳೆದುಕೊಳ್ಳಬೇಕಾಯಿತು. ಆ ಸಮಯದಲ್ಲಿ ಅವರು ಬದುಕಿದ್ದೇ ಹೆಚ್ಚು. 2 ವರ್ಷಗಳ ಚಿಕಿತ್ಸೆಯ ಬಳಿಕ ಸಂಪೂರ್ಣ ಗುಣಮುಖವಾದ ನಂತರ ತನ್ನ ಎಡಗಾಲು ಇಲ್ಲದ ಬಗ್ಗೆ ಚಿಂತಿಸುತ್ತಾ ಕೂರದೇ ಬ್ಲೇಡ್ ಅಳವಡಿಸಿಕೊಂಡು ತನ್ನ ಫಿಟ್ನೆಸ್‌ನ್ನು ವಾಪಾಸ್ ಪಡೆಯಲು ಯೋಗ, ಧ್ಯಾನ ಮಾಡುತ್ತಾ ಮತ್ತೆ ಬ್ಯಾಡ್ಮಿಂಟನ್ ಆಡಲು ಪ್ರಾರಂಭಿಸಿದರು. ಇದಕ್ಕೆ ಕುಟುಂಬದ ಪ್ರೋತ್ಸಾಹವೂ ಕಾರಣವಾಯಿತು.

ಅಲ್ಲಿಂದ ಮತ್ತೆಂದು ಹಿಂದಿರುಗಿ ನೋಡಲೇ ಇಲ್ಲ. ಕಠಿಣ ಪರಿಶ್ರಮದಿಂದ 2014ರಲ್ಲಿ ಏಷ್ಯನ್ ಪ್ಯಾರಾ ಗೇಮ್ಸ್‌ಗೆ ಆಯ್ಕೆಯಾಗಿ ಸ್ಪೇನ್‌ನಲ್ಲಿ ಮೊದಲ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಆಡಿದರು. 2015ರ ಸೆಪ್ಟೆಂಬರ್‌ನಲ್ಲಿ ಇಂಗ್ಲೆಂಡ್‌ನ ಸ್ಟೋಕ್ ಮ್ಯಾಂಡೆವಿಲ್ಲೆಯಲ್ಲಿ ನಡೆದ ಪ್ಯಾರಾ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಮಿಶ್ರ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದರು. 2018ರಲ್ಲಿ ಖ್ಯಾತ ಬ್ಯಾಡ್ಮಿಂಟನ್ ತಾರೆ ಹೈದರಬಾದ್ ಮೂಲದ ಪುಲ್ಲೇಲ ಗೋಪಿಚಂದ್ ಅವರ ಬ್ಯಾಡ್ಮಿಂಟನ್ ಅಕಾಡೆಮಿಗೆ ಸೇರಿಕೊಳ್ಳುವ ಮೂಲಕ ತನ್ನ ಬ್ಯಾಡ್ಮಿಂಟನ್ ಗುರಿಯ ಕಡೆ ಮುನ್ನುಗ್ಗಿದರು. ಅದೇ ವರ್ಷದಲ್ಲಿ ಇಂಡೋನೇಷ್ಯಾದ ಜಕಾರ್ತದಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್-2018ರಲ್ಲಿ ಕಂಚಿನ ಪದಕ, ಆಗಸ್ಟ್ 2019ರಲ್ಲಿ ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆದ ಪ್ಯಾರಾ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ, 2020 ರಲ್ಲಿ ಅವರು ಮಹಿಳಾ ಸಿಂಗಲ್ಸ್ ಎಸ್ ಎಲ್ 3 ವಿಭಾಗದಲ್ಲಿ ವಿಶ್ವ ನಂ.2 ಶ್ರೇಯಾಂಕವನ್ನು ಪಡೆದರು. ಹಾಗೂ 2022ರ ಚೀನಾದ ಗ್ಯಾಂಗ್‌ಝೌನ್‌ನಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಕೂಡಾ ಕಂಚಿನ ಪದಕ ಸೇರಿದಂತೆ ಇನ್ನೂ ಅನೇಕ ಪದಕಗಳನ್ನು ಗೆದ್ದಿರುವುದು ಅವರ ಸಾಧನೆ. ಇದಿಷ್ಟೇ ಅಲ್ಲದೇ 2020ರಲ್ಲಿ ಪ್ರತಿಷ್ಠಿತ ಟೈಮ್ಸ್ ಮ್ಯಾಗಜಿನ್‌ನಿಂದ ಮಾನಸಿ ಜೋಶಿ ಅವರನ್ನು ಭವಿಷ್ಯದ ನಾಯಕಿ ಎಂದು ಗುರುತಿಸಿ ಗೌರವಿಸಲಾಗಿದೆ. ಇದರ ಜೊತೆಗೆ ಬಿಬಿಸಿ ವತಿಯಿಂದ ಪ್ರಪಂಚದ 100 ಸ್ಫೂರ್ತಿದಾಯಕ ಮಹಿಳೆಯರ ಪಟ್ಟಿಯಲ್ಲಿ ಇವರ ಹೆಸರು ಇದೆ.

ಪ್ರಶಸ್ತಿಗಳು: ಮಾನಸಿ ಅವರಿಗೆ ದೇಶ ವಿದೇಶಗಳಿಂದಲೂ ಪ್ರಶಸ್ತಿಗಳ ಮಹಾಪೂರವೇ ಹರಿದು ಬಂದಿದೆ. ಮಹಾರಾಷ್ಟ್ರ ಸರಕಾರದಿಂದ ಏಕಲವ್ಯ ಖೇಲ್ ಕ್ರೀಡಾ ಪುರಸ್ಕಾರ, ಅಂಗವಿಕಲತೆ ಹೊಂದಿರುವ ಅತ್ಯುತ್ತಮ ಕ್ರೀಡಾ ಮಹಿಳೆ, ಇಎಸ್‌ಪಿಎನ್ ಇಂಡಿಯಾ ಅವಾರ್ಡ್, ಬಿಬಿಸಿ ಟೈಮ್ಸ್ ಮ್ಯಾಗಜೀನ್ ಸೇರಿದಂತೆ ವಿದೇಶಿ ಸಂಸ್ಥೆಗಳಿಂದ ಗೌರವ ನೀಡಲಾಗಿದೆ.

• ಪುರುಷೋತ್ತಮ್ ವೆಂಕಿ

ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ!

ಅದೊಂದು ನಗರ, ನಗರದ ಮಧ್ಯ ಭಾಗದಲ್ಲೊಂದು ದೇವಾಲಯ. ದೇವಾಲಯದ ಮುಂಭಾಗದಲ್ಲೊಂದು ಅಶ್ವತ್ಥವೃಕ್ಷ ಕಟ್ಟೆ. ದಿನನಿತ್ಯ ಮುಂಜಾನೆ ಸೂರ್ಯೋದಯದ ಸಮಯದಲ್ಲಿ ಪುರೋಹಿತರೊಬ್ಬರು ಮಡಿ ಮಡಿಯಾಗಿ ಅಶ್ವತ್ಥಕಟ್ಟೆಗೆ ಪ್ರದಕ್ಷಿಣೆ ಮಾಡುತ್ತಿದ್ದರು. ಆ ವೇಳೆಯಲ್ಲಿ ದೇವಾಲಯದ ಮುಂದೆ ಓಡಾಡುವ ಮಂದಿಗೆ ಈ ಪುರೋಹಿತರು ನಡೆಸುತ್ತಿದ್ದ ಪ್ರದಕ್ಷಿಣೆಯ ಕಾಯಕ ಗೋಚರಿಸುತ್ತಿತ್ತು. ಸುಮಾರು ದಿನಗಳಿಂದ ಇದನ್ನು ಗಮನಿಸುತ್ತಿದ್ದ ವ್ಯಕ್ತಿಯೊಬ್ಬ, ಪುರೋಹಿತರ ಬಳಿಗೆ ಬಂದು ಮಾತನಾಡಿಸಿ, ಅವರು ಒಂದು ದಿನವೂ ತಪ್ಪದೆ ಅಶ್ವತ್ಥಕಟ್ಟೆಯನ್ನು ಸುತ್ತುವುದರ ಕಾರಣವನ್ನು ಕೇಳಿದ. ಆ ಪುರೋಹಿತರು, ಆ ವ್ಯಕ್ತಿಗೆ ಸ್ವಲ್ಪ ಸಮಯ ಕಾಯಲು ಹೇಳಿ ತಮ್ಮ ಅಂದಿನ ಪ್ರದಕ್ಷಿಣೆಯನ್ನು ಮುಗಿಸಿದ ನಂತರದಲ್ಲಿ ಆ ವ್ಯಕ್ತಿಯ ಬಳಿಗೆ ಬಂದು, ಅಯ್ಯೋ, ಈ ನನ್ನ ಪ್ರದಕ್ಷಿಣೆ ಕಾರ್ಯ ನನಗಾಗಿ ಅಲ್ಲ, ನಮ್ಮ ಮನೆಯ ಪಕ್ಕ ಬ್ಯಾಂಕ್ ಮ್ಯಾನೇಜರ್ ಕುಟುಂಬ ವಾಸವಾಗಿದೆ. ಯಾರೋ ಜ್ಯೋತಿಷಿಯೊಬ್ಬರು ಅವರಿಗೆ ಗ್ರಹಚಾರ ಕಾಡಲಾರಂಬಿಸಿದೆ, ಪರಿಹಾರಾರ್ಥವಾಗಿ, ಸೂರ್ಯೋದಯಯ ವೇಳೆಗೆ ಅಶ್ವತ್ಥ ಕಟ್ಟೆಗೆ ಸುತ್ತು ಬನ್ನಿ ಎಂದು ಹೇಳಿದರಂತೆ. ಆ ಬ್ಯಾಂಕ್ ಮ್ಯಾನೇಜರ್‌ಗೆ ಸುತಾರಾಂ ಬೆಳಿಗ್ಗೆ ಏಳುವ ಅಭ್ಯಾಸವಿಲ್ಲ. ನಾನು ಹೇಗೂ ಬೆಳಗಿನ ಜಾವ ಎದ್ದು ದೇವರ ಪೂಜೆ, ಶ್ಲೋಕ ಪಠಣ ಮಾಡ್ತೀನಿ, ಆಚಾರ ವಿಚಾರಗಳು ಗೊತ್ತು ಅಂತ ಅವರಿಗೂ ಗೊತ್ತಿತ್ತು. ಹೀಗಾಗಿ, ನನ್ನ ಬಳಿ ಬಂದು, ಅವರ ಪರವಾಗಿ ಪ್ರದಕ್ಷಿಣೆ ಮಾಡಿ ಅಂಥ ವಿನಂತಿಸಿಕೊಂಡರು. ಅದಕ್ಕೆ ಪ್ರತ್ಯಮ್ನವಾಗಿ ವಾರಕ್ಕೆ ಇಂತಿಷ್ಟು ಹಣ ಕೊಡ್ತೀನಿ ಅಂದರು.

ಹೀಗಾಗಿ, ಅವರ ಪರವಾಗಿ ದಕ್ಷಿಣೆ ಪಡೆದು ಈ ಪ್ರದಕ್ಷಿಣೆ ಮಾಡುತ್ತೇನೆಂದರು. ಇದನ್ನು ಕೇಳಿಸಿಕೊಂಡ ಆ ವ್ಯಕ್ತಿ, ಸ್ವಾಮಿ, ನನಗೂ ಸ್ವಲ್ಪ ಸಮಯ ಸರಿಯಿಲ್ಲ. ಮನೆಯಲ್ಲಿ ಬೆಳೆದು ನಿಂತ ಮಗಳಿಗೆ ಮದುವೆ ಮಾಡಬೇಕು. ಹೇಗೂ ನೀವು ಮಡಿಯಲ್ಲಿ ಪ್ರದಕ್ಷಿಣೆ ಹಾಕುತ್ತೀರಿ. ಆ ಬ್ಯಾಂಕ್ ಮ್ಯಾನೇಜರ್‌ರವರ ಪ್ರದಕ್ಷಿಣೆಯ ಸುತ್ತುಗಳಾದ ಮೇಲೆ, ನನ್ನ ಪರವಾಗಿ ಪ್ರದಕ್ಷಿಣೆ ಮಾಡಿ. ನಾನು ನಿಮಗೆ ದಕ್ಷಿಣೆಯನ್ನು ಕೊಡುವೆನೆಂದ. ಪುರೋಹಿತರು ಸಮ್ಮತಿಸಿ ಮಾರನೆಯ ದಿನದಿಂದ ಆ ವ್ಯಕ್ತಿಯ ಲೆಕ್ಕದಲ್ಲಿ ಅಶ್ವತ್ಥಕಟ್ಟೆಗೆ ಸುತ್ತಲಾರಂಭಿಸಿದರು.

ಈ ವಿಷಯ ಸ್ವಲ್ಪ ದಿನಗಳಲ್ಲಿ ಸುದ್ದಿಯಾಯಿತು. ಪ್ರದಕ್ಷಿಣೆಗೆ ಬೇಡಿಕೆ ಬಂತು. ತಾವೇ ಖುದ್ದಾಗಿ ಪ್ರದಕ್ಷಿಣೆ ಮಾಡಲಾಗದಿರುವವರು ಆ ಪುರೋಹಿತರ ಬಳಿ ಅವರಿಗಾಗಿ, ಅವರ ಕುಟುಂಬದವರಿಗಾಗಿ ಈ ವ್ಯವಸ್ಥೆಗೆ ದುಂಬಾಲು ಬಿದ್ದರು. ಪುರೋಹಿತರ ವ್ಯಾವಹಾರಿಕ ಬುದ್ಧಿ ಚಿಗುರೊಡೆಯಿತು. ಹೇಗೂ, ಪ್ರದಕ್ಷಿಣೆಯ ಸುತ್ತು ಬರುವೆ. ಅವರಿವರಿಗಾಗಿ ಇನ್ನಷ್ಟು ಸುತ್ತಿದರೆ ತಪ್ಪೇನೆಂದು ತಿಳಿದು, ತಕ್ಷಣ ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂಬ ಫಲಕವನ್ನು ನೆಟ್ಟರು. ಕಡಿಮೆ ದಕ್ಷಿಣೆಗೆ ನಿಂತಲ್ಲೇ ಪ್ರದಕ್ಷಿಣೆ, ಅತಿ ಕಡಿಮೆ ಕಾಸಿಗೆ, ವೃಕ್ಷದಿಂದ ಉದುರಿದ ಎಲೆಯ ಮೇಲೆ ಬೆರಳಿನಿಂದ ಪ್ರದಕ್ಷಿಣೆ ಬಂದಂತೆ ಮಾಡುವುದು, ಕಾಸಿಗೆ ತಕ್ಕ ಕಜ್ಜಾಯದಂತೆ, ದಕ್ಷಿಣೆಗೆ ತಕ್ಕ ಪ್ರದಕ್ಷಿಣೆ ಎಂಬುದು ಪುರೋಹಿತರ ಕಾಯಕವಾಯಿತು.

ಮನುಷ್ಯ, ಬದುಕಿನಲ್ಲಿ ಪರಾವಲಂಬಿಯಾಗದೆ ಜೀವಿಸಲಾರ. ಆದರೆ, ಕರ್ಮ, ಗ್ರಹಚಾರ ಪ್ರಾರಬ್ಧಗಳನ್ನು ಕಳೆದುಕೊಳ್ಳಲು ಹಾಗೂ ಪುಣ್ಯ ಸಂಪಾದನೆ ಮಾಡಿಕೊಳ್ಳಲು ಸ್ವಂತ ಶ್ರಮ, ಕಾರ್ಯ, ಪ್ರಾರ್ಥನೆ ಮತ್ತು ಪೂಜೆಗಳಿಗೂಈ ರೀತಿಯ ಅನ್ಯಮಾರ್ಗ ಅನಿವಾರ್ಯವೇ?

(ಕೀರ್ತಿಶೇಷರಾದ ಕೀರ್ತನಾ ಕೇಸರಿ ಸಂತ ಶ್ರೀಭದ್ರಗಿರಿ ಅಚ್ಯುತದಾಸರ ಕಥಾ ಕಾಲಕ್ಷೇಪವೊಂದರ ಪ್ರಭಾವಿತ)

• **ಎಚ್.ಕೆ.ಮಧು,** ದೋಹಾ, ಕತಾರ್

ಸಮಾಚಾರ ಸಣ್ಣದಲ್ಲ

ಡೈಮಂಡ್ ಲೀಗ್: ಸಾಬ್ಳೆ ಫೈನಲ್‌ಗೆ

ದೆಹಲಿ: ಒಲಿಂಪಿಯನ್, 3000 ಮೀ. ಸ್ಟೀಪಲ್‌ಚೇಸ್ ಓಟಗಾರ ಅವಿನಾಶ ಸಾಬ್ಳೆ ಅವರು ಮೊದಲ ಬಾರಿ ಡೈಮಂಡ್ ಲೀಗ್ ಫೈನಲ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಜಾವೆಲಿನ್ ಥ್ರೊ ತಾರೆ ನೀರಜ್ ಚೋಪ್ರಾ, ಅವರ ಜೊತೆ ಸಾಬ್ಳೆ ಇದೇ ತಿಂಗಳ 13 ಮತ್ತು 14ರಂದು ಜ್ಯೂರಿಚ್‌ನಲ್ಲಿ ನಡೆಯಲಿರುವ ಈ ಕೂಟದಲ್ಲಿ ಭಾಗವಹಿಸುತ್ತಿರುವ ಭಾರತದ ಎರಡನೇ ಸ್ಪರ್ಧಿಯಾಗಿದ್ದಾರೆ. ಸಾಬ್ಳೆ ಡೈಮಂಡ್ ಲೀಗ್‌ನಲ್ಲಿ ಮೂರು ಪಾಯಿಂಟ್‌ಗಳೊಂದಿಗೆ ಒಟ್ಟಾರೆ 14ನೇ ಸ್ಥಾನ ಪಡೆದಿದ್ದರು. ಆದರೆ ಅವರಿಗಿಂತ ಮೇಲಿನ ಸ್ಥಾನದಲ್ಲಿದ್ದ ನಾಲ್ವರು ಫೈನಲ್‌ನಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದರಿಂದ ಸಾಬ್ಳೆ ಅವರಿಗೆ ಅವಕಾಶ ದೊರೆಯಿತು. ಋತುವಿನ ಈ ಕೊನೆಯ ಕೂಟದಲ್ಲಿ ಸ್ಟೀಪಲ್‌ಚೇಸ್ ಸ್ಪರ್ಧೆ 13ರಂದು ಮತ್ತು ಜಾವೆಲಿನ್ ಥ್ರೊ ಸ್ಪರ್ಧೆ 14ರಂದು ನಡೆಯಲಿದೆ.

ಮಾಜಿ ಗೋಲ್‌ಕೀಪರ್ ಶ್ರೀಜೇಶ್‌ಗೆ ಮೋದಿ ಪತ್ರ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್ ಬಳಿಕ ಹಾಕಿಯಿಂದ ನಿವೃತ್ತರಾದ ಖ್ಯಾತ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಹೃದಯಸ್ಪರ್ಶಿ ಪತ್ರವೊಂದನ್ನು ಕಳುಹಿಸಿದ್ದಾರೆ. ಈ ಪತ್ರವನ್ನು ಶ್ರೀಜೇಶ್ ತಮ್ಮ ಅಧಿಕೃತ ಟ್ವಿಟರ್ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಹಾಕಿ ಮೈದಾನದಲ್ಲಿ ಶ್ರೀಜೇಶ್ ಅವರ ಪ್ರಯಾಣವನ್ನು ನೆನಪಿಸಿಕೊಂಡ ಪ್ರಧಾನಿ ಮೋದಿ, ಹೃದಯಸ್ಪರ್ಶಿ ಪತ್ರವನ್ನು ಬರೆಯುವ ಜತೆಗೆ ಜೂನಿಯರ್ ಪುರುಷರ ತಂಡದ ಮುಖ್ಯ ಕೋಚ್ ಸ್ಥಾನವನ್ನು ವಹಿಸಿಕೊಳ್ಳುತ್ತಿರುವ ಶ್ರೀಜೇಶ್‌ಗೆ ಶುಭ ಹಾರೈಸಿದ್ದಾರೆ. ಆಟಗಾರನಾಗಿ ದೇಶಕ್ಕಾಗಿ ನೀವು ನೀಡಿದ ಕೊಡುಗೆ ಅಪಾರ. ನಿಮ್ಮ ಹಾಕಿ ವೃತ್ತಿ ಜೀವನದಲ್ಲಿ ಹಲವು ಸಿಹಿ ಮತ್ತು ಕಹಿಯ ಅನುಭವ ಕಂಡಿದ್ದೀರಿ. ಇದೆಲ್ಲವನ್ನು ಅರಗಿಸಿ ಕೊಳ್ಳಬೇಕು. ಜೂನಿಯರ್ ಪುರುಷರ ತಂಡದ ಮುಖ್ಯ ತರಬೇತುದಾರರಾಗಿ ನಿಮ್ಮ ಹೊಸ ಪಯಣ ಆರಂಭವಾಗಲಿದೆ. ಭಾರತ ತಂಡಕ್ಕೆ ಮತ್ತೊಂದು ಶ್ರೀಜೇಶ್‌ರನ್ನು ನೀಡುತ್ತೀರಿ ಎಂಬ ವಿಶ್ವಾಸ ನನಗಿದೆ. ನಿಮ್ಮ ಸಾಧನೆ ಮುಂದಿನ ಪೀಳಿಗೆಯ ಆಟಗಾರರಿಗೆ ಸ್ಫೂರ್ತಿದಾಯಕವಾಗಿರುತ್ತದೆ ಎಂದು ನನಗೆ ಖಾತ್ರಿಯಿದೆ ಎಂದು ಪ್ರಧಾನಿ ತಮ್ಮ ಪತ್ರದಲ್ಲಿ ಬರೆದಿದ್ದಾರೆ. ನೀವು ನಮ್ಮ ಗೋಲ್ಕೀಪರ್ ಆಗಿ ಮೈದಾನದಲ್ಲಿ ನಿಂತಾಗ, ಭಾರತೀಯ ಅಭಿಮಾನಿಗಳ ಹೃದಯದಲ್ಲಿ ಭರವಸೆಯ ಭಾವನೆ ಇತ್ತು. ಗೆಲುವು ಮತ್ತು ಸೋಲಿನ ನಡುವೆ ನಿಲ್ಲುವ ಗೋಡೆಯಾಗಿದ್ದೀರಿ. ತೀಕ್ಷ್ಣವಾದ ಪ್ರವೃತ್ತಿಗಳು ಮತ್ತು ಒತ್ತಡದಲ್ಲಿ ಶಾಂತವಾದ ನಿಮ್ಮ ಆತ್ಮವಿಶ್ವಾಸವನ್ನು ಮೆಚ್ಚಲೇ ಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಐಸಿಸಿ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕ ಬಿಡುಗಡೆ | 6 ಮತ್ತು 7 ನೇ ಸ್ಥಾನದಲ್ಲಿ ಜೈಸ್ವಾಲ್, ಕೊಹ್ಲಿ

ವಿಶ್ವದ ಟಾಪ್ 5ನೇ ಬ್ಯಾಟರ್; ರೋಹಿಟ್

ಟಾಪ್ 5 ಬ್ಯಾಟರ್‌ಗಳು

- ಜೋ ರೂಟ್-899 ರೇಟಿಂಗ್ ಅಂಕ
- ಕೇನ್ ವಿಲಿಯಮ್ಸನ್-859 ರೇಟಿಂಗ್ ಅಂಕ
- ಡೇರಿಯಲ್ ಮಿಚೆಲ್-768 ರೇಟಿಂಗ್ ಅಂಕ
- ಸ್ಟೀವನ್ ಸ್ಮಿತ್-757 ರೇಟಿಂಗ್ ಅಂಕ
- ರೋಹಿತ್ ಶರ್ಮಾ-751 ರೇಟಿಂಗ್ ಅಂಕ

ದುಬೈ: ಟೀಮ್ ಇಂಡಿಯಾದ ನಾಯಕ ರೋಹಿತ್ ಶರ್ಮ ನೂತನ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ 5ನೇ ಸ್ಥಾನಕ್ಕೇರಿದ್ದಾರೆ. ಈ ಮೂಲಕ ಮೂರು ವರ್ಷಗಳ ಬಳಿಕ ಟಾಪ್ 5ರೊಳಗೆ ಕಾಣಿಸಿಕೊಂಡರು. ರೋಹಿತ್ ಕೊನೆಯ ಬಾರಿಗೆ 5ನೇ ಸ್ಥಾನ ಪಡೆದದ್ದು 2021ರಲ್ಲಿ.

ಬುಧವಾರ ಪ್ರಟಕಗೊಂಡ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ರೋಹಿತ್ ಒಂದು ಸ್ಥಾನದ ಪ್ರಗತಿ ಸಾಧಿಸುವುದರೊಂದಿಗೆ 5ನೇ ಸ್ಥಾನ ಪಡೆದರು. ಮತ್ತೋರ್ವ ಭಾರತ ತಂಡದ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಕೂಡ ಒಂದು ಸ್ಥಾನದ ಜಿಗಿತದೊಂದಿಗೆ 6ನೇ ಸ್ಥಾನ, ವಿರಾಟ್ ಕೊಹ್ಲಿ 7ನೇ ಸ್ಥಾನ ಪಡೆದಿದ್ದಾರೆ. ಒಟ್ಟಾರೆ ಮೂರು ಭಾರತೀಯ ಬ್ಯಾಟರ್‌ಗಳು ಟಾಪ್ 10ನಲ್ಲಿ ಕಾಣಿಸಿಕೊಂಡಿದ್ದಾರೆ.

ಅಗ್ರಸ್ಥಾನದಲ್ಲಿ ಇಂಗ್ಲೆಂಡ್ ತಂಡದ ಅನುಭವಿ ಆಟಗಾರ ಜೋ ರೂಟ್ ಕಾಣಿಸಿಕೊಂಡಿದ್ದಾರೆ. ಅವರು ಲಂಕಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿದ್ದರು. ಆಡಿದ ಮೂರು ಟೆಸ್ಟ್ ಪಂದ್ಯಗಳಿಂದ ಒಟ್ಟು 375 ರನ್ ಕಲೆ ಹಾಕಿದ್ದರು. ಹೀಗಾಗಿ ಅವರು ಅಗ್ರಸ್ಥಾನದಲ್ಲೇ ಮುಂದುವರಿದರು.

ನ್ಯೂಜಿಲ್ಯಾಂಡ್ ತಂಡದ ಕೇನ್ ವಿಲಿಯಮ್ಸನ್(859), ಡೇರಿಯಲ್ ಮಿಚೆಲ್(768), ಆಸ್ಟ್ರೇಲಿಯಾದ ಸ್ಟೀವನ್ ಸ್ಮಿತ್(757) ಕ್ರಮವಾಗಿ 2, 3 ಮತ್ತು 4ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಬಾಂಗ್ಲಾದೇಶ ವಿರುದ್ಧದ ಟೆಸ್ಟ್ ಸರಣಿಗೂ ಮುನ್ನವೇ ರೋಹಿತ್ ಶ್ರೇಯಾಂಕದಲ್ಲಿ ಪ್ರಗತಿ ಸಾಧಿಸಿದ್ದು ಅವರ ಆತ್ಮವಿಶ್ವಾಸ ಇನ್ನಷ್ಟು ಹೆಚ್ಚುವಂತೆ ಮಾಡಿದೆ. ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ರೋಹಿತ್ 2ನೇ ಸ್ಥಾನಿಯಾಗಿದ್ದಾರೆ.

ರೋಹಿತ್ ಮತ್ತು ಜೈಸ್ವಾಲ್ ಈ ವರ್ಷದ ಆರಂಭದಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶನ ತೋರಿದ್ದರು. ಜೈಸ್ವಾಲ್ ಎರಡು ಶತಕ ಮತ್ತು ಮೂರು ಅರ್ಧಶತಕಗಳನ್ನು ಬಾರಿಸಿ 712 ರನ್ ಬಾರಿಸಿದ್ದರು. ರೋಹಿತ್ ಕೂಡ ಎರಡು ಶತಕಗಳನ್ನು ಬಾರಿಸಿ 400 ರನ್‌ಗಳನ್ನು ಕಲೆಹಾಕಿದ್ದರು. ಬಾಂಗ್ಲಾ ಸರಣಿಯಲ್ಲೂ ಉಭಯ ಆಟಗಾರರ ಬ್ಯಾಟಿಂಗ್ ಮೇಲೆ ಭಾರೀ ನಿರೀಕ್ಷೆ ಇರಿಸಲಾಗಿದೆ.

ಬೌಲಿಂಗ್ ಶ್ರೇಯಾಂಕದಲ್ಲಿ ಯಾವುದೇ ದೊಡ್ಡ ಬದಲಾವಣೆ ಸಂಭವಿಸಿಲ್ಲ. ಈ ಹಿಂದಿನಂತೆ ಭಾರತದ ಹಿರಿಯ ಹಾಗೂ ಅನುಭವಿ ಸ್ಪಿನ್ನರ್ ಆರ್.ಅಶ್ವಿನ್ 870 ರೇಟಿಂಗ್ ಅಂಕದೊಂದಿಗೆ ಅಗ್ರಸ್ಥಾನದಲ್ಲೇ ಮುಂದುವರಿದಿದ್ದಾರೆ. ಜಸ್ಪ್ರೀತ್ ಬುಮ್ರಾ 2ನೇ, ರವೀಂದ್ರ ಜಡೇಜಾ 7ನೇ ಸ್ಥಾನ ಪಡೆದಿದ್ದಾರೆ.

ಶ್ರೀಲಂಕಾದಲ್ಲಿ ನಡೆದ ಕಾಮನ್‌ವೆಲ್ತ್ ಚೆಸ್ ಚಾಂಪಿಯನ್ ಶಿಪ್ | 16 ವರ್ಷದೊಳಗಿನ ಆಟದಲ್ಲಿ ಮೊದಲ ಮೂರು ಸ್ಥಾನದಲ್ಲಿ ಭಾರತೀಯರು

ಚೆಸ್: ಶುಭಿಗೆ ಚಿನ್ನ+ಕಂಚು!

ದೆಹಲಿ: ಭಾರತದ ಶುಭಿ ಗುಪ್ತಾ, ಶ್ರೀಲಂಕಾದ ಕಲುತರಾದಲ್ಲಿ ನಡೆದ ಕಾಮನ್ವೆಲ್ತ್ ಚೆಸ್ ಚಾಂಪಿಯನ್‌ಶಿಪ್‌ನ 16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚಿನ್ನದ ಪದಕ ಮತ್ತು 20 ವರ್ಷದೊಳಗಿನವರ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಮಹಿಳಾ ಫಿಡೆ ಮಾಸ್ಟರ್ ಆಗಿರುವ ಶುಭಿ, 19 ವರ್ಷದೊಳಗಿನವರ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ. ಅವರು 16 ವರ್ಷದೊಳಗಿನವರ ವಿಭಾಗದಲ್ಲಿ ಅಜೇಯ ಪ್ರದರ್ಶನ ನೀಡಿ, ಏಳು ಪಂದ್ಯಗಳನ್ನು ಗೆದ್ದು, ಎರಡನ್ನು ಡ್ರಾ ಮಾಡಿಕೊಂಡು ಸಂಭವನೀಯ ಒಂಬತ್ತರಲ್ಲಿ ಎಂಟು ಪಾಯಿಂಟ್ಸ್ ಕಲೆಹಾಕಿದರು. ಭಾರತದ ಇನ್ನಿಬ್ಬರು ಆಟಗಾರ್ತಿಯರಾದ ಮೃತಿಕಾ ಮಲಿಕ್ (7 ಪಾಯಿಂಟ್ಸ್) ಮತ್ತು ಯಶ್ವಿ ಜೈನ್ (6.5) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು. 20 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲೂ ಮೂರನೇ ಸ್ಥಾನ ಗಳಿಸಿದರು. ಉತ್ತರ ಪ್ರದೇಶದ ಗಾಜಿಯಾಬಾದ್‌ನವರಾದ ಶುಭಿ 1ಲಕ್ಷ ರು. ಬಹುಮಾನ ಪಡೆದಿದ್ದಾರೆ. ಈ ಹಿಂದೆ ಅವರು ಕಾಮನ್ವೆಲ್ತ್ ಯೂತ್ ಚಾಂಪಿಯನ್‌ಶಿಪ್‌ನ 12 ವರ್ಷದೊಳಗಿವನವರ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಎರಡು ವರ್ಷಗಳ ಹಿಂದೆ ವಿಶ್ವ ಕೆಡೆಟ್ ಚಾಂಪಿಯನ್‌ಶಿಪ್ ಅನ್ನೂ ಗೆದ್ದುಕೊಂಡಿದ್ದರು. ಓಪನ್ ವಿಭಾಗದಲ್ಲಿ ಭಾರತದ ಎಸ್.ಪಿ.ಸೇತುರಾಮನ್ ಮತ್ತು ಎನ್.ಆರ್.ವಿಘ್ನೇಶ್ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಪಡೆದರು. ಅವರು 9 ಸುತ್ತುಗಳಿಂದ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿದರು.

ಮಂಗಳೂರಿನಲ್ಲಿ ನಡೆಯುತ್ತಿರುವ ಹಿರಿಯರ ಈಜು ಚಾಂಪಿಯನ್‌ಶಿಪ್

13 ವರ್ಷದ ಹಳೆಯ ದಾಖಲೆ ಮುರಿದ ಹಾಷಿಕಾ

ಮಂಗಳೂರು: ಕರ್ನಾಟಕ ಹಾಷಿಕಾ ರಾಮಚಂದ್ರ ಅವರು 77ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಶಿಪ್‌ನ ಮಹಿಳೆಯರ ವಿಭಾಗದ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 4 ನಿಮಿಷ 24 .70 ಸೆಕೆಂಡ್‌ಗಳಲ್ಲಿ ಗುರಿ ತಲುಪುವ ಮೂಲಕ 13 ವರ್ಷ ಹಳೆಯ ದಾಖಲೆಯನ್ನು ಮುರಿದರು.

ಇಲ್ಲಿನ ಎಮ್ಮೆಕೆರೆಯ ಅಂತಾರಾಷ್ಟ್ರೀಯ ಈಜುಕೊಳದಲ್ಲಿ ಮಂಗಳವಾರ ಆರಂಭವಾದ ಚಾಂಪಿಯನ್‌ಶಿಪ್‌ನ ಮೊದಲ ದಿನದ ಸ್ಪರ್ಧೆಗಳಲ್ಲಿ ರಾಜ್ಯದ ಈಜುಪಟುಗಳು ಪಾರಮ್ಯ ಮೆರೆದರು. ಒಟ್ಟು 6 ಚಿನ್ನ ಹಾಗೂ ಮೂರು ಬೆಳ್ಳಿಯ ಪದಕಗಳನ್ನು ಗೆಲ್ಲುವ ಮೂಲಕ ಕರ್ನಾಟಕವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ.

ಪುರುಷರ 400 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ರಾಜ್ಯದ ಅನೀಶ್ ಎಸ್.ಗೌಡ, 100 ಮೀ ಬ್ಯಾಕ್ ಸ್ಟ್ರೋಕ್ ಸ್ಪರ್ಧೆಯಲ್ಲಿ ರಾಜ್ಯದ ಆಕಾಶ್ ಮಣಿ, ಮಹಿಳೆಯರ 200 ಮೀ ಬ್ರೆಸ್ಟ್ ಸ್ಟ್ರೋಕ್ ಸ್ಪರ್ಧೆಯಲ್ಲಿ ರಾಜ್ಯದ ತಾನ್ಯಾ ಷಡಕ್ಷರಿ ಚಿನ್ನದ ಪದಕ ಗೆದ್ದರು. ಪುರುಷರ 4X200 ಮೀ ಫ್ರೀಸ್ಟೈಲ್ ರಿಲೇ ಹಾಗೂ ಮಹಿಳೆಯರ 4X200 ಫ್ರೀಸ್ಟೈಲ್ ರಿಲೇ ಸ್ಪರ್ಧೆಗಳಲ್ಲೂ ಕರ್ನಾಟಕದ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು. ಪುರುಷರ ರಿಲೇ ತಂಡವನ್ನು ಅನೀಶ್ ಎಸ್. ಗೌಡ, ದರ್ಶನ್ ಎಸ್., ಕಾರ್ತಿಕೇಯನ್ ನಾಯರ್, ದಕ್ಷಣ್ ಎಸ್. ಹಾಗೂ ಮಹಿಳೆಯರ ರಿಲೇ ತಂಡವನ್ನು ಶಿರಿನ್, ಶಾಲಿನಿ ಆರ್.ದೀಕ್ಷಿತ್, ನೈಷಾ, ಹಾಷಿಕಾ ರಾಮಚಂದ್ರ ಪ್ರತಿನಿಧಿಸಿದ್ದರು.

ಮೊದಲ ದಿನವೇ ಕೂಟ ದಾಖಲೆ: 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ರಾಜ್ಯದ ಹಾಷಿಕಾ ರಾಮಚಂದ್ರ ಅವರು 2011ರಲ್ಲಿ ರಾಂಚಿಯಲ್ಲಿ ರಿಚಾ ಮಿಶ್ರಾ ಸ್ಥಾಪಿಸಿದ್ದ ಕೂಟ ದಾಖಲೆಯನ್ನು (4 ನಿ. 25.76 ಸೆ) ಅಳಿಸಿ ಹಾಕಿದರು. ಹಾಷಿಕಾ ಅವರಿಗೆ ತೆಲಂಗಾಣದ ವೃತ್ತಿ ಅಗರ್ವಾಲ್ ಅವರು ನಿಕಟ ಪೈಪೋಟಿ (4 ನಿ. 25.09 ಸೆ) ಒಡ್ಡಿದರು. ಎದುರಾಳಿಗಿಂತ 39 ಸೆಕೆಂಡ್ ಮೊದಲೇ ಹಾಶಿಕಾ ಗುರಿ ತಲುಪಿ ದಾಖಲೆ ನಿರ್ಮಿಸಿ ಸಂಭ್ರಮಿಸಿದರು.

ರಾಜ್‌ಕುಮಾರ್ ಹ್ಯಾಟ್ರಿಕ್: ಭಾರತ ಸೆಮಿಫೈನಲ್‌ಗೆ ಲಗ್ಗೆ

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ: ಮಲೇಷ್ಯ ವಿರುದ್ಧದ ಪಂದ್ಯದಲ್ಲಿ ಭಾರತಕ್ಕೆ ಜಯ | ಅಂಕಪಟ್ಟಿಯಲ್ಲಿ ಭಾರತಕ್ಕೆ ಅಗ್ರಸ್ಥಾನ

ಚೀನಾ: ರಾಜ್‌ಕುಮಾರ್ ಪಾಲ್ ಅವರ ಅಮೋಘ ಆಟದ ಬಲದಿಂದ ಭಾರತ ತಂಡವು ಏಷ್ಯನ್ ಚಾಂಪಿ ಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಮಲೇಷ್ಯಾ ವಿರುದ್ಧ 8-1 ಗೋಲುಗಳ ಅಂತರದಿಂದ ಜಯಗಳಿಸಿತು.

ಬುಧವಾರ ಚೀನಾದ ಮೊಕಿಯಲ್ಲಿ ನಡೆದ ಪಂದ್ಯದಲ್ಲಿ ರಾಜ್‌ಕುಮಾರ್ ಪಾಲ್ ಮೂರು, 25 ಮತ್ತು 33ನೇ ನಿಮಿಷದಲ್ಲಿ, ಅರಿಜಿತ್ ಸಿಂಗ್ (6 ಮತ್ತು,39 ನಿಮಿಷ) ಜುಗರಾಜ್ ಸಿಂಗ್ (7 ನಿಮಿಷ) ನಾಯಕ ಹರ್ಮನ್ ಪ್ರೀತ್ ಸಿಂಗ್ (22ನಿಮಿಷ) ಮತ್ತು ಉತ್ತಮ್ ಸಿಂಗ್ (40 ನಿಮಿಷ) ಗೋಲು ಗಳಿಸಿ ಸತತ ಮೂರನೇ ಬಾರಿಗೆ ಭಾರತದ ಗೆಲುವಿಗೆ ನೆರವಾದರು.

ಈ ಗೆಲುವಿನ ಮೂಲಕ 9 ಅಂಕಗಳಿಸಿದ ಭಾರತ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ಇದೇ ಆಟದಲ್ಲಿ ಮಲೇಷ್ಯಾದ ಅಖಿಮುಲ್ಲಾ ಅನೌರ್ (34ನಿಮಿಷ) ಸುದೀರ್ಘ ಗೋಲು ಗಳಿಸಿದರು.

ಈ ಹಿಂದಿನ ಪಂದ್ಯಗಳಲ್ಲಿ ಗೆಲವಿನ ನಗೆ ಚೆಲ್ಲಿದ್ದ ಭಾರತ ಈ ಬಾರಿಯೂ ಆಕ್ರಮಣಕಾರಿಯಾಗಿಯೇ ಆಟ ಆರಂಭಿಸಿತ್ತು. ಪಂದ್ಯ ಆರಂಭವಾದ ಏಳು ನಿಮಿಷಗಳಲ್ಲೇ ಭಾರತ ಮೂರು ಗೋಲು ಗಳಿಸುವ ಮೂಲಕ ಮಲೇಷ್ಯಾವನ್ನು ಹಿಮ್ಮೆಟ್ಟಿಸಿತು.

ಹೊಸ ಪಯಣ ಆರಂಭಿಸಿದ ಅಭಿಮನ್ಯು

ಕಾಶಿನಾಥ್ ಪುತ್ರ ಅಭಿಮನ್ಯ ಕಾಶಿನಾಥ್ ಹೊಸ ಪಯಣ ಆರಂಭಿಸಿದ್ದು, ಎಲ್ಲಿಗೆ ಪಯಣ ಯಾವುದೋ ದಾರಿ ಎನ್ನುತ್ತಿದ್ದಾರೆ. ಹೌದು, ಅಭಿಮನ್ಯು ಎಲ್ಲಿಗೆ ಪಯಣ ಯಾವುದೋ ದಾರಿ ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದು, ಭರ್ಜರಿಯಾಗಿ ತೆರೆಗೆ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಸದ್ದಿಲ್ಲದೆ ಚಿತ್ರೀಕರಣ ಮುಗಿಸಿರುವ ಈ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು, ಪ್ರೇಕ್ಷಕರನ್ನು ಸೆಳೆದಿದೆ. ಟೀಸರ್ ಕೂಡ ವಿಭಿನ್ನವಾಗಿ ಮೂಡಿಬಂದಿದೆ. ನೀಳ ಕೇಶರಾಶಿಯಲ್ಲಿ ಅಭಿಮನ್ಯು ರಗಡ್ ಆಗಿ ಕಾಣಿಸಿಕೊಂಡಿದ್ದಾರೆ, ಶೀರ್ಷಿಕೆ ಹೇಳುವಂತೆ ಇದು ಪಯಣದಲ್ಲಿ ಸಾಗುವ ಥ್ರಿಲ್ಲರ್ ಕಥೆಯನ್ನು ಒಳಗೊಂಡಿದೆ. ಜತೆಗೆ ಲವ್ ಸ್ಟೋರಿಯೂ ಅಡಕವಾಗಿದೆ ಎಂಬುದು ಟೀಸರ್‌ನಲ್ಲಿ ಸ್ಪಷ್ಟವಾಗುತ್ತದೆ.

ಕಿರಣ್.ಎಸ್.ಸೂರ್ಯ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದು, ಈ ಚಿತ್ರದ ಮೂಲಕ ನಿರ್ದೇಶಕರಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ವಿಶೇಷವೆಂದರೆ ಕಿಚ್ಚ ಸುದೀಪ್ ಈ ಸಿನಿಮಾದ ಹಾಡಿಗೆ ದನಿಯಾಗುವ ಮೂಲಕ ಚಿತ್ರಕ್ಕೆ ಹೊಸತನ ತಂದಿದ್ದಾರೆ. ಈ ಹಾಡಿಗೆ ನಿರ್ದೇಶಕ ಕಿರಣ್ ಸಾಹಿತ್ಯ ಬರೆದಿದ್ದಾರೆ. ಸುದರ್ಶನ ಆರ್ಟ್ಸ್ ಬ್ಯಾನರಿನಲ್ಲಿ ಜತಿನ್ ಪಟೇಲ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಅಭಿಮನ್ಯು ಕಾಶಿನಾಥ್‌ಗೆ ನಾಯಕಿಯಾಗಿ ಸ್ಫೂರ್ತಿ ಉಡಿಮನೆ ಬಣ್ಣಹಚ್ಚಿದ್ದಾರೆ. ವಿಜಯಶ್ರೀ ಕಲಬುರ್ಗಿ, ಶೋಭನ್, ಅಯಾಂಕ್, ಪ್ರದೀಪ್, ರವಿತೇಜ, ಕಿಶೋರ್, ಅಶ್ವಿನಿ ರಾವ್, ಪ್ರಿಯಾ ಮುಂತಾ ದವರು ತಾರಾಗಣ ದಲ್ಲಿದ್ದಾರೆ. ಪ್ರಣವ್ ರಾವ್ ಸಂಗೀತ ನಿರ್ದೇಶನ, ಸತ್ಯ ರಾಮ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸ ಮುಗಿಸಿರುವ ಎಲ್ಲಿಗೆ ಪಯಣ ಯಾವುದೋ ದಾರಿ ತೆರೆಗೆ ಸಿದ್ಧವಾಗಿದೆ.

ಈ ಬಾರಿಯೂ ಬಿಗ್ ಬಾಸ್ ಗೆ ಸುದೀಪ್ ಸಾರಥ್ಯ

ಕನ್ನಡದ ಬಿಗ್ ಬಾಸ್ ಸೀಸನ್ ಹನ್ನೊಂದಕ್ಕೆ ದಿನಗಣನೆ ಆರಂಭವಾಗಿದೆ. ಈಗಾಗಲೇ ಪ್ರೊಮೊ ಕೂಡ ಬಿಡುಗಡೆಯಾಗಿದ್ದು, ಗಮನಸೆಳೆಯುತ್ತಿದೆ. ಕಿಚ್ಚ ಸುದೀಪ್ ಈ ಬಾರಿಯ ಬಿಗ್ ಬಾಸ್ ಶೋ ನಡೆಸಿಕೊಡುವುದಿಲ್ಲವೆ ಎಂಬ ಪ್ರಶ್ನೆಯೂ ಕಾಡುತ್ತಿದೆ. ಸುದೀಪ್ ಇಲ್ಲದೆ ಈ ಕಾರ್ಯಕ್ರಮ ನೀರಸ ಎನ್ನಿಸಬಹುದು. ಸುದೀಪ್ ಬದಲಿಯಾಗಿ ಬಿಗ್‌ಬಾಸ್ ಸಾರಥ್ಯ ವಹಿಸಿಕೊಳ್ಳುವವರು ಯಾರು ಎಂಬ ಕುತೂಹಲವೂ ಇದೆ. ಈ ನಡುವೆ ರಮೇಶ್ ಅರವಿಂದ್ ಅವರ ಹೆಸರೂ ಕೇಳಿಬರುತ್ತಿದೆ. ರಮೇಶ್ ಈಗಾಗಲೇ ಬಿಗ್‌ಬಾಸ್ ಕಾರ್ಯಕ್ರಮ ನಡೆಸಿಕೊಡುವುದಿಲ್ಲ, ನನ್ನ ಕಾರ್ಯಕ್ರಮದ ಪ್ಯಾಟ್ರನ್ ಬೇರೆ ಎಂದಿದ್ದಾರೆ. ಆ ಬಳಿಕ ನಟ ಗಣೇಶ್ ಹೆಸರೂ ಕೂಡ ಮುಂಚೂಣಿಗೆ ಬಂದಿದೆ. ಯಾಕೆಂದರೆ ಗಣೇಶ್ ಕೂಡ ಮಾತುಗಾರ, ಈ ಹಿಂದೆ ಗೋಲ್ಡನ್ ಟೈಮ್ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದರು. ಹಾಗಾಗಿ ಗಣೇಶ್, ಬಿಗ್‌ಬಾಸ್ ನಡೆಸಿಕೊಡಬಹುದಾ ಎಂಬ ಕಾತರತೆಯೂ ಇದೆ. ಇದರ ಜತೆಗೆ ರಿಷಬ್ ಶೆಟ್ಟಿ ಬಿಗ್‌ಬಾಸ್ ಹೊಣೆ ಹೊರಬಹುದು ಎನ್ನಲಾಗುತ್ತಿದೆ. ಆದರೆ ರಿಷಬ್ ಕಾಂತಾರ 2 ಚಿತ್ರದಲ್ಲಿ ಬ್ಯುಸಿಯಾಗಿದ್ದು ರಿಯಾಲಿಟಿ ಶೋನತ್ತ ಮುಖ ಮಾಡುವುದು ದೂರದ ಮಾತಾಗಿದೆ.

ಹಾಗಾದರೆ ಈ ಬಾರಿ ಬಿಗ್‌ಬಾಸ್ ನಿರೂಪಕರು ಯಾರು ಎಂಬ ಪ್ರಶ್ನೆ ಹಾಗೆಯೇ ಉಳಿದುಕೊಂಡಿದೆ. ಈ ನಡುವೆ ಅದಕ್ಕೆ ಉತ್ತರವೂ ಸಿಕ್ಕಿದೆ. ಈ ಬಾರಿಯೂ ಕಿಚ್ಚ ಸುದೀಪ್ ಅವರೇ ಬಿಗ್‌ಬಾಸ್ ನಡೆಸಿಕೊಡಲಿದ್ದಾರೆ. ಕಳೆದ ಹತ್ತು ಸೀಸನ್‌ಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ. ಅಂತೆಯೇ ಈ ಬಾರಿಯೂ ಅವರೇ ಸಾರಥ್ಯ ವಹಿಸಲಿದ್ದಾರೆ ಎಂಬುದು ಬಹುತೇಕ ಖಾತ್ರಿಯಾಗಿದೆ. ಈಗಾಗಲೇ ಬಿಡುಗಡೆಯಾಗಿರುವ ಪ್ರೊಮೊದಲ್ಲಿ ಹಿನ್ನೆಲೆ ದನಿ ಇದೆ ಹೊರತು ಹೊಸ ನಿರೂಪಕರ ಬಗ್ಗೆ ಎಲ್ಲಿಯೂ ತೋರಿಸಿಲ್ಲ. ಅಂದರೆ ಸುದೀಪ್ ಅವರೇ ಬಿಗ್‌ಬಾಸ್ ಕಾರ್ಯಕ್ರಮವನ್ನು ನಡೆಸುಕೊಡಲಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಈ ಬಗ್ಗೆ ಇನ್ನೇನು ಅಧಿಕೃತವಾಗಿ ಘೋಷಣೆಯಾಗಲಿದೆ. ತಮಿಳಿನಲ್ಲಿ ಕಮಲ್ ಹಾಸನ್ ಬಿಗ್‌ಬಾಸ್ ನಡೆಸಿಕೊಡುತ್ತಿದ್ದರು, ಈಗ ಅದರ ಜವಾಬ್ದಾರಿ ವಿಜಯ್ ಸೇತುಪತಿ ಅವರದಾಗಿದೆ. ಆದರೆ ಕನ್ನಡದಲ್ಲಿ ಬದಲಾವಣೆ ಸದ್ಯಕ್ಕಿಲ್ಲ ಎನ್ನುವುದು ಖಾತ್ರಿಯಾಗಿದೆ.

ಸದ್ಯಕ್ಕಿಲ್ಲ ಪದ್ಮಾವತಿ ಕಲ್ಯಾಣ

ನಟಿ ರಮ್ಯಾ ಮದುವೆ ಯಾವಾಗ ಎಂಬ ಕುತೂಹಲ ಎಲ್ಲರಲ್ಲಿಯೂ ಇದೆ. ರಮ್ಯಾ ಮದುವೆ ಅಂದಾಕ್ಷಣ, ತಮ್ಮ ನೆಚ್ಚಿನ ನಟಿ ಯಾರನ್ನು ವರಿಸುತ್ತಾರೆ, ವಿವಾಹ ಯಾವಾಗ ಈ ಪ್ರಶ್ನೆಗಳು ಸಹಜವಾಗಿಯೇ ಕಾಡುತ್ತವೆ.

ಹೀಗಿರುವಾಗಲೇ ರಮ್ಯಾ ಮದುವೆ ಅಂತ ಸೋಷಿಯಲ್ ಮೀಡಿಯಾದಲ್ಲಿ ಗಾಸಿಪ್ ಹರಿದಾಡಿತ್ತು. ಇದಕ್ಕೆ ರಮ್ಯಾ ಸ್ಪಷ್ಟನೆ ನೀಡಿದ್ದಾರೆ. ನನ್ನ ಮದುವೆಯ ಬಗ್ಗೆ ಹರಿದಾಡುತ್ತಿರುವ ವದಂತಿಗಳು ಸುಳ್ಳು, ಇದನ್ನು ನಂಬಬೇಡಿ. ನನ್ನ ಮದುವೆ ಯಾವಾಗ ಮತ್ತು ಯಾರನ್ನು ವರಿಸುತ್ತೇನೆ ಎಂಬುದನ್ನು ನಾನೇ ತಿಳಿಸುತ್ತೇನೆ. ಉಳಿದಂತೆ ಯಾವ ಸುದ್ದಿಗಳನ್ನು ನಂಬಬೇಡಿ ಎಂದಿದ್ದಾರೆ ರಮ್ಯಾ. ಇದರಿಂದ ಪದ್ಮಾವತಿ ಕಲ್ಯಾಣ ಸದ್ಯಕ್ಕಿಲ್ಲ ಎಂಬುದು ಖಾತ್ರಿಯಾಗಿದೆ.

ಸಿಂಹರೂಪಿಣಿಯ ಮಧುರಗಾನ

ಮಾರಮ್ಮ ದೇವಿ ಕುರಿತ ಭಕ್ತಿಪ್ರಧಾನ ಚಿತ್ರ ಸಿಂಹರೂಪಿಣಿ ಚಿತ್ರೀಕರಣ ಮುಗಿಸಿದ್ದು ಡಬ್ಬಿಂಗ್ ನಲ್ಲಿ ಬ್ಯುಸಿಯಾಗಿದೆ. ಕೆ. ಎಂ.ನಂಜುಂಡೇಶ್ವರ ಕಥೆ ಬರೆದು ಶ್ರೀಚಕ್ರ ಫಿಲಂಸ್ ಲಾಂಛನದಲ್ಲಿ ನಿರ್ಮಾಣ ಮಾಡುತ್ತಿದ್ದಾರೆ. ಕಿನ್ನಾಳ್‌ರಾಜ್ ಚಿತ್ರಕಥೆ, ಸಾಹಿತ್ಯ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದ ಮಾ ರುದ್ರಯಾ ರುದ್ರಾಣಿ... ಶ್ರೀಮಹಾಲಕ್ಷ್ಮೀ ಮಾಂಕಾಳಿ.. ಭಕ್ತಿಪ್ರಧಾನ ಹಾಡು ಬಿಡುಗಡೆಯಾಗಿದೆ. ಚಂದನ್ ಶೆಟ್ಟಿ ಈ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ರವಿಬಸ್ರೂರು, ಸಂತೋಷ್ ವೆಂಕಿ ಮತ್ತು ಸಂಗೀತ ಆಕಾಶ್ ಪರ್ವ ಈ ಹಾಡಿಗೆ ದನಿಯಾಗಿರುವುದು ವಿಶೇಷ.

ಮಾರಮ್ಮನ ಪಾತ್ರದಲ್ಲಿ ಯಶಸ್ವಿನಿ ಕಾಣಿಸಿಕೊಂಡಿದ್ದಾರೆ. ಅಂಕಿತಾಗೌಡ ನಾಯಕಿಯಾಗಿ ನಟಿಸಿದ್ದು, ಯಶ್‌ಶೆಟ್ಟಿ, ಪುನೀತ್ ರುದ್ರನಾಗ್, ದಿವ್ಯಾ ಆಲೂರು, ಹಿರಿಯ ನಟ ಸುಮನ್, ಹರೀಶ್ ರಾಯ್, ನೀನಾಸಂ ಅಶ್ವಥ್, ತಬಲಾ ನಾಣಿ, ದಿನೇಶ್ ಮಂಗಳೂರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಭಜರಂಗಿ ಪ್ರಸನ್ನ, ಸಾಗರ್, ವಿಜಯ್ ಚೆಂಡೂರು, ವರ್ಧನ್ ತೀರ್ಥಹಳ್ಳಿ, ಮನಮೋಹನ ರೈ, ನವಾಜ್, ಲೋಹಿತ್, ಪಿಳ್ಳಪ್ಪ, ಉಮೇಶಣ್ಣ, ವಿಜಯ್ ಬಸ್ರೂರು, ಸುನಂದಾ ಕಲ್ಬುರ್ಗಿ, ವೇದಾಹಾಸನ್, ರಾಧಾ ರಾಮಚಂದ್ರ, ಗುರುಮೂರ್ತಿ ತಾರಾಗಣದಲ್ಲಿದ್ದಾರೆ.

ನೈಜ ಘಟನೆಯ ಚಾಕ್ನ

ನೈಜ ಘಟನೆಗಳನ್ನು ಆಧರಿಸಿ ಸಿದ್ಧವಾಗಿರು ಚಾಕ್ನ ಸೆಟ್ಟೇರಿದ್ದು ಇನ್ನೇನು ಚಿತ್ರೀಕರಣಕ್ಕೆ ಹೊರಡಲು ಸಿದ್ಧವಾಗಿದೆ. ತಮಿಳು ಚಿತ್ರರಂಗದಲ್ಲಿ ನಿರ್ದೇಶಕನಾಗಿ ಗುರುತಿಸಿಕೊಂಡಿರುವ ಕನ್ನಡಿಗ ಕೆ.ಪಳನಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಜೀವನದಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡಿದರೆ ನಮಗೂ ಒಳ್ಳೆಯದೇ ಆಗುತ್ತದೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗುತ್ತಿದೆ. ಸದ್ಯ ಚಿತ್ರದ ಫಸ್ಟ್ ಲುಕ್ ಹಾಗೂ ಪೋಸ್ಟರ್ ಬಿಡುಗಡೆಯಾಗಿದೆ.

ಕಾಕ್ರೋಚ್ ಸುಧಿ, ಗಿರಿ, ಮಧುಶ್ರೀ ಕಾಲ್ಮಟ್, ಶ್ರೀಕುಮಾರ್, ಸುರೇಶ್‌ಬಾಬು, ಸತ್ಯನ್, ವೈ.ವಿ.ಕೃಷ್ಣಪ್ಪ, ವೆಂಕಟೇಶ್, ಮೂರ್ತಿ ಭೀಮರಾಜನ್, ರವಿ, ಸುನಿಲ್‌ಕುಮಾರ್, ಕರ್ಣಪ್ರಭು, ವೇಣುಗೋಪಾಲ್, ಮುನಿಸ್ವಾಮಿ, ಅಣ್ಣಾದೊರೈ, ಮೋಹನ್, ವಿಜಯ್ ಜಗ್ಗಿ, ಎಸ್.ವೇಲು, ಗಂಗ, ಸುಧಾ, ಮಮತಾ, ಸುನಿತಾ, ಇಂದ್ರ ಮುಂತಾದವರು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಆರ್.ಆರ್.ಕಂಬೈನ್‌ನಲ್ಲಿ ವಿಮಲಾ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಸಂಗೀತ ಕಲ್ಕಿ ಅಭಿಷೇಕ್, ಛಾಯಾಗ್ರಹಣ ರಣಧೀರ ನಾಯಕ್, ಸಂಭಾಷಣೆ ರಾಘವ್ ಮಹರ್ಷಿ, ನೃತ್ಯ ಆಕಾಶ್ ಶೇಷಾದ್ರಿ, ಸಾಹಿತ್ಯ ಕವಿಕುಮಾರ್ ಅವರದಾಗಿದೆ. ಸದ್ಯದಲ್ಲಿಯೇ ಚಿತ್ರೀಕರಣ ಆರಂಭವಾಗಲಿದೆ.

ಆರು ತಿಂಗಳ ಹಿಂದೆ ಪಾಂಡಿಚೇರಿಯಲ್ಲಿ ನಡೆದ ಘಟನೆ ಹಾಗೂ ನಾನು ಕಣ್ಣಾರೆ ಕಂಡಂತಹ ಕಟುಸತ್ಯಗಳನ್ನು ಆಯ್ಕೆ ಮಾಡಿಕೊಂಡು ಅದನ್ನು ಚಿತ್ರರೂಪಕ್ಕೆ ತರುತ್ತಿದ್ದೇನೆ. ಮಾದ್ಕ ವ್ಯವಸನಿ, ಮದ್ಯ ವ್ಯಸನಿ, ಕುಡುಕ, ಕಳ್ಳ, ಅತ್ಯಾಚಾರಿ ಹೀಗೆ ನಾಲ್ಕು ನಕರಾತ್ಮಕ ಪಾತ್ರಗಳು ಒಂದಡೆ ಸೇರಿದರೆ ಏನಾಗುತ್ತದೆ. ಚಾಕ್ನ ಅಂಗಡಿ ಮಾಲೀಕನ ಕುಟುಂಬದಲ್ಲಿ ನಡೆಯುವ ಸನ್ನಿವೇಶಗಳು ಇವೆಲ್ಲವೂ ಚಿತ್ರದಲ್ಲಿ ಬೆರೆತಿವೆ. ರಾ ಸ್ಟೈಲ್ ನಲ್ಲಿ ಚಿತ್ರವನ್ನು ಕಟ್ಟಿಕೊಡಲಾಗುತ್ತದೆ.

– ಕೆ.ಪಳನಿ ನಿರ್ದೇಶಕ

ಹಾಡಿ ಕುಣಿದ ವೆಟ್ಟೈಯಾನ್‌ನ

ರಜನಿಕಾಂತ್ ನಟನೆಯ ಬಹುನಿರೀಕ್ಷಿತ ಚಿತ್ರ ವೆಟ್ಟೈಯಾನ್ ಬಿಡುಗಡೆ ಸಿದ್ಧವಾಗಿದೆ. ಅಕ್ಟೋಬರ್ 10ರಂದು ಪಂಚ ಭಾಷೆಗಳಲ್ಲಿಯೂ ವೆಟ್ಟೈಯಾನ್ ದರ್ಶನವಾಗಲಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿರುವ ವೆಟ್ಟೈಯಾನ್ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಮನಸಿಲಾಯೋ.. ಎಂಬ ಗೀತೆ ಇದಾಗಿದ್ದು, ತಮಿಳು ಹಾಗೂ ತೆಲುಗು ಭಾಷೆಯಲ್ಲಿ ರಿಲೀಸ್ ಆಗಿದೆ. ಕಲರ್ ಫುಲ್ ಸೆಟ್‌ನಲ್ಲಿ ತಲೈವಾ ಜತೆಗೆ ಮಂಜು ವಾರಿಯರ್ ಭರ್ಜರಿಯಾಗಿ ಕುಣಿದು ಕುಪ್ಪಳಿಸಿದ್ದಾರೆ. ಅನಿರುದ್ಧ್ ರವಿಚಂದರ್ ಈ ಹಾಡಿಗೆ ಅದ್ಭುತ ಸಂಗೀತದ ಸ್ಪರ್ಶ ನೀಡಿದ್ದಾರೆ.

ಸೂರ್ಯ ನಟಿಸಿದ ಜೈ ಭೀಮ್ ಸಿನಿಮಾ ನಿರ್ದೇಶಿಸಿದ್ದ ಟಿ.ಜೆ. ಜ್ಞಾನವೇಲ್, ವೆಟ್ಟೈಯಾನ್ ಚಿತ್ರವನ್ನು ನಿರ್ದೇಶಿಸಿದ್ದಾರೆ. ರಜನಿಕಾಂತ್ ಜತೆಗೆ ಅಮಿತಾಬ್ ಬಚ್ಚನ್ ಕೂಡ ಅಭಿನಯಿಸಿರುವುದು ಈ ಚಿತ್ರದ ನಿರೀಕ್ಷೆ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ಬಿಗ್ ಬಿ ಹಾಗೂ ತಲೈವಾ ಮೂರು ದಶಕದ ಬಳಿಕ ಒಟ್ಟಾಗಿ ನಟಿಸುತ್ತಿದ್ದಾರೆ. ರಾಣಾ ದಗ್ಗುಬಾಟಿ, ಫಹಾದ್ ಫಾಸಿಲ್, ರಿತಿಕಾ ಸಿಂಗ್, ವಿಜಯನ್, ರೋಹಿಣಿ, ಅಭಿರಾಮಿ, ರಾವ್ ರಮೇಶ್, ರಮೇಶ್ ತಿಲಕ್, ರಕ್ಷಣ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಲೈಕಾ ಪ್ರೊಡಕ್ಷನ್ಸ್‌ನಲ್ಲಿ ವೆಟ್ಟೈಯಾನ್ ನಿರ್ಮಾಣವಾಗಿದೆ.